هَلۡ جَزَاءُ الۡاِحۡسَانِ اِلَّا الۡاِحۡسَانُ

# ಆಂಗ್ಲೇಯ ಸರಕಾರ

# ಮತ್ತು

# ಜಿಹಾದ್




ಗ್ರಂಥಕರ್ತ:

**ಹಝ್ರತ್ ಮಿರ್ಝಾ ಗ್ಖುಲಾಂ ಅಹ್ಮದ್(ಅ)**



ಪ್ರಕಾಶಕರು:

**ನಝಾರತ್ ನಶ್ರೊ ಇಶಾಅತ್,**

ಭಾರತ

# ಆಂಗ್ಲೇಯ ಸರಕಾರ ಮತ್ತು ಜಿಹಾದ್

*

ಗ್ರಂಥಕರ್ತ:

**ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್**(ಅ)

*

ಅನುವಾದಕ:

**ಎಂ. ಉಬೈದುಲ್ಲಾಹ್**

*

ಪ್ರಕಾಶಕರು:

**ನಝಾ಼ರತ್ ನಶ್ರೊ ಇಶಾಅತ್,**

ಭಾರತ

**Aangleya Sarkara matthu Jihad**

Kannada rendering of Urdu work:

**گورنمنٹ انگریزی اور جہاد**

***'Government Angreizi aur Jihad'***


| | |
|---|---|
| Author : | Hazrat Mirza Ghulam Ahmad(a) |
| Translated by : | M. Ubeidullah, M.A., L.L.B. |
| Reviewed by : | Muhammad Yusuf, Mangalore., Moulavi Inamullah Mangaluru. |
| Typing & Setting | U. Basheer Ahmad, Manjeshwar ., Inamullah Mangaluru. |
| Published by : | Nazarat Nashro - Isha'at, Qadian, Distt. Gurdaspur, Punjab -143516 |
| First Edition : | 2025 |
| Copies : | 300 |
| Printed at : | Fazl-e-Umar Printing Press, Qadian |



ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮ್

ವಾಗ್ದತ್ತ ಮಹ್‌ದೀ ಮತ್ತು ಮಸೀಹ್

# ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)

ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯಾಗಿ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮ್ ಕ್ರಿಸ್ತಶಕ 1835ರಲ್ಲಿ ಭಾರತದ ಪಂಜಾಬಿನ ಒಂದು ಗ್ರಾಮವಾದ ಖಾದಿಯಾನಿನಲ್ಲಿ ಜನಿಸಿದರು. ಅವರು ಆರಂಭ ಕಾಲದಿಂದಲೇ ಅಲ್ಲಾಹನ ಆರಾಧನೆ, ಪ್ರಾರ್ಥನೆಗಳಲ್ಲೂ ಪವಿತ್ರ ಖುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿಯೂ ಮಗ್ನರಾಗಿದ್ದರು. ಆ ಕಾಲದಲ್ಲಿ ಇಸ್ಲಾಮ್ ಧರ್ಮ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣಗಳಿಗೆ ಗುರಿಯಾಗಿತ್ತು. ಇಸ್ಲಾಮ್ ಧರ್ಮದ ಶೋಚನೀಯ ಸ್ಥಿತಿಯನ್ನು ಕಂಡು ಅವರಿಗೆ ತೀವ್ರವಾಗಿ ದುಃಖವಾಗುತ್ತಿತ್ತು. ಇಸ್ಲಾಮ್ ಧರ್ಮದ ವಿರುದ್ಧ ಅನ್ಯ ಧರ್ಮದವರ ಆಕ್ರಮಣಗಳನ್ನು ಪ್ರತಿರೋಧಿಸಲು ಮತ್ತು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅವುಗಳ ವಾಸ್ತವಿಕ ರೂಪದಲ್ಲಿ ಲೋಕದ ಮುಂದೆ ಪ್ರಕಟಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 90ಕ್ಕಿಂತ ಹೆಚ್ಚು ಗ್ರಂಥಗಳನ್ನು ಮತ್ತು ಸಾವಿರಾರು ಪತ್ರಗಳನ್ನು ಬರೆದರು ಹಾಗು ಅನೇಕ ಧಾರ್ಮಿಕ ಸಂವಾದಗಳಲ್ಲಿ ಅನ್ಯಧರ್ಮದವರನ್ನು ಎದುರಿಸಿದರು. ಸೃಷ್ಟಿಕರ್ತನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಮನುಷ್ಯರಿಗೆ ದೊರಕಿಸಿಕೊಡಬಲ್ಲ ಜೀವಂತ ಧರ್ಮ ಇಸ್ಲಾಮ್ ಎಂದೂ ಆ ಧರ್ಮವನ್ನು ಅನುಸರಿಸುವ ಮೂಲಕ ಮನುಷ್ಯನಿಗೆ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ ಲಭಿಸುವುದು ಎಂದೂ ಅವರು ಪ್ರತಿಪಾದಿಸಿದರು.

ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸತ್ಯ ಸ್ವಪ್ನಗಳ, ದಿವ್ಯದರ್ಶನಗಳ ಮತ್ತು ದೈವಿಕ ಸಂಬೋಧನೆಗಳ ಭಾಗ್ಯ ಲಭಿಸಿತ್ತು. 1889ರಲ್ಲಿ ದೈವಿಕ ನಿರ್ದೇಶನದ ಪ್ರಕಾರ ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಜಮಾಅತನ್ನು ಸ್ಥಾಪಿಸಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲು ಪ್ರಾರಂಭಿಸಿದರು. ದಿನ ಕಳೆದಂತೆ ಅವರಿಗೆ ದೈವಿಕ ಸಂಬೋಧನೆಗಳು ಸಹ ವರ್ಧಿಸುತ್ತಾ ಇದ್ದುವು. ಲೋಕದ ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳಲ್ಲಿ ಭವಿಷ್ಯ ನುಡಿಯಲಾದ ಅಂತಿಮ ಕಾಲಘಟ್ಟದ ಧರ್ಮಸುಧಾರಕ ನಾನೇ ಆಗಿರುವೆನು ಎಂದು ಅವರು ದೇವಾಜ್ಞೆ ಪ್ರಕಾರ ಘೋಷಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವರೆಂದು ಶುಭವಾರ್ತೆ ನೀಡಿದ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಸಹ ತಾನೆಂದು ಅವರು ವಾದಿಸಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ ಲೋಕದ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

1908ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಪವಿತ್ರ ಖುರ್‌ಆನಿನ ಆದೇಶಗಳ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳ ಪ್ರಕಾರ ಅವರ ಆಗಮನೋದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸಲು ಖಿಲಾಫತ್ ವ್ಯವಸ್ಥೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೇ ಖಲೀಫರಾಗಿರುವರು.

# ಪ್ರಕಾಶಕರ ನುಡಿ

**‘ಆಂಗ್ಲೇಯ ಸರಕಾರ ಮತ್ತು ಜಿಹಾದ್’** ಎಂಬುದು ಅಹ್ಮದಿಯಾ ಜಮಾಅತಿನ ಸ್ಥಾಪಕರು ಮತ್ತು ವಾಗ್ದತ್ತ ಮಸೀಹರು ಆಗಿರುವ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್(ಅ) ಬರೆದ ಉರ್ದು ಪುಸ್ತಕದ ಕನ್ನಡ ಅನುವಾದವಾಗಿದೆ. ಇಸ್ಲಾಮಿನಲ್ಲಿ ಜಿಹಾದ್ ಎಂಬುದರ ನಿಜವಾದ ಅರ್ಥವೇನೆಂದು ಪವಿತ್ರ ಖುರ್‌ಆನಿನ ಮತ್ತು ಪ್ರವಾದಿ ವಚನಗಳ ಬೆಳಕಿನಲ್ಲಿ ಅವರು ಈ ಕಿರುಹೊತ್ತಿಗೆಯಲ್ಲಿ ವಿವರಿಸಿರುವರು. ಜಿಹಾದಿನ ಹೆಸರಿನಲ್ಲಿ ಅಮಾಯಕರನ್ನು ಕೊಲ್ಲುವ ಹೀನಾಯ ಕೆಲಸವನ್ನು ಅವರು ಇದರಲ್ಲಿ ಖಂಡಿಸುತ್ತಾರೆ. ಇಸ್ಲಾಂ ಧರ್ಮ ಶಾಂತಿ ಪ್ರತಿಪಾದಿಸುವ ಧರ್ಮವೆಂದೂ ಹದಿಮೂರು ವರ್ಷಗಳ ಕಷ್ಟತೆಗಳನ್ನು ಸಹಿಸಿದ ನಂತರ ಮುಸ್ಲಿಮರು ಪ್ರತಿರೋಧಕ ಯುದ್ಧವನ್ನು ಮನಸ್ಸಾಕ್ಷಿ ಸ್ವಾತಂತ್ರ್ಯಕ್ಕಾಗಿ ಮತ್ತು ದುಷ್ಟರ ಕೈಯನ್ನು ದೌರ್ಜನ್ಯದಿಂದ ತಡೆಯಲು ಮಾಡಿದ್ದರು ಎಂದೂ ಅವರು ಇದರಲ್ಲಿ ಸೂಚಿಸುತ್ತಾರೆ.

ಈ ಪುಸ್ತಕದ ಕನ್ನಡ ಅನುವಾದವನ್ನು ಬಹಳ ಪರಿಶ್ರಮದಿಂದ ಸನ್ಮಾನ್ಯ ಎಂ. ಉಬೈದುಲ್ಲಾಹ್ ಸಾಹಿಬ್ ಮಾಡಿರುವರು. ಸನ್ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್ ಮತ್ತು ಮೌಲವಿ ಇನಾಮುಲ್ಲಾಹ್ ಸಾಹಿಬ್ ಈ ತರ್ಜುಮೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಅಗತ್ಯವಾದ ತಿದ್ದುಪಡಿಯನ್ನು ಮಾಡಿದ್ದಾರೆ. ಸನ್ಮಾನ್ಯ ಮಡಿಕೇರಿಯ ಗ಼ುಲಾಂ ಅಹ್ಮದ್ ಸಾಹಿಬ್ ಸಹ ಅದನ್ನು ಓದಿ ಅನುವಾದದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿರುವರು. ಎಲ್ಲರಿಗೂ ಅಲ್ಲಾಹನು ತಕ್ಕುದಾದ ಪ್ರತಿಫಲವನ್ನು ನೀಡಲಿ ಹಾಗೂ ಜಿಹಾದಿನ ನೈಜ ತಾತ್ಪರ್ಯ ಏನೆಂದು ಈ ಕಿರುಪುಸ್ತಕದ ಅಧ್ಯಯನದ ಮೂಲಕ ಓದುಗರಿಗೆ ಮನವರಿಕೆಯಾಗಲಿ. ಆಮೀನ್.

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಆಂಗ್ಲೇಯ ಸರಕಾರ ಮತ್ತು ಜಿಹಾದ್

ಜಿಹಾದಿನ ತತ್ವ ಮತ್ತು ಅದರ ವಾಸ್ತವಿಕ ರೂಪವನ್ನು ಅರ್ಥ ಮಾಡಿಕೊಳ್ಳಲು ಕಷ್ಟಕರವೂ ಸೂಕ್ಷ್ಮವೂ ಆಗಿದೆ. ಅದನ್ನು ಮನವರಿಕೆ ಮಾಡದ ಕಾರಣದಿಂದ ಈ ಕಾಲಘಟ್ಟದ ಮತ್ತು ಮಧ್ಯಕಾಲೀನ ಯುಗದ ಜನರು ಬಹಳಷ್ಟು ತಪ್ಪುಗಳನ್ನು ಮಾಡಿರುವರು. ಈ ಅಪಾಯಕರ ತಪ್ಪುಗಳ ಕಾರಣದಿಂದ ಪ್ರಕೃತಿ ನಿಯಮಗಳ ಪ್ರತಿಬಿಂಬವೂ ಜೀವಂತ ದೇವನ ಪ್ರತಾಪವನ್ನು ಪ್ರಕಟಿಸುವಂತಹದ್ದೂ ಆಗಿರುವ ಪರಿಶುದ್ಧ ಇಸ್ಲಾಮ್ ಧರ್ಮವನ್ನು ಆಕ್ಷೇಪಿಸಲು ಇಸ್ಲಾಮಿನ ವಿರೋಧಿಗಳಿಗೆ ಸಂದರ್ಭ ಲಭಿಸಿತು ಎಂದು ನಾವು ಅತ್ಯಂತ ನಾಚಿಕೆಯಿಂದ ಅಂಗೀಕರಿಸಬೇಕಾಗುತ್ತದೆ.

ಜಿಹಾದ್ ಎಂಬ ಅರಬಿ ಪದ **'ಜುಹ್‌ದ್'** ಎಂಬ ಮೂಲ ಶಬ್ದದಿಂದ ವ್ಯುತ್ಪತ್ತಿಯಾಗಿದೆ. ಅದರ ಅರ್ಥ ಪ್ರಯತ್ನ ಮಾಡುವುದು ಎಂದಾಗಿದೆ. ಈ ಶಬ್ದವು ಆಲಂಕಾರಿಕವಾಗಿ ಧಾರ್ಮಿಕ ಯುದ್ಧಗಳಿಗೆ ಬಳಸಲಾಯಿತು. ಯುದ್ಧ ಎಂದು ಹಿಂದುಗಳು ಬಳಸುವ ಪದ ವಾಸ್ತವಿಕವಾಗಿ ಜಿಹಾದ್ ಶಬ್ದದ ಅಪಭ್ರಂಶ ರೂಪವಾಗಿದೆ. ಅರಬಿ ಭಾಷೆ ಎಲ್ಲ ಭಾಷೆಗಳ ಮಾತೆಯಾಗಿದೆ. ಎಲ್ಲ ಭಾಷೆಗಳು ಆ ಭಾಷೆಯಿಂದ ಉದ್ಭವಿಸಿವೆ. ಆದ್ದರಿಂದ ಸಂಸ್ಕೃತ ಭಾಷೆಯಲ್ಲಿ ಹೋರಾಟವನ್ನು ಸೂಚಿಸಲು ಬಳಸಲಾಗುವ ಯುದ್ಧ ಎಂಬ ಪದವು ಜುಹ್‌ದ್ ಅಥವಾ ಜಿಹಾದ್ ಪದದ ಮಾರ್ಪಾಟುಗೊಂಡ ರೂಪವೇ ಆಗಿದೆ. 'ಜ' ಅಕ್ಷರದ ಬದಲಿಗೆ 'ಯ' ಅಕ್ಷರವನ್ನು ಬಳಸಿ ಅನಂತರ ಸ್ವಲ್ಪ ವ್ಯತ್ಯಾಸಗೊಳಿಸಿ ಒತ್ತಕ್ಷರ ಉಪಯೋಗಿಸಿ ಪದವನ್ನು ಬಳಸಲಾಯಿತು.

ಇಸ್ಲಾಮ್ ಧರ್ಮಕ್ಕೆ ಜಿಹಾದ್ ಮಾಡುವ ಆವಶ್ಯಕತೆ ಏಕೆ ಉಂಟಾಯಿತು? ಜಿಹಾದ್ ಎಂದರೇನು? ಎಂಬೀ ಪ್ರಶ್ನೆಗಳಿಗೆ ಉತ್ತರ ಬರೆಯಲು ನಾವೀಗ ಬಯಸುತ್ತೇವೆ. ಇಸ್ಲಾಮ್ ಧರ್ಮಕ್ಕೆ ಪ್ರಾರಂಭದಿಂದಲೇ ಬಹಳಷ್ಟು ಕಷ್ಟಗಳನ್ನು ಎದುರಿಸಬೇಕಾಗಿ ಬಂದಿತ್ತು ಎಂಬುದನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಎಲ್ಲ ಜನಾಂಗಗಳು ಅದರ ವಿರೋಧಿಗಳಾಗಿ ಬಿಟ್ಟಿದ್ದವು. ಸಾಮಾನ್ಯವಾಗಿ ಸಂಭವಿಸುವುದೇನೆಂದರೆ, ಒಬ್ಬ

ಪ್ರವಾದಿ ಅಥವಾ ಸಂದೇಶವಾಹಕ ದೇವನ ಕಡೆಯಿಂದ ಕಳುಹಿಸಲ್ಪಡುವಾಗ ಅವರ ಪಂಗಡದವರು ಇತರ ಜನರಿಗೆ ಬುದ್ಧಿಶಾಲಿಗಳೂ ಸತ್ಯಸಂಧರೂ ಧೈರ್ಯಶಾಲಿಗಳೂ ವೃದ್ಧಿ ಹೊಂದಿರುವವರೂ ಆಗಿ ಕಾಣಿಸಿಕೊಳ್ಳುತ್ತಾರೆ. ಆಗ ಪ್ರವಾದಿಯ ಗುಂಪಿನ ವಿರುದ್ಧ ಇತರ ಜನಾಂಗಗಳಿಗೆ ಒಂದು ರೀತಿಯ ಹಗೆಯೂ ಅಸೂಯೆಯೂ ಉಂಟಾಗುತ್ತದೆ. ವಿಶೇಷವಾಗಿ ಪ್ರತಿಯೊಂದು ಧರ್ಮದ ಧರ್ಮಪಂಡಿತರು ಮತ್ತು ಮಠಾಧಿಪತಿಗಳು ಬಹಳ ಹಗೆಯನ್ನು ತೋರಿಸುತ್ತಾರೆ. ಏಕೆಂದರೆ ದೇವನಿಂದ ನಿಯೋಜಿಲ್ಪಟ್ಟ ಮಹಾನುಭಾವರ ಆಗಮನದಿಂದ ಅವರ ಆದಾಯ ಮತ್ತು ದರ್ಪದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಅವರ ಶಿಷ್ಯರು ಮತ್ತು ಅನುಯಾಯಿಗಳು ಅವರಿಂದ ದೂರಸರಿಯಲು ಪ್ರಾರಂಭಿಸುತ್ತಾರೆ. ಏಕೆಂದರೆ ವಿಶ್ವಾಸ ಸಂಬಂಧವಾದ ನೈತಿಕವಾದ ಮತ್ತು ಜ್ಞಾನ ಸಂಬಂಧವಾದ ಒಳಿತುಗಳನ್ನು ದೇವನಿಂದ ನಿಯೋಜಿಸಲ್ಪಟ್ಟ ವ್ಯಕ್ತಿಯಲ್ಲಿ ಅವರು ಕಾಣುತ್ತಾರೆ. ಆದ್ದರಿಂದ ದೇವಭಕ್ತಿ ಮತ್ತು ಜ್ಞಾನಸಂಪನ್ನತೆಯನ್ನು ಹೊಂದಿದವರೆಂದು ಗಣಿಸಿ ಯಾವ ಧರ್ಮಪಂಡಿತರಿಗೆ ಗೌರವ ನೀಡಲಾಗುತ್ತಿತ್ತೋ ಆ ಧರ್ಮಪಂಡಿತರು ಅದಕ್ಕೆ ಅರ್ಹರಲ್ಲವೆಂದು ಬುದ್ಧಿಶಾಲಿಗಳಾದ ಜನರು ಮನವರಿಕೆ ಮಾಡಿಕೊಳ್ಳುತ್ತಾರೆ. ಆ ಧರ್ಮಪಂಡಿತರಿಗೆ ನೀಡಲಾದ **ನಜ್‌ಮುಲ್ ಉಮ್ಮತ್** (ಸಮುದಾಯದ ನಕ್ಷತ್ರ), **ಶಮ್‌ಸುಲ್ ಉಮ್ಮತ್** (ಸಮುದಾಯದ ಸೂರ್ಯ), **ಶೇಖುಲ್ ಮಶಾಯಿಖ್** (ಗಣ್ಯರಲ್ಲಿ ಗಣ್ಯ) ಮೊದಲಾದ ಬಿರುದುಗಳು ಅವರಿಗೆ ಅನುಯೋಜ್ಯವಲ್ಲವೆಂದು ವಿವೇಕವಂತರಿಗೆ ಮನವರಿಕೆ ಆಗುತ್ತದೆ. ಆದುದರಿಂದ ಬುದ್ಧಿಶಾಲಿಗಳಾದ ಜನರು ಅವರಿಂದ ಮುಖ ತಿರುಗಿಸುತ್ತಾರೆ. ಏಕೆಂದರೆ ಅವರು ತಮ್ಮ ವಿಶ್ವಾಸವನ್ನು ವ್ಯರ್ಥಗೊಳಿಸಲು ಇಷ್ಟಪಡುವುದಿಲ್ಲ.

ತಮಗೆ ಉಂಟಾದ ಹಾನಿಯ ಕಾರಣದಿಂದ ಧರ್ಮಪಂಡಿತರ ಗುಂಪು ಯಾವಾಗಲು ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ದ್ವೇಷಿಸುತ್ತಾ ಇರುತ್ತಾರೆ. ಇದಕ್ಕೆ ಕಾರಣವೇನೆಂದರೆ, ಪ್ರವಾದಿಗಳ ಮತ್ತು ದೇವನಿಂದ ನಿಯೋಜಿಸಲ್ಪಟ್ಟವರ ಆಗಮನದ ಕಾಲದಲ್ಲಿ ಆ ಜನರ ಸ್ಥಿತಿ ಬಹಿರಂಗವಾಗುತ್ತದೆ. ಏಕೆಂದರೆ ಅವರು ವಾಸ್ತವಿಕವಾಗಿ ನ್ಯೂನತೆಯುಳ್ಳವರಾಗಿರುತ್ತಾರೆ ಮತ್ತು ಬಹಳ ಕಡಿಮೆ ಪ್ರಕಾಶವನ್ನು ಹೊಂದಿರುತ್ತಾರೆ. ದೇವನ ಪ್ರವಾದಿಗಳನ್ನು ಮತ್ತು ಸತ್ಯಸಂಧರನ್ನು ಅವರು ಹಗೆತನದಿಂದ ಕಾಣುವುದು ಕೇವಲ ತಮ್ಮ ಸ್ವಂತ ಸ್ವಾರ್ಥದ ಕಾರಣದಿಂದಾಗಿರುತ್ತದೆ. ಅವರು ಸಂಪೂರ್ಣವಾಗಿ ತಮ್ಮ ಸ್ವಾರ್ಥಹಿತಾಸಕ್ತಿಗೋಸ್ಕರ ಪ್ರವಾದಿಗಳಿಗೂ ಅನುಯಾಯಿಗಳಿಗೂ ಹಾನಿಯುಂಟುಮಾಡುವ ಯೋಜನೆಗಳ ಬಗ್ಗೆ ಯೋಚಿಸುತ್ತಾರೆ. ಪರಿಶುದ್ಧ ಹೃದಯಿಯಾದ ಒಬ್ಬ ದೇವನ ದಾಸನಿಗೆ ಕಷ್ಟ ನೀಡಿ ದೇವನ ಕೋಪಕ್ಕೆ

ಗುರಿಯಾಗಿದ್ದೇವೆ ಎಂದು ಅವರು ಕೆಲವು ಸಾರಿ ಮನವರಿಕೆ ಕೂಡ ಮಾಡಿಕೊಳ್ಳುತ್ತಾರೆ. ಅವರು ಯಾವಾಗಲೂ ಮಾಡುವ ವಿರೋಧದ ಕೆಲಸಗಳು ಅವರ ಹೃದಯದ ತಪ್ಪುಗಳನ್ನು ಮತ್ತು ಅವಸ್ಥೆಯನ್ನು ಅವರಿಗೆ ತೋರಿಸಿಕೊಡುತ್ತವೆಯಾದರೂ ಅವರ ದ್ವೇಷದ ಅಗ್ನಿಯಂತ್ರವು ಅವರನ್ನು ಹಗೆಯ ಹೊಂಡಕ್ಕೆ ಎಳೆದುಕೊಂಡು ಹೋಗುತ್ತದೆ.

ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಬಹುದೇವಾರಾಧಕರ, ಯಹೂದಿಯರ ಮತ್ತು ಕ್ರೈಸ್ತರ ಧರ್ಮಪಂಡಿತರನ್ನು ಸತ್ಯವನ್ನು ಸ್ವೀಕರಿಸುವುದರಿಂದ ತಡೆದು ಕಠಿಣವಾಗಿ ವಿರೋಧಿಸುವಂತೆ ಮಾಡಿದ್ದು ಮೇಲೆ ವಿವರಿಸಿದ ಕಾರಣಗಳೇ ಆಗಿವೆ. ಆದುದರಿಂದ ಇಸ್ಲಾಮನ್ನು ಲೋಕದಿಂದ ಅಳಿಸಿಬಿಡುವುದು ಹೇಗೆಂದು ಅವರು ಚಿಂತಿಸಲು ತೊಡಗಿದ್ದರು. ಇಸ್ಲಾಮಿನ ಆರಂಭದ ಕಾಲದಲ್ಲಿ ಮುಸ್ಲಿಮರ ಜನಸಂಖ್ಯೆ ಕಡಿಮೆ ಇದ್ದುದರಿಂದ ಅವರ ವಿರೋಧಿಗಳಾದ ಬಹು ಸಂಖ್ಯಾತ ಜನರು ದುರಹಂಕಾರವನ್ನು ತಮ್ಮ ಹೃದಯದಲ್ಲೂ ಮನಸ್ಸಿನಲ್ಲೂ ಸಹಜವಾಗಿ ಹೊಂದಿ ತಾವು ಸಂಪತ್ತಿನಲ್ಲಿ, ಜನಸಂಖ್ಯೆಯಲ್ಲಿ, ಗೌರವದಲ್ಲಿ, ಪದವಿಗಳಲ್ಲಿ ಇತರ ಪಂಗಡಗಳಿಗಿಂತ ಶ್ರೇಷ್ಠರಾಗಿದ್ದೇವೆ ಎಂದು ಯೋಚಿಸಿದರು ಮತ್ತು ಹಝ್ರತ್ ಪೈಗಂಬರರ(ಸ) ಆ ಕಾಲದ ಶಿಷ್ಯರಾದ ಮುಸ್ಲಿಮರ ವಿರುದ್ಧ ಕಠಿಣವಾದ ಹಗೆತನದಿಂದ ವರ್ತಿಸಿದರು. ಇಸ್ಲಾಮ್ ಎಂಬ ದೈವಿಕ ಗಿಡ ಭೂಮಿಯಲ್ಲಿ ಬೇರೂರಬಾರದೆಂದು ಅವರು ಬಯಸಿದರು. ಅವರು ಸತ್ಯಸಂಧರಾದ ಆ ಜನರನ್ನು ನಾಶ ಮಾಡಲು ಕಠಿಣ ಪರಿಶ್ರಮ ನಡೆಸುತ್ತಿದ್ದರು. ಹಿಂಸಾಚಾರದ ಎಲ್ಲ ವಿಧಾನವನ್ನು ಅವರು ಬಳಸಿದರು. ಈ ಧರ್ಮದ ಪಾದ ಸ್ಥಾಪಿತಗೊಂಡು ಅದರ ಅಭಿವೃದ್ಧಿ ಅವರ ಧರ್ಮ ಮತ್ತು ಜನಾಂಗದ ವಿನಾಶಕ್ಕೆ ಕಾರಣವಾಗಬಹುದೆಂಬ ಭಯ ಅವರಿಗೆ ಇತ್ತು. ಇದೇ ಭೀತಿಯು ಅವರ ಹೃದಯಗಳಲ್ಲಿ ಒಂದು ಭಯಾನಕವಾದ ರೂಪವನ್ನು ಪಡೆಯಿತು. ಇದರ ಕಾರಣದಿಂದ ಅತ್ಯಂತ ದೌರ್ಜನ್ಯಕರವೂ ಅತ್ಯಂತ ದಬ್ಬಾಳಿಕೆ ಭರಿತವೂ ಆದ ಕೃತ್ಯಗಳು ಅವರಿಂದ ಪ್ರಕಟವಾದವು. ಅವರು ಅತ್ಯಂತ ವೇದನಾಜನಕ ರೀತಿಯಲ್ಲಿ ಬಹಳಷ್ಟು ಮುಸ್ಲಿಮರನ್ನು ನಾಶ ಮಾಡಿದರು.

ಹದಿಮೂರು ವರ್ಷಗಳಷ್ಟು ದೀರ್ಘವಾದ ಕಾಲದ ವರೆಗೆ ಅವರ ದೌರ್ಜನ್ಯ ಕೃತ್ಯಗಳು ಜಾರಿಯಲ್ಲಿದ್ದವು. ದೇವನ ನಿಷ್ಠಾವಂತ ದಾಸರು ಮತ್ತು ಮಾನವರಿಗೆ ಅಭಿಮಾನವಾಗಿದ್ದವರು ಕ್ರೂರ ಮೃಗಗಳಂತಹ ಶತ್ರುಗಳ ಖಡ್ಗಗಳಿಂದ ಅತ್ಯಂತ ನಿರ್ದಯವಾಗಿ ತುಂಡರಿಸಲ್ಪಟ್ಟರು. ಅನಾಥ ಮಕ್ಕಳನ್ನು, ಬಲಹೀನ ಮಹಿಳೆಯರನ್ನು ಗಲ್ಲಿಗಳಲ್ಲೂ ಬಡಾವಣೆಗಳಲ್ಲೂ ಹತ್ಯೆ ಮಾಡಲಾಯಿತು. ಇಂತಹ ಪರಿಸ್ಥಿತಿಯಲ್ಲಿ ಕೂಡ ಕೆಡುಕನ್ನು ಖಂಡಿತವಾಗಿಯೂ ಎದುರಿಸಬೇಡಿರಿ ಎಂದು ಅಲ್ಲಾಹನು

ಸ್ಪಷ್ಟವಾಗಿ ಆಜ್ಞಾಪಿಸಿದ್ದನು. ಆ ಸಾತ್ವಿಕರಾದ ಸಂತ್ಯಸಂಧರು ಹಾಗೆಯೇ ಆಜ್ಞೆಯನ್ನು ಪಾಲಿಸಿದರು. ಅವರ ರಕ್ತದಿಂದ ಗಲ್ಲಿಗಳು ಕೆಂಪಾದವು. ಆದರೆ ಅವರು ದನಿ ಎತ್ತಲಿಲ್ಲ. ಅವರು ಬಲಿಮೃಗಗಳ ಹಾಗೆ ಕೊಯ್ಯಲ್ಪಟ್ಟರು. ಆದರೆ ಅವರು ಆಹ್! ಎಂದು ಕೂಡ ಹೇಳಲಿಲ್ಲ. ಅಲ್ಲಾಹನ ಪರಿಶುದ್ಧ ಪೈಗಂಬರರ(ಸ) ಮೇಲೆ ಪದೇ ಪದೇ ಕಲ್ಲೆಸೆದು ರಕ್ತದಿಂದ ತೊಯ್ದು ಹೋಗುವಂತೆ ಮಾಡಿದರು. (ಪೈಗಂಬರರ ಮೇಲೆ ಭೂಮ್ಯಾಕಾಶದಿಂದ ಅಸಂಖ್ಯಾತ ಆಶೀರ್ವಾದಗಳು ವರ್ಷಿಸಲಿ.) ಆದರೆ ಸತ್ಯ ಮತ್ತು ಸ್ಥಿರತೆಯ ಪರ್ವತರಾಗಿದ್ದ ಪ್ರವಾದಿ(ಸ) ತೆರೆದ ಮನಸ್ಸಿನಿಂದ ಮತ್ತು ಸಂತೋಷದಿಂದ ಅವುಗಳನ್ನು ಸಹಿಸಿದರು. ಈ ವಿನಯಾನ್ವಿತ ಮತ್ತು ಸಹನೆದೋರುವ ವರ್ತನೆಯಿಂದ ಶತ್ರುಗಳ ಗರ್ವ ದಿನೇ ದಿನೇ ವರ್ಧಿಸುತ್ತಾ ಹೋಯಿತು. ಅವರು ಈ ಪರಿಶುದ್ಧ ಸಂಘವನ್ನು ತಮ್ಮ ಬೇಟೆಮೃಗವೆಂದು ಗಣಿಸಿದರು. ಆಗ ಭೂಮಿಯಲ್ಲಿ ದೌರ್ಜನ್ಯ ಮತ್ತು ನಿರ್ದಯತೆ ಮಿತಿಮೀರಬಾರದೆಂದು ಇಚ್ಛಿಸುವ ದೇವನು ತನ್ನ ದೌರ್ಜನ್ಯ ಪೀಡಿತರಾದ ದಾಸರ ಬಗ್ಗೆ ಗಮನಿಸಿದನು. ಅವನ ಕೋಪ ದುಷ್ಟರ ಮೇಲೆ ಪ್ರಜ್ವಲಿಸಿತು. ನಿಮ್ಮ ವಿರುದ್ಧ ಎದುರಾಳಿಗಳು ವರ್ತಿಸುತ್ತಿರುವುದನ್ನೆಲ್ಲ ನಾನು ನೋಡುತ್ತಿದ್ದೇನೆ, ನಾನು ಇಂದು ನಿಮಗೆ ಅವರನ್ನು ಎದುರಿಸಲು ಅನುಮತಿ ನೀಡುತ್ತೇನೆ ಮತ್ತು ಸರ್ವಶಕ್ತನಾದ ದೇವನಾದ ನಾನು ದೌರ್ಜನ್ಯಗಾರರನ್ನು ಶಿಕ್ಷಿಸದೆ ಬಿಟ್ಟುಬಿಡಲಾರೆನು ಎಂದು ಅವನು ತನ್ನ ಪರಿಶುದ್ಧ ವಚನವಾದ ಪವಿತ್ರ ಖುರ್‌ಆನಿನ ಮೂಲಕ ತನ್ನ ದೌರ್ಜನ್ಯಪೀಡಿತ ದಾಸರಿಗೆ ತಿಳಿಸಿದನು. ಈ ಆಜ್ಞೆಯನ್ನು ಬೇರೆ ಮಾತಿನಲ್ಲಿ ಜಿಹಾದ್ ಎಂದು ಹೆಸರಿಸಲಾಯಿತು. ಈ ಆಜ್ಞೆ ಮೂಲರೂಪದಲ್ಲಿ ಪವಿತ್ರ ಖುರ್‌ಆನಿನಲ್ಲಿದೆ. ಅದು ಹೀಗೆ:

أُذِنَ لِلَّذِيْنَ يُقٰتَلُوْنَ بِاَنَّهُمْ ظُلِمُوْا ؕ وَاِنَّ اللّٰهَ عَلٰى نَصْرِهِمْ لَقَدِيْرُ ۞

الَّذِيْنَ اُخْرِجُوْا مِنْ دِيَارِهِمْ بِغَيْرِ حَقٍّ -

**"ಉಧಿನ ಲಿಲ್ಲಧೀನ ಯುಖಾತಿಲೂನ ಬಿಅನ್ನಹುಮ್ ಝುಲಿಮೂ. ವ ಇನ್ನಲ್ಲಾಹ ಅಲಾ ನಸ್‌ರಿಹಿಮ್ ಲಖದೀರ್. ಅಲ್ಲಧೀನ ಉಖ್ರಿಜೂ ಮಿನ್ ದಿಯಾರಿಹಿಮ್ ಬಿಗ್ಯೆರಿ ಹಖ್ಖಿನ್." –**

"ಯಾರ ವಿರುದ್ಧ ಯುದ್ಧ ಮಾಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳ್ಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು."

**(ಪವಿತ್ರ ಖುರ್‌ಆನ್ 22:40, 41)**

ಎಂದರೆ ಕೊಲ್ಲಲ್ಪಡುವ ಮತ್ತು ಅನ್ಯಾಯದಿಂದ ತಮ್ಮ ಮನೆಗಳಿಂದ ಹೊರಹಾಕಲ್ಪಡುವ ದೌರ್ಜನ್ಯ ಪೀಡಿತರ ದೂರುಗಳನ್ನು ಅಲ್ಲಾಹನು ಆಲಿಸಿದನು ಮತ್ತು ದೌರ್ಜನ್ಯಗಾರರನ್ನು ಎದುರಿಸುವ ಅನುಮತಿ ನೀಡಿದನು. ದೌರ್ಜನ್ಯ ಪೀಡಿತರಿಗೆ ಸಹಾಯ ಮಾಡಲು ಅಲ್ಲಾಹನು ಸಮರ್ಥನು.

ಈ ಆಜ್ಞೆ ಕಾಲಕ್ಕನುಸಾರವಾಗಿಯೂ ಸಮಯಕ್ಕೆ ಅನುಸಾರವಾಗಿಯೂ ನೀಡಲಾಗಿತ್ತು. ಅದು ಸದಾ ಕಾಲಕ್ಕೆ ಇರುವ ಆಜ್ಞೆಯಾಗಿರಲಿಲ್ಲ. ಅದು ಇಸ್ಲಾಮಿನಲ್ಲಿ ಸೇರುವವರನ್ನು ಆಡುಗಳ ಮತ್ತು ಕುರಿಗಳ ಹಾಗೆ ಕೊಯ್ಯಲ್ಪಡುತ್ತಿದ್ದ ಕಾಲದಲ್ಲಿ ನೀಡಲಾದ ಆಜ್ಞೆಯಾಗಿತ್ತು. ಆದರೆ ಹಝ್ರತ್ ಪೈಗಂಬರರ[ಸ] ಪ್ರವಾದಿತ್ವ ಕಾಲ ಮತ್ತು ಅನಂತರದ ಖಿಲಾಫತ್ ಕಾಲದ ಬಳಿಕ ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅನುಮತಿಸಲಾದ ಜಿಹಾದ್ ವಿಷಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಬಹಳಷ್ಟು ತಪ್ಪುಗಳನ್ನು ಮಾಡಲಾಯಿತು ಎಂಬುದು ಖೇದಕರ. ದೇವನ ಸೃಷ್ಟಿಗಳನ್ನು ಅನ್ಯಾಯವಾಗಿ ಖಡ್ಗದಿಂದ ಕೊಯ್ಯುವುದು ಧಾರ್ಮಿಕತೆಯ ಹೆಗ್ಗುರುತು ಎಂದು ಗಣಿಸಲಾಯಿತು.

ಕ್ರೈಸ್ತರಿಗೆ ದೇವನ ಹಕ್ಕುಗಳ ಬಗ್ಗೆ ತಪ್ಪುಗ್ರಹಿಕೆಗಳು ಉಂಟಾದ ಹಾಗೆ ಮುಸ್ಲಿಮರಿಗೆ ದೇವನ ಸೃಷ್ಟಿಗಳ ಹಕ್ಕುಗಳ ಬಗ್ಗೆ ತಪ್ಪು ಗ್ರಹಿಕೆಗಳು ಉಂಟಾಯಿತು ಎಂಬುದು ಅತ್ಯಂತ ವಿಚಿತ್ರವಾದ ಸಂಗತಿಯಾಗಿದೆ. ಕ್ರೈಸ್ತ ಧರ್ಮದಲ್ಲಿ ಒಬ್ಬ ಬಲಹೀನ ಮನುಷ್ಯನನ್ನು ದೇವನಾಗಿ ಮಾಡಿಕೊಂಡು ಭೂಮ್ಯಾಕಾಶದಲ್ಲಿರುವ ಯಾವುದೇ ವಸ್ತುವಿನೊಂದಿಗೆ ಸಮಾನತೆ ಇಲ್ಲದಂತಹ ಸರ್ವಶಕ್ತನೂ ಶಾಶ್ವತನೂ ಆಗಿರುವ ದೇವನ ಹಕ್ಕುಗಳನ್ನು ದೋಚಲಾಯಿತು. ಮುಸ್ಲಿಮರು ಮನುಷ್ಯರ ಮೇಲೆ ಅನ್ಯಾಯದಿಂದ ಖಡ್ಗ ಚಲಾಯಿಸಿ ಮಾನವರ ಹಕ್ಕುಗಳನ್ನು ಧ್ವಂಸಗೊಳಿಸಿದರು ಮತ್ತು ಅದರ ಹೆಸರನ್ನು ಜಿಹಾದ್ ಎಂದು ಇರಿಸಿದರು. ಒಟ್ಟಾರೆ ಹೇಳುವುದಾದರೆ, ಕ್ರೈಸ್ತರು ಹಕ್ಕುಗಳನ್ನು ನಾಶ ಮಾಡುವ ಒಂದು ಮಾರ್ಗವನ್ನು ಅವಲಂಬಿಸಿದರೆ ಮುಸ್ಲಿಮರು ಹಕ್ಕುಗಳನ್ನು ನಾಶ ಮಾಡುವ ಇನ್ನೊಂದು ಮಾರ್ಗವನ್ನು ಅವಲಂಬಿಸಿದರು. ಈ ಕಾಲಘಟ್ಟದ ದುರದೃಷ್ಟತೆಯೇನೆಂದರೆ, ಈ ಎರಡು ಗುಂಪುಗಳು ಎರಡು ವಿಧಗಳ ಹಕ್ಕುಗಳನ್ನು ಧ್ವಂಸಗೊಳಿಸುವುದನ್ನು ಎಷ್ಟು ಇಷ್ಟಪಡುತ್ತಾರೆಂದರೆ ಪ್ರತಿಯೊಂದು ಗುಂಪು ತನ್ನ ನಂಬಿಕೆ ಪ್ರಕಾರ ಮೇಲಿನ ಎರಡು ರೀತಿಯ ಹಕ್ಕುಧ್ವಂಸಗಳಲ್ಲಿ ಒಂದನ್ನು ಮಾಡುವ ಮೂಲಕ ನೇರವಾಗಿ ಸ್ವರ್ಗ ಪ್ರವೇಶವನ್ನು ಮಾಡಬಹುದು ಮತ್ತು ಸ್ವರ್ಗ ಪ್ರವೇಶಿಸಲು ಇದಕ್ಕಿಂತ ಉತ್ತಮ ಮಾರ್ಗವಿಲ್ಲ ಎಂದು ಭಾವಿಸುತ್ತದೆ. ದೇವನಿಗೆ ಸಲ್ಲಬೇಕಾದ

ಹಕ್ಕುಗಳನ್ನು ನೀಡದೇ ಇರುವುದು ಪಾಪಕೃತ್ಯಗಳಲ್ಲಿ ಅತ್ಯಂತ ಘೋರಪಾಪವಾಗಿದೆ. ಆದರೆ ಕ್ರೈಸ್ತ ಧರ್ಮದವರು ಮಾಡುವ ಈ ಅಪಾಯಕರ ಹಕ್ಕುಗಳ ನಾಶದ ಬಗ್ಗೆ ನಾವು ಇಲ್ಲಿ ಈಗ ವಿವರಿಸಲು ಉದ್ದೇಶಿಸುವುದಿಲ್ಲ. ನಾವು ಇಲ್ಲಿ ಮುಸ್ಲಿಮರಿಗೆ ಅವರು ಮಾಡುವ ಮಾನವರ ಹಕ್ಕುಗಳ ಧ್ವಂಸದ ಬಗ್ಗೆ ಎಚ್ಚರಿಕೆ ನೀಡಲು ಬಯಸುತ್ತೇವೆ.

ಮೌಲವಿಗಳೆಂದು ಕರೆಯಲ್ಪಡುವ ಇಂದಿನ ಕಾಲದ ಮುಸ್ಲಿಮ್ ಧರ್ಮಪಂಡಿತರು ಜಿಹಾದ್ ಬಗ್ಗೆ ಹೊಂದಿರುವ ಮತ್ತು ಅವರು ಜನರ ಮುಂದೆ ಇರಿಸುವ ಅಭಿಪ್ರಾಯ ಖಂಡಿತವಾಗಿಯೂ ಸರಿಯಲ್ಲ. ಅವರು ತಮ್ಮ ಭಾವಾವೇಶ ಭರಿತ ಭಾಷಣಗಳಿಂದ ಅನಾಗರಿಕ ಗುಣಗಳನ್ನು ಹೊಂದಿರುವ ಸಾಮಾನ್ಯ ಜನರನ್ನು ಕ್ರೂರ ಮೃಗಗಳನ್ನಾಗಿ ಮಾಡುತ್ತಾರೆ ಮತ್ತು ಮಾನವಿಕತೆಯ ಎಲ್ಲ ಪರಿಶುದ್ಧ ಗುಣಗಳಿಂದ ಜನರನ್ನು ದೂರ ಮಾಡುತ್ತಾರೆ ಎಂಬುದಲ್ಲದೇ ಇದರ ಪರಿಣಾಮ ಬೇರೇನೂ ಇಲ್ಲ. ಸಂಭವಿಸಿದ್ದು ಕೂಡ ಇದೇ ಆಗಿದೆ. ಇಸ್ಲಾಮಿಗೆ ತನ್ನ ಪ್ರಾರಂಭದ ಕಾಲದಲ್ಲಿ ಯುದ್ಧಗಳ ಆವಶ್ಯಕತೆ ಏಕೆ ಉಂಟಾಯಿತು ಎಂಬ ರಹಸ್ಯವನ್ನು ಅರಿಯದ ಅವಿವೇಕಿ ಮತ್ತು ಸ್ವಾರ್ಥ ಜನರು ಎಸಗುವ ಅನ್ಯಾಯಕರ ಹತ್ಯೆಗಳ ಪಾಪದೋಷ ಈ ಮೌಲವಿಗಳ ತಲೆಯ ಮೇಲೆ ಇರುವುದು. ಈ ಮೌಲವಿಗಳು ರಹಸ್ಯವಾಗಿ ಕಲಿಸುವ ಪಾಠಗಳ ಪರಿಣಾಮವಾಗಿ ಯಾತನಾಮಯ ಕೊಲೆಗಳು ನಡೆಯುತ್ತವೆ. ಈ ಮೌಲವಿಗಳು ಸರಕಾರಿ ಅಧಿಕಾರಿಗಳನ್ನು ಭೇಟಿ ಮಾಡುವಾಗ ಸಲಾಮ್ ಮಾಡಲಿಕ್ಕಾಗಿ ಸಾಷ್ಟಾಂಗ ಪ್ರಣಾಮ ಮಾಡಲು ಕೂಡ ಸಿದ್ಧರಾಗುವರೋ ಎಂಬಂತೆ ಬಾಗುತ್ತಾರೆ. ಆದರೆ ಅವರು ತಮ್ಮ ಜನರ ಕೂಟದಲ್ಲಿ ಕುಳಿತುಕೊಳ್ಳುವಾಗ "ಈ ದೇಶ **ದಾರುಲ್ ಹರ್‌ಬ್** (ಯುದ್ಧ ಕ್ಷೇತ್ರ) ಆಗಿದೆ." ಎಂದು ಪದೇ ಪದೇ ಒತ್ತಿ ಹೇಳುತ್ತಾರೆ ಮತ್ತು ಜಿಹಾದ್ ಮಾಡುವುದು ಕಡ್ಡಾಯ ಧಾರ್ಮಿಕ ಕಾರ್ಯ ಎಂದು ಮನಸ್ಸಿನಲ್ಲಿ ಭಾವಿಸುತ್ತಾರೆ. ಅವರ ಪೈಕಿ ಇಂತಹ ಯೋಚನೆ ಹೊಂದದವರು ಬಹಳ ವಿರಳ. ಪವಿತ್ರ ಖುರ್‌ಆನ್ ಮತ್ತು ಹದೀಸಿಗೆ ವಿರುದ್ಧವಾದ ಈ ನಂಬಿಕೆಗೆ ಅವರು ಎಷ್ಟು ಬಲವಾಗಿ ಅಂಟಿಕೊಂಡಿರುವರು ಎಂದರೆ, ಅವರ ಈ ನಂಬಿಕೆಯನ್ನು ಅಂಗೀಕರಿಸಿದವನನ್ನು 'ದಜ್ಜಾಲ್' (ಮಹಾಸುಳ್ಳಗಾರ) ಎಂದು ಹೆಸರಿಸಿ ಅಂಥವನನ್ನು ಕೊಲ್ಲಬೇಕೆಂದು ಸಾರುತ್ತಾರೆ. ದೀರ್ಘಕಾಲದಿಂದ ನಾನು ಕೂಡ ಅವರ ಈ ಫತ್ವಕ್ಕೆ (ಧಾರ್ಮಿಕ ತೀರ್ಪು) ಗುರಿಯಾಗಿರುವೆನು. ಈ ದೇಶದ ಕೆಲವು ಮೌಲವಿಗಳು ನನ್ನನ್ನು 'ದಜ್ಜಾಲ್' (ಮಹಾಸುಳ್ಳುಗಾರ) ಮತ್ತು 'ಕಾಫಿರ್' (ಅವಿಶ್ವಾಸಿ) ಎಂದು ಸಾರಿದ್ದಾರೆ ಹಾಗೂ ಈ ವ್ಯಕ್ತಿಯನ್ನು ಕೊಲ್ಲಬೇಕು ಮತ್ತು ಅವನ ಸಂಪತ್ತನ್ನು ಲೂಟಿ ಮಾಡಿ ಮಹಿಳೆಯರನ್ನು ಅಪಹರಿಕೊಳ್ಳುವುದು ಬಹಳ ಪುಣ್ಯದಾಯಕ ಕಾರ್ಯವಾಗಿದೆ ಎಂದು ಹೇಳಿ ಬ್ರಿಟಿಷ್

ಸರಕಾರದ ನಿಯಮಗಳಿಗೂ ಹೆದರದೆ ನನ್ನ ವಿರುದ್ಧ ಒಂದು ಮುದ್ರಿತ ಫತ್ವವನ್ನು ಪ್ರಕಟಿಸಿದ್ದಾರೆ. ಇದಕ್ಕೆ ಕಾರಣವೇನು? ಅದೇನೆಂದರೆ, ನಾನು **ಮಸೀಹ್ ಮೌಊದ್** ಆಗಿರುವುದು ಮತ್ತು ಅವರು ಪ್ರಸ್ತಾಪಿಸುವಂತಹ ಜಿಹಾದಿನ ವಿರುದ್ಧವಾಗಿ ನಾನು ಮಾತನಾಡಿರುವುದು ಆಗಿದೆ. ರಕ್ತ ಪಿಪಾಸು ಮಸೀಹ್ ಮತ್ತು ಮಹ್‌ದೀ ಆಗಮಿಸುವಾಗ ಲೂಟಿ ಮಾಡುವ ಬಹಳ ಪ್ರತೀಕ್ಷೆಗಳು ಅವರಿಗಿದ್ದುವು. ಅದು ಸಂಪೂರ್ಣ ಸುಳ್ಳು ನಂಬಿಕೆ ಎಂದು ನಾನು ಪ್ರತಿಪಾದಿಸಿದೆ. ಇವು ನನ್ನ ವಿರುದ್ಧ ಅವರ ಕೋಪ ಮತ್ತು ವೈರಕ್ಕೆ ಕಾರಣಗಳಾದುವು. ಆದರೆ ಅವರು ನೆನಪಿಟ್ಟುಕೊಳ್ಳಲಿ, ವಾಸ್ತವದಲ್ಲಿ ಜಿಹಾದ್ ಬಗ್ಗೆ ಅವರು ಹೊಂದಿರುವ ನಿಲುವು ಸರಿಯಾದುದಲ್ಲ. ಇದರಿಂದ ಮೊತ್ತಮೊದಲಾಗಿ ಮಾನವೀಯ ಸಹಾನುಭೂತಿ ಸಂಪೂರ್ಣವಾಗಿ ಇಲ್ಲವಾಗುವುದು. ಹಿಂದಿನ ಕಾಲದಲ್ಲಿ ಜಿಹಾದ್ ಜಾರಿಯಲ್ಲಿರಿಸಿರುವಾಗ ಈಗ ಅದೇಕೆ ನಿಷಿದ್ಧವಾಗುತ್ತದೆ ಎಂಬ ಅವರ ಯೋಚನೆ ಸರಿಯಾದುದಲ್ಲ. ಈ ಪ್ರಶ್ನೆಗೆ ನಮ್ಮ ಬಳಿ ಎರಡು ಉತ್ತರಗಳಿವೆ.

ಮೊದಲನೆಯದಾಗಿ, ಅವರ ಈ ಯೋಚನೆ ಸಂಪೂರ್ಣವಾಗಿಯೂ ನಿರಾಧಾರವಾಗಿದೆ. ಯಾರು ಮೊದಲು ಖಡ್ಗ ಎತ್ತಿದರೋ, ಯಾರು ನಿರ್ದಯರಾಗಿ ನಿರಪರಾಧಿಗಳನ್ನು, ಸಾತ್ವಿಕರಾದ ಪುರುಷರನ್ನು, ಮಹಿಳೆಯರನ್ನು ಮತ್ತು ಮಕ್ಕಳನ್ನು ಕೊಂದರೋ ಅವರ ವಿರುದ್ಧ ಹೊರತು ಬೇರೆ ಯಾರ ವಿರುದ್ಧ ಕೂಡ ನಮ್ಮ ಪೈಗಂಬರ್(ಸ) ಖಡ್ಗ ಎತ್ತಿರಲಿಲ್ಲ. ಈ ಶತ್ರುಗಳು ಎಂತಹ ವೇದನಾಜನಕ ರೀತಿಯಲ್ಲಿ ಮುಸ್ಲಿಮರನ್ನು ಕೊಂದರು ಎಂದರೆ, ಈಗಲೂ ಆ ಘಟನೆಗಳನ್ನು ಓದುವಾಗ ಅಳು ಬರುತ್ತದೆ.

ಎರಡನೆಯದಾಗಿ, ಇಸ್ಲಾಮಿನಲ್ಲಿ ಮೌಲವಿಗಳು ಪ್ರತಿಪಾದಿಸುವ ರೀತಿಯ ಜಿಹಾದ್ ಜಾರಿಯಲ್ಲಿತ್ತು ಎಂದು ಊಹಿಸುವುದಾದರೂ ಈ ಕಾಲದಲ್ಲಿ ಆ ಆಜ್ಞೆ ಜಾರಿಯಾಗದು. ಏಕೆಂದರೆ ವಾಗ್ದಾನ ಮಾಡಲ್ಪಟ್ಟ ಮಸೀಹ್ ಆಗಮಿಸುವಾಗ ಖಡ್ಗದ ಜಿಹಾದ್ ಮತ್ತು ಧಾರ್ಮಿಕ ಯುದ್ಧಗಳು ಕೊನೆಗೊಳ್ಳುವುದು ಎಂದು ಬರೆಯಲಾಗಿದೆ. ಏಕೆಂದರೆ ಆಗಮಿಸುವ ಮಸೀಹ್ ಖಡ್ಗ ಎತ್ತಲಾರರು ಅಥವಾ ಬೇರೆ ಯಾವುದೇ ಆಯುಧವನ್ನು ಹಿಡಿದುಕೊಳ್ಳಲಾರರು. ಬದಲಾಗಿ ಅವರು ಮಾಡುವ ಪ್ರಾರ್ಥನೆಯೇ ಅವರ ಆಯುಧವಾಗಿರುವುದು. ಅವರ ದೃಢನಿರ್ಧಾರವೇ ಅವರ ಖಡ್ಗವಾಗಿರುವುದು. ಅವರು ಮೈತ್ರಿಗೆ ಬುನಾದಿ ಹಾಕುವರು. ಆಡು ಮತ್ತು ಸಿಂಹವನ್ನು ಒಂದೇ ನದಿದಂಡೆಯಲ್ಲಿ ಒಟ್ಟುಗೂಡುವಂತೆ ಮಾಡುವರು. ಅವರ ಕಾಲ ಸಂಧಾನ, ಸೌಮ್ಯತೆ ಮತ್ತು ಮಾನವೀಯ ಸಹಾನುಭೂತಿಯ ಕಾಲವಾಗಿರುವುದು. ಎಷ್ಟು ಖೇದಕರ!

ಈ ಜನರು ಏಕೆ ಯೋಚಿಸುವುದಿಲ್ಲ? ಸಾವಿರದ ಮುನ್ನೂರು ವರ್ಷಗಳ ಹಿಂದೆ ವಾಗ್ದತ್ತ ಮಸೀಹರ ಬಗ್ಗೆ **ಯಝಉಲ್ ಹರ್‌ಬ್** ಎಂದು ಹಝ್‌ರತ್ ಪೈಗಂಬರ್[ಸ] ಹೇಳಿದ್ದರು. ಎಂದರೆ ವಾಗ್ದತ್ತ ಮಸೀಹ್ ಆಗಮಿಸಿ ಯುದ್ಧಗಳನ್ನು ಕೊನೆಗೊಳಿಸುವರು. حَتّٰى تَضَعَ الْحَرْبُ اَوْزَارَهَا – **ಹತ್ತಾ ತಝಉಲ್ ಹರ್‌ಬು ಔಝಾರಹಾ** – ಎಂಬ ಪವಿತ್ರ ಖುರ್‌ಆನಿನ ವಚನ ಇದನ್ನೇ ಸೂಚಿಸುತ್ತದೆ. ಅರ್ಥ: ಯುದ್ಧದಲ್ಲಿ ಆಯುಧ ಕೆಳಗಿರಿಸುವ ತನಕ **(ಪವಿತ್ರ ಖುರ್‌ಆನ್ 47:5)** ಎಂದರೆ, ಮಸೀಹರ ಕಾಲ ಬರುವ ತನಕ ಯುದ್ಧಮಾಡಿರಿ. ಇದೇ **ತಝಉಲ್ ಹರ್‌ಬು ಔಝಾರಹಾ** ಎಂಬುದರ ತಾತ್ಪರ್ಯವಾಗಿದೆ. ಪವಿತ್ರ ಖುರ್‌ಆನಿನ ನಂತರ **ಅಸಹ್ಹುಲ್ ಕಿತಾಬ್** (ಅತ್ಯಂತ ಅಧಿಕೃತ ಮತ್ತು ವಿಶ್ವಾಸಯೋಗ್ಯ ಗ್ರಂಥ) ಎಂದು ಅಂಗೀಕರಿಸಲ್ಪಟ್ಟಿರುವ **ಸಹೀಹ್ ಬುಖಾರಿ** ನಿಮ್ಮ ಮುಂದೆ ಇದೆ. ಅದನ್ನು ಗಮನವಿಟ್ಟು ಅಧ್ಯಯನ ಮಾಡಿರಿ.

ಎಲೈ ಇಸ್ಲಾಮಿನ ಧರ್ಮಪಂಡಿತರೇ ಮತ್ತು ಮೌಲವಿಗಳೇ, ನನ್ನ ಮಾತನ್ನು ಆಲಿಸಿರಿ. ನಾನು ಸತ್ಯವಾಗಿ ಹೇಳುತ್ತೇನೆ. ಈಗ ಜಿಹಾದಿನ ಸಮಯವಲ್ಲ. ಅಲ್ಲಾಹನ ಪವಿತ್ರ ಪೈಗಂಬರರ[ಸ] ಆಜ್ಞೆಯನ್ನು ಧಿಕ್ಕರಿಸುವವರರಾಗಬೇಡಿರಿ. ಆಗಮಿಸಬೇಕಾದ ವಾಗ್ದತ್ತ ಮಸೀಹ್ ಆಗಮಿಸಿರುವರು. ಇನ್ನು ಮುಂದೆ ಖಡ್ಗ ಬಳಸಿಕೊಂಡು ರಕ್ತಪಾತ ಮಾಡುವ ಧಾರ್ಮಿಕ ಯುದ್ಧಗಳಿಂದ ಹಿಂದೆಸರಿಯಿರಿ ಎಂದು ಅವರು ಆಜ್ಞೆ ಕೂಡ ನೀಡಿರುವರು. ಈಗಲೂ ರಕ್ತಪಾತ ಮಾಡುವುದರಿಂದ ಹಿಂದೆ ಸರಿಯದೇ ಇರುವುದು ಮತ್ತು ಅಂತಹ ಪ್ರವಚನಗಳನ್ನು ಮಾಡುವುದನ್ನು ನಿಲ್ಲಿಸದೇ ಇರುವುದು ಇಸ್ಲಾಮ್ ಧರ್ಮದ ರೀತಿಯಲ್ಲ. ನನ್ನನ್ನು ಅಂಗೀಕರಿಸುವವನು ಇಂತಹ ಪ್ರವಚನಗಳನ್ನು ಮಾಡಲಾರನು. ಮಾತ್ರವಲ್ಲ ಈ ಮಾರ್ಗವನ್ನು ಅತ್ಯಂತ ಕೆಟ್ಟದ್ದೆಂದೂ ಅಲ್ಲಾಹನ ಕೋಪಕ್ಕೆ ಕಾರಣವಾಗುವಂಥದ್ದು ಎಂದೂ ತಿಳಿದುಕೊಳ್ಳುವನು.

ನಾವಿಲ್ಲಿ ದುಃಖದಿಂದ ಬರೆಯುತ್ತೇವೆ. ಒಂದೆಡೆ ಮೌಲವಿಗಳು ಜಿಹಾದಿನ ನಿಜವಾದ ವಾಸ್ತವಿಕತೆಯನ್ನು ರಹಸ್ಯವಾಗಿಟ್ಟುಕೊಂಡು ಕೊಲೆ ಮತ್ತು ಲೂಟಿಯ ಯೋಜನೆಗಳನ್ನು ಜನರಿಗೆ ಕಲಿಸಿದರು ಮತ್ತು ಅದರ ಹೆಸರನ್ನು ಜಿಹಾದ್ ಎಂದು ಇರಿಸಿರುವರು. ಮತ್ತೊಂದೆಡೆ ಪಾದರಿಗಳು ಇದೇ ಕೆಲಸವನ್ನು ಮಾಡಿರುವರು. ಇಸ್ಲಾಮ್ ಖಡ್ಗ ಬಲದಿಂದ ಹರಡಿತು ಹಾಗೂ ಖಡ್ಗ ಚಲಾಯಿಸುವುದರ ಹೆಸರು ಇಸ್ಲಾಮ್ ಎಂದು ಪ್ರತಿಪಾದಿಸಿ ಸಾವಿರಾರು ಪುಸ್ತಕಗಳನ್ನೂ ನೋಟೀಸುಗಳನ್ನೂ ಉರ್ದು, ಪುಶ್ತು ಮೊದಲಾದ ಭಾಷೆಗಳಲ್ಲಿ ಮುದ್ರಿಸಿ ಭಾರತದಲ್ಲಿ, ವಿಶಿಷ್ಟವಾಗಿ ಪಂಜಾಬು ಮತ್ತು ಗಡಿನಾಡು ಪ್ರದೇಶಗಳಲ್ಲಿ ಹರಡಿರುವರು. ಹೀಗೆ ಜಿಹಾದ್ ಬಗ್ಗೆ ಸಾಮಾನ್ಯ

ಜನರಿಗೆ ಎರಡು ಸಾಕ್ಷ್ಯಗಳು ದೊರೆತವು. ಒಂದು ಮೌಲವಿಗಳ ಸಾಕ್ಷ್ಯ, ಇನ್ನೊಂದು ಪಾದರಿಗಳ ಸಾಕ್ಷ್ಯ. ಈ ಸಾಕ್ಷ್ಯಗಳ ಪರಿಣಾಮವಾಗಿ ಅವರ ಹಿಂಸಾಚಾರದ ಆವೇಶಗಳು ವರ್ಧಿಸಿತು. ನನ್ನ ಅಭಿಪ್ರಾಯವೇನೆಂದರೆ, ದೇಶದಲ್ಲಿ ಅಶಾಂತಿ ಮತ್ತು ಬಂಡಾಯಕ್ಕೆ ಕಾರಣವಾಗುವ ಇಂತಹ ಅಪಾಯಕರ ಸುಳ್ಳು ಹೇಳುವುದರಿಂದ ಈ ಪಾದರಿಗಳನ್ನು ನಮ್ಮ ಜನಹಿತ ಸರಕಾರ ತಡೆಯಬೇಕು. ಪಾದರಿಗಳ ಅನಾವಶ್ಯಕ ಸುಳ್ಳಿನಿಂದ ಮುಸ್ಲಿಮರು ಇಸ್ಲಾಮ್ ಧರ್ಮವನ್ನು ಬಿಟ್ಟು ಬಿಡಲು ಏನೂ ಹೋಗುವುದಿಲ್ಲ. ಆದರೆ ಯಾವಾಗಲೂ ಈ ಪ್ರವಚನಗಳ ಪರಿಣಾಮವಾಗಿ ಜನಸಾಮಾನ್ಯರಿಗೆ ಜಿಹಾದ್ ಬಗ್ಗೆ ಪದೇ ಪದೇ ನೆನಪಿಸಿದಂತಾಗುವುದು ಮತ್ತು ನಿದ್ರಿಸುತ್ತಿದ್ದವರು ಎಚ್ಚರಗೊಳ್ಳುವರು.

ಈಗ ವಾಗ್ದಾನ ಮಾಡಲಾದ ಮಸೀಹ್ ಆಗಮಿಸಿರುವರು. ಆದ ಕಾರಣ ಇಂತಹ ಜಿಹಾದಿನಿಂದ ಹಿಂದೆ ಸರಿಯುವುದು ಪ್ರತಿಯೊಬ್ಬ ಮುಸ್ಲಿಮನ ಕಡ್ಡಾಯ ಕರ್ತವ್ಯವಾಗಿದೆ. ನಾನು ಆಗಮಿಸದೇ ಇರುತ್ತಿದ್ದರೆ (ಜಿಹಾದಿನ ಬಗ್ಗೆ) ಈ ತಪ್ಪುಗ್ರಹಿಕೆ ಕುರಿತು ನೆವನಗಳನ್ನು ಹೇಳಬಹುದಾಗಿತ್ತು. ಆದರೆ ಈಗ ನಾನು ಆಗಮಿಸಿರುವೆನು. ನೀವು ವಾಗ್ದಾನದ ದಿನವನ್ನು ನೋಡಿದಿರಿ. ಆದ್ದರಿಂದ ಈಗ ಧಾರ್ಮಿಕ ಯುದ್ಧಕ್ಕೋಸ್ಕರ ಖಡ್ಗ ಎತ್ತುವವರಿಗೆ ಅಲ್ಲಾಹನ ಮುಂದೆ ಸಮರ್ಥಿಸಲು ಯಾವುದೇ ನೆಪವಿಲ್ಲ. ಈ ಕಾಲಘಟ್ಟದ ಬಹುತೇಕ ಅನಾಗರಿಕ ಜನರು ರೂಢಿಗೆ ತಂದಿರುವ ಜಿಹಾದಿನ ರೀತಿ ಇಸ್ಲಾಮಿನ ಜಿಹಾದ್ ಅಲ್ಲವೆಂದು ಕಣ್ಣುಗಳುಳ್ಳವನಾಗಿ ಹದೀಸುಗಳನ್ನು ಓದುವನು ಮತ್ತು ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡುವವನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬಲ್ಲನು. ಬದಲಾಗಿ ಇವು ದುಷ್ಪ್ರೇರಣಾತ್ಮಕ ಆತ್ಮದ ಆವೇಶದಿಂದ ಅಥವಾ ಸ್ವರ್ಗದ ನಿರರ್ಥಕ ಆಶೆಯಿಂದ ಮುಸ್ಲಿಮರಲ್ಲಿ ವ್ಯಾಪಿಸಿಕೊಂಡಿರುವ ನಿಷಿದ್ಧ ಕೆಲಸಗಳಾಗಿವೆ.

ನಾನು ಈಗಾಗಲೇ ಹೇಳಿದಂತೆ ನಮ್ಮ ಪೈಗಂಬರರು(ಸ) ತನ್ನ ಕಾಲದಲ್ಲಿ ಸ್ವತಃ ಮೊದಲು ಖಡ್ಗವನ್ನು ಖಂಡಿತವಾಗಿಯೂ ಎತ್ತಿರಲಿಲ್ಲ. ಬದಲಾಗಿ ಅವರು ಒಂದು ದೀರ್ಘ ಕಾಲದ ವರೆಗೆ ಅವಿಶ್ವಾಸಿಗಳಿಂದ ಕಷ್ಟ ಅನುಭವಿಸಿದರು. ಅವರು ಎಷ್ಟು ಸಹನೆದೋರಿದರು ಎಂದರೆ, ಹಾಗೆ ಸಹನೆ ತೋರಿಸಲು ಯಾರಿಗೂ ಸಾಧ್ಯವಾಗದು. ಅದೇ ರೀತಿಯಲ್ಲಿ ಅವರ ಅನುಚರರು ಇದೇ ಉನ್ನತ ತತ್ವಗಳಿಗೆ ಬದ್ಧರಾದರು. ಕಷ್ಟ ಅನುಭವಿಸಿರಿ ಮತ್ತು ಸಹನೆದೋರಿರಿ ಎಂದು ಅವರಿಗೆ ಆಜ್ಞಾಪಿಸಲಾದ ರೀತಿಯಲ್ಲೇ ಅವರು ಸತ್ಯವನ್ನು ಮತ್ತು ಸಹನೆಯನ್ನು ಪ್ರದರ್ಶಿಸಿದರು. ಶತ್ರುಗಳ ಪಾದಗಳಿಂದ ತುಳಿಯಲ್ಪಟ್ಟರೂ ಅವರು ದನಿ ಎತ್ತಲಿಲ್ಲ. ಅವರ ಮಕ್ಕಳನ್ನು

ಅವರ ಮುಂದೆ ತುಂಡು ತುಂಡು ಮಾಡಲಾಯಿತು. ಅವರನ್ನು ಬೆಂಕಿ ಮತ್ತು ನೀರಿನಿಂದ ಹಿಂಸೆಗೆ ಗುರಿಪಡಿಸಲಾಯಿತು. ಆದರೆ ಮುಗ್ಧ ಶಿಶುಗಳ ಹಾಗೆ ಅವರು ಕೇಡುಕನ್ನು ಎದುರಿಸುವುದರಿಂದ ದೂರಸರಿದರು. ಈ ಅನುಚರರ ಹಾಗೆ ಲೋಕದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳ ಅನುಯಾಯಿಗಳಲ್ಲಿ ಯಾವುದಾದರೂ ಒಬ್ಬ ಪ್ರವಾದಿಯ ಅನುಯಾಯಿಗಳು ತಮಗೆ ಪ್ರತೀಕಾರ ಮಾಡುವ ಶಕ್ತಿ ಇದ್ದರೂ ಅಲ್ಲಾಹನ ಆಜ್ಞೆ ಅನುಸರಿಸಿ ಪ್ರತೀಕಾರ ಮಾಡುವುದರಿಂದ ಸ್ವತಃ ತಡೆದು ನಿಂತತ್ತಾಗಿ ಸಾಬೀತುಗೊಳಿಸಲು ಯಾರಿಗಾದರೂ ಸಾಧ್ಯವೇ? ಶೌರ್ಯ, ಒಗ್ಗಟ್ಟು, ತೋಳ್ಬಲ, ಎದುರಿಸುವ ಶಕ್ತಿ ಹೊಂದಿದ್ದರೂ ಎಲ್ಲ ರೀತಿಯ ಧೈರ್ಯ ಮತ್ತು ಪರಾಕ್ರಮದ ಗುಣಗಳನ್ನು ಹೊಂದಿದ್ದರೂ ರಕ್ತ ಪಿಪಾಸು ಶತ್ರುಗಳು ನೀಡುತ್ತಿದ್ದ ಕಷ್ಟತೆಗಳು ಮತ್ತು ಹಾನಿಗಳನ್ನು ಹದಿಮೂರು ವರ್ಷಗಳ ಕಾಲ ನಿರಂತರವಾಗಿ ಸಹಿಸಿದಂತಹ ಬೇರೆ ಯಾವುದಾದರೂ ಗುಂಪು ಇತ್ತು ಎನ್ನುವುದರ ಬಗ್ಗೆ ಸಾಕ್ಷ್ಯ ಯಾರ ಬಳಿಯಾದರೂ ಇದೆಯೇ? ನಮ್ಮ ಯಜಮಾನರಾದ ಹಝ್ರತ್ ಪೈಗಂಬರ್[ಸ] ಮತ್ತು ಅವರ ಅನುಚರರು ತೋರಿಸಿದ ಸಹನೆ ಯಾವುದೇ ನಿರ್ಬಂಧಿತಾವಸ್ಥೆಯಲ್ಲಿ ಆಗಿರಲಿಲ್ಲ. ಜಿಹಾದಿನ ಆಜ್ಞೆ ದೊರೆತ ನಂತರ ಇದ್ದ ಅದೇ ಕೈಗಳು ಮತ್ತು ಭುಜಗಳು ತ್ಯಾಗಶೀಲರಾದ ಅನುಚರರಿಗೆ ಸಹನೆದೋರಿದ ಕಾಲದಲ್ಲೂ ಇದ್ದುವು. ಕೆಲವು ಸಾರಿ ಒಂದು ಸಾವಿರ ಸತ್ಯವಿಶ್ವಾಸಿಗಳಾದ ಯುವಕರು ವಿರೋಧಿಗಳ ಒಂದು ಲಕ್ಷ ಸೈನಿಕರನ್ನು ಯುದ್ಧದಲ್ಲಿ ಸೋಲಿಸಿದರು. ಮಕ್ಕದಲ್ಲಿ ಶತ್ರುಗಳ ಹಿಂಸಾಚಾರವನ್ನು ಮುಸ್ಲಿಮರು ಸಹಿಸಿದ್ದು ಹೇಡಿತನದಿಂದಲೋ ದೌರ್ಬಲ್ಯದಿಂದಲೋ ಅಲ್ಲವೆಂದು ಜನರಿಗೆ ತಿಳಿಯುವಂತಾಗಲು ಹೀಗೆ ಸಂಭವಿಸಿತು. ಅವರು ಅಲ್ಲಾಹನ ಆದೇಶವನ್ನು ಆಲಿಸಿ ಆಯುಧಗಳನ್ನು ಕೆಳಗಿಳಿಸಿದರು ಹಾಗೂ ಆಡುಗಳ ಮತ್ತು ಕುರಿಗಳ ಹಾಗೆ ಬಲಿಯಾಗಲು ಸಿದ್ಧರಾದರು. ನಿಶ್ಚಯವಾಗಿಯೂ ಇಂತಹ ಸಹನೆ ಮನುಷ್ಯನ ಸಾಮರ್ಥ್ಯಕ್ಕೆ ಅತೀತವಾಗಿದೆ. ನಾವು ಪೂರ್ತಿ ಲೋಕದ ಮತ್ತು ಎಲ್ಲ ಪ್ರವಾದಿಗಳ ಚರಿತ್ರೆಗಳನ್ನು ಓದಿದರೂ ನಾವು ಯಾವುದೇ ಸಮುದಾಯದಲ್ಲಿ ಮತ್ತು ಪ್ರವಾದಿಯ ಸಂಘದಲ್ಲಿ ಇಂತಹ ಉನ್ನತ ನೈತಿಕ ಗುಣಗಳನ್ನು ಕಾಣಲಾರೆವು. ಹಿಂದಿನ ಕಾಲದವರಲ್ಲಿ ಯಾರದಾದರೂ ಸಹನೆಯ ಕಥೆಗಳನ್ನು ನಾವು ಆಲಿಸುವುದಾದರೂ ಆ ಸಹನೆಯು ಅಂಜುಬುರುಕುತನ ಮತ್ತು ಪ್ರತೀಕಾರ ಮಾಡಲು ಶಕ್ತಿಯಿಲ್ಲದ ಕಾರಣದಿಂದ ಆಗಿರಬಹುದು ಎಂಬ ಭಾವನೆ ಕೂಡಲೇ ನಮ್ಮ ಹೃದಯದಲ್ಲಿ ಉಂಟಾಗುತ್ತದೆ. ಆದರೆ ಸೈನಿಕ ನೈಪುಣ್ಯತೆ ತನ್ನಲ್ಲಿ ಹೊಂದಿರುವ, ಧೀರ ಮತ್ತು ಬಲಿಷ್ಠ ಹೃದಯಗಳನ್ನು ಹೊಂದಿರುವ ಒಂದು ಸಮುದಾಯಕ್ಕೆ ಕಷ್ಟ ನೀಡಲ್ಪಟ್ಟಾಗ,

ಅವರ ಮಕ್ಕಳು ಕೊಲ್ಲಲ್ಪಡುವಾಗ, ಅವರನ್ನು ಈಟಿಯಿಂದ ಗಾಯಗೊಳಿಸಲಾಗುವಾಗ ಅವರು ಕೆಡುಕನ್ನು ಎದುರಿಸದೆ ಇರುವುದು ವೀರ ಗುಣವಾಗಿದೆ. ಈ ಗುಣವನ್ನು ಪರಿಪೂರ್ಣವಾಗಿ ನಿರಂತರ ಹದಿಮೂರು ವರ್ಷಗಳಷ್ಟು ಕಾಲ ಹಝ್ರತ್ ಪೈಗಂಬರ್(ಸ) ಮತ್ತು ಅವರ ಅನುಚರರು ತೋರಿಸಿದರು. ಸದಾ ವಿಪತ್ತುಗಳನ್ನು ಎದುರಿಸುತ್ತಾ ಹದಿಮೂರು ವರ್ಷಗಳಷ್ಟು ದೀರ್ಘಕಾಲ ಈ ವಿಧದ ಸಹನೆದೋರುವುದು ಅಪ್ರತಿಮವಾದ ಕಾರ್ಯವಾಗಿದೆ. ಇದರ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ ಹಿಂದಿನ ಕಾಲದ ಸಾತ್ವಿಕರಲ್ಲಿ ಇಂತಹ ಸಹನೆಯ ಉದಾಹರಣೆ ಎಲ್ಲಿದೆ ಎಂದು ತೋರಿಸಿಕೊಡಲಿ.

ಇಲ್ಲಿ ಇನ್ನೊಂದು ವಿಷಯವನ್ನು ನೆನಪಿಡಬೇಕಾಗಿದೆ. ಇಷ್ಟೆಲ್ಲ ದೌರ್ಜನ್ಯಗಳನ್ನು ತನ್ನ ಅನುಯಾಯಿಗಳ ವಿರುದ್ಧ ಶತ್ರುಗಳು ಮಾಡಿದಾಗ ನಮ್ಮ ಪೈಗಂಬರ್(ಸ) ಸ್ವತಃ ಯೋಚಿಸಿ ಯಾವುದಾದರೂ ಪ್ರತಿರೋಧಕ ಕ್ರಮವನ್ನು ಅನುಚರರಿಗೆ ಹೇಳಿಕೊಡಲಿಲ್ಲ. ಬದಲಾಗಿ **ಈ ಸಕಲ ದೌರ್ಜನ್ಯಗಳನ್ನು ಸಹಿಸಿರಿ** ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಪ್ರತಿಕಾರ ಮಾಡಲು ಯಾರಾದರೂ ಅನುಮತಿ ಕೇಳಿದರೆ ಕೂಡ ಅವರನ್ನು ತಡೆಯುತ್ತಿದ್ದರು ಮತ್ತು ತನ್ನೊಡನೆ ಸಹನೆದೋರಲು ಆಜ್ಞಾಪಿಸಲಾಗಿದೆ ಎಂದು ಹೇಳುತ್ತಿದ್ದರು. ಒಟ್ಟಿನಲ್ಲಿ ಹೋರಾಡಲು ದೈವಿಕ ಆಜ್ಞೆ ಬರುವ ವರೆಗೂ ಸಹನೆದೋರಲು ಹಝ್ರತ್ ಪೈಗಂಬರರು(ಸ) ತಾಕೀತು ಮಾಡುತ್ತಲೇ ಇದ್ದರು. ಇಂತಹ ಸಹನೆಯ ಉದಾಹರಣೆಯನ್ನು ನೀವು ಆದಿಯಿಂದ ಅಂತ್ಯದ ವರೆಗಿನ ಎಲ್ಲ ಸಮುದಾಯಗಳಲ್ಲೂ ಹುಡುಕಿರಿ. ನಿಮಗೆ ಸಾಧ್ಯವಿದ್ದರೆ ಇದರ ಉದಾಹರಣೆಯನ್ನು ಹಝ್ರತ್ ಮೂಸಾರ(ಅ) ಸಮುದಾಯದಲ್ಲಿ ಅಥವಾ ಹಝ್ರತ್ ಈಸಾರ(ಅ) ಶಿಷ್ಯರಲ್ಲಿ ಕಂಡುಹಿಡಿದು ನಮಗೆ ತೋರಿಕೊಡಿರಿ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮುಸ್ಲಿಮರ ಬಳಿ ಸಹನೆಯ, ದುಷ್ಟ ಕೆಲಸಗಳನ್ನು ಮಾಡದೇ ಇರುವುದರ ಮತ್ತು ಶ್ರೇಷ್ಠ ನೈತಿಕ ಗುಣಗಳ ಮಾದರಿಯಿದೆ. ಅವುಗಳ ಕಾರಣದಿಂದ ಪೂರ್ತಿ ಲೋಕದ ಮೇಲೆ ಮುಸ್ಲಿಮರಿಗೆ ಅಭಿಮಾನವಿದೆ. ಹೀಗಿರುವಾಗ ಈಗ ಈ ಮಾದರಿಯನ್ನು ಬಿಟ್ಟುಬಿಡುವುದು ಎಂತಹ ಮೂರ್ಖತನ, ದೌರ್ಭಾಗ್ಯ ಮತ್ತು ದೋಷಕರ ಸಂಗತಿಯಾಗಿದೆ! ಅಲ್ಲಾಹನು ಮೂಢ ಮೌಲವಿಗಳಿಗೆ ಮಾರ್ಗದರ್ಶನ ನೀಡಲಿ. ದಬ್ಬಾಳಿಕೆಯ, ಕ್ರೂರ ಮತ್ತು ಮಾನವೀಯ ಸ್ವಭಾವ ಗುಣಗಳಿಗೆ ವಿರುದ್ಧವಾದ ಕೃತ್ಯಗಳಲ್ಲಿ ಸ್ವರ್ಗದ ಕೀಲಿಗೈ ಇದೆ ಎಂದು ಹೇಳಿ ಮೌಲವಿಗಳು ಸಾಮಾನ್ಯ ಜನರನ್ನು ಮೋಸ ಮಾಡಿರುವರು. ನಮಗೆ ಯಾವುದೇ ಪರಿಚಯವಿಲ್ಲದ ಒಬ್ಬನು ತನ್ನದೇ

ಯೋಚನೆಗಳಲ್ಲಿ ಪೇಟೆಯಲ್ಲಿ ಹೋಗುತ್ತಿರುವಾಗ ಆತನನ್ನು ಕೊಲ್ಲಲು ಆತನ ಮೇಲೆ ಗುಂಡು ಹಾರಿಸುವುದು ಧಾರ್ಮಿಕ ಕೃತ್ಯವಾಗುವುದೇ? ಇದು ಸತ್ಕರ್ಮವಾಗಿದ್ದರೆ ವನ್ಯ ಮೃಗಗಳು ಇಂತಹ ಸತ್ಕರ್ಮ ಮಾಡುವುದರಲ್ಲಿ ಮನುಷ್ಯರಿಗಿಂತ ಮುಂದೆ ಇವೆ.

**ಸುಬ್‌ಹಾನಲ್ಲಾಹ್!** (ಅಲ್ಲಾಹನು ಪರಿಶುದ್ಧನು) ಆ ಜನರು ಎಷ್ಟು ಸಾತ್ವಿಕರು ಮತ್ತು ಪ್ರವಾದಿಗಳ ಆತ್ಮ ತಮ್ಮೊಳಗೆ ಹೊಂದಿದವರು ಆಗಿದ್ದರು. ನಿಮ್ಮನ್ನು ತುಂಡು ತುಂಡು ಮಾಡಿದರೂ ಪ್ರತೀಕಾರ ಮಾಡಬೇಡಿರಿ ಎಂದು ಅವರಿಗೆ ಮಕ್ಕದಲ್ಲಿ ಆದೇಶ ನೀಡಲಾಗಿತ್ತು. ಅವರು ಈ ಆಜ್ಞೆಯನ್ನು ಪಡೆದ ನಂತರ ಹಾಲು ಕುಡಿಯುವ ಶಿಶುಗಳ ಹಾಗೆ ಬಲಹೀನರೂ ಮುಗ್ಧರೂ ಕೈಕಾಲುಗಳಲ್ಲಿ ಆಗಲಿ ಬಲವಿಲ್ಲದವರೂ ಎಂಬಂತೆ ಆದರು. ಅವರಲ್ಲಿ ಕೆಲವರು ಹೇಗೆ ಕೊಲ್ಲಲ್ಪಟ್ಟರು ಎಂದರೆ, ಎರಡು ಒಂಟೆಗಳನ್ನು ಜೊತೆಯಾಗಿ ಒಂದು ಸ್ಥಳದಲ್ಲಿ ನಿಲ್ಲಿಸಲಾಯಿತು. ವ್ಯಕ್ತಿಯ ಒಂದು ಕಾಲನ್ನು ಒಂದು ಒಂಟೆಯ ಕಾಲಿನೊಂದಿಗೆ ಕಟ್ಟಲಾಯಿತು. ಇನ್ನೊಂದು ಕಾಲನ್ನು ಮತ್ತೊಂದು ಒಂಟೆಯ ಕಾಲಿಗೆ ಕಟ್ಟಲಾಯಿತು. ಅನಂತರ ಒಂಟೆಗಳನ್ನು ಪರಸ್ಪರ ವಿರುದ್ಧ ದಿಕ್ಕುಗಳಿಗೆ ಓಡಿಸಲಾಯಿತು. ಹೀಗೆ ಅವರು ಒಂದೇ ಕ್ಷಣದಲ್ಲಿ ಕ್ಯಾರೆಟ್ ಅಥವಾ ಮೂಲಂಗಿ ಎಂಬಂತೆ ಸೀಳಲ್ಪಟ್ಟರು.

ಆದರೆ ಮುಸ್ಲಿಮರು ಮತ್ತು ವಿಶಿಷ್ಟವಾಗಿ ಮೌಲವಿಗಳು ಈ ಘಟನೆಗಳನ್ನು ಕಡೆಗಣಿಸಿರುವರು ಎಂಬುದು ಖೇದಕರ. ಲೋಕವಿಡೀ ಅವರ ಬೇಟೆಯ ಮೃಗವೆಂದು ಅವರು ಈಗ ಭಾವಿಸಿದ್ದಾರೆ. ಒಂದು ಜಿಂಕೆ ಕಾಡಿನಲ್ಲಿರುವುದಾಗಿ ತಿಳಿದು ಒಬ್ಬ ಬೇಟೆಗಾರ ಅವಿತುಕೊಂಡು ಅದರ ಕಡೆಗೆ ಚಲಿಸಿ ಅನಂತರ ಸಂದರ್ಭ ಸಿಗುವಾಗ ಬಂದೂಕಿನಿಂದ ಗುಂಡು ಹಾರಿಸುವ ವ್ಯಕ್ತಿಯ ಹಾಗೆ ಇಂದಿನ ಬಹುತೇಕ ಮೌಲವಿಗಳ ಸ್ಥಿತಿಯಾಗಿದೆ. ಅವರು ಮಾನವೀಯ ಸಹಾನುಭೂತಿಯ ಪಾಠದಿಂದ ಒಂದು ಅಕ್ಷರ ಕೂಡ ಕಲಿಯಲಿಲ್ಲ. ಅವರ ಪ್ರಕಾರ ಒಬ್ಬ ನಿರಪರಾಧಿ ವ್ಯಕ್ತಿಯ ಮೇಲೆ ಗುಂಡು ಹಾರಿಸುವುದು ಇಸ್ಲಾಮ್ ಆಗಿದೆ. ಹಝ್ರತ್ ಪೈಗಂಬರರ(ಸ) ಅನುಚರರ ಹಾಗೆ ಹೊಡೆತ ತಿಂದು ಸಹನೆದೋರುವಂತಹ ಜನರು ಇವರಲ್ಲಿ ಯಾರಿದ್ದಾರೆ! ಯಾವುದಾದರೂ ಅಪರಾಧ ಮಾಡಿದ ಬಗ್ಗೆ ಸಾಕ್ಷ್ಯಾಧಾರ ಇಲ್ಲವಾದರೂ ಒಬ್ಬ ಅಪರಿಚಿತ ವ್ಯಕ್ತಿಯನ್ನು ಆತನು ಅಜಾಗರೂಕನಾಗಿರುವಾಗ, ವಿನಾ ಕಾರಣ ಚೂರಿಯಿಂದ ತುಂಡು ತುಂಡುಮಾಡಲು ಅಥವಾ ಗುಂಡು ಹಾರಿಸಿ ಕೊಂದು ಹಾಕಲು ಅಲ್ಲಾಹನು ನಮಗೆ ಆಜ್ಞೆ ನೀಡಿರುವನೋ? ಮುಗ್ಧರಾದ, ನಿರಪರಾಧಿಗಳಾದ

ಮತ್ತು ಯಾರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಲಿಲ್ಲವೋ ಅಂತಹ ದೇವನ ಸೃಷ್ಟಿಗಳನ್ನು ಕೊಲ್ಲುತ್ತಾ ಹೋದರೆ ನೀವು ಸ್ವರ್ಗವನ್ನು ಪ್ರವೇಶಿಸುವಿರಿ ಎಂದು ಕಲಿಸುವ ಧರ್ಮ ಅಲ್ಲಾಹನ ಕಡೆಯಿಂದ ಆಗಿರಲು ಸಾಧ್ಯವೇ? ನಮ್ಮೊಂದಿಗೆ ಯಾವುದೇ ಹಳೆಯ ಹಗೆತನ ಇಲ್ಲದ, ಮಾತ್ರವಲ್ಲ ನಮಗೆ ಪರಿಚಯ ಕೂಡ ಇಲ್ಲದ ಒಬ್ಬ ವ್ಯಕ್ತಿಯು ತನ್ನ ಮಕ್ಕಳಿಗಾಗಿ ಏನಾದರೂ ವಸ್ತು ಖರೀದಿ ಮಾಡುವಾಗ ಅಥವಾ ಆತನು ತನ್ನ ಯಾವುದಾದರೂ ಕೆಲಸದಲ್ಲಿ ನಿರತನಾಗಿರುವಾಗ ನಾವು ಅನ್ಯಾಯವಾಗಿ ಆತನ ಮೇಲೆ ಗುಂಡು ಹಾರಿಸಿ ಆತನ ಪತ್ನಿಯನ್ನು ವಿಧವೆ ಮತ್ತು ಮಕ್ಕಳನ್ನು ಅನಾಥರನ್ನಾಗಿ ಮಾಡಿ ಮನೆಯವರನ್ನು ದುಃಖಕ್ಕೆ ಈಡು ಮಾಡುವುದು ಎಷ್ಟು ಖೇದಕರವೂ ಲಜ್ಜಾಹೀನವೂ ಆದ ಕೃತ್ಯವಾಗಿದೆ! ಈ ವಿಧಾನ ಯಾವ ಹದೀಸಿನಲ್ಲಿದೆ ಅಥವಾ ಪವಿತ್ರ ಖುರ್‌ಆನಿನ ಯಾವ ವಚನದಲ್ಲಿ ಬರೆಯಲಾಗಿದೆ? ಇದಕ್ಕೆ ಉತ್ತರ ನೀಡಬಲ್ಲ ಯಾವುದಾದರೂ ಮೌಲವಿ ಇರುವನೇ? ಅವಿವೇಕಿಗಳು ಜಿಹಾದ್ ಎಂಬ ಹೆಸರು ಆಲಿಸಿರುವರು ಮತ್ತು ಅದನ್ನು ನೆಪವನ್ನಾಗಿ ಮಾಡಿಕೊಂಡು ತಮ್ಮ ಸ್ವಾರ್ಥ ಉದ್ದೇಶಗಳನ್ನು ಈಡೇರಿಸಲು ಬಯಸುತ್ತಾರೆ ಅಥವಾ ಅವರು ಹುಚ್ಚುತನದಿಂದ ರಕ್ತಪಾತ ಮಾಡುತ್ತಿದ್ದಾರೆ.

ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಇಸ್ಲಾಮ್ ಖಡ್ಗವೆತ್ತಿದ್ದು ಅನೇಕ ಮುಸ್ಲಿಮರು ಅವಿಶ್ವಾಸಿಗಳ ಖಡ್ಗದ ಮೂಲಕ ವಧಿಸಲ್ಪಟ್ಟ ನಂತರವಾಗಿತ್ತು ಎಂದು ನಾನು ಈಗ ತಾನೆ ಬರೆದಿದ್ದೆ. ಯಾರು ಖಡ್ಗದಿಂದ ಕೊಲ್ಲುತ್ತಾರೋ ಅವರು ಖಡ್ಗದಿಂದಲೇ ಕೊಲ್ಲಲ್ಪಡಬೇಕೆಂದು ಕೊನೆಗೆ ಅಲ್ಲಾಹನ ಅಭಿಮಾನ ನಿರ್ಧರಿಸಿತು. ಅಲ್ಲಾಹನು ಬಹಳ ಕೃಪಾಳೂ ಕರುಣಾಳೂ ತಾಳ್ಮೆಯುಳ್ಳವನೂ ಸಂಯಮ ತೋರಿಸುವವನೂ ಆಗಿದ್ದಾನೆ. ಆದರೆ ಸಾತ್ವಿಕರಿಗಾಗಿ ಅಭಿಮಾನವನ್ನು ಹೊಂದಿರುವವನೂ ಆಗಿದ್ದಾನೆ. ಈ ಕಾಲದಲ್ಲಿ ಮುಸ್ಲಿಮರನ್ನು ಧಾರ್ಮಿಕ ಕಾರಣದಿಂದ ಕೊಲ್ಲದಿರುವಾಗ, ಯಾವ ಆದೇಶದ ಅನುಸಾರ ಮುಸ್ಲಿಮರು ನಿರಪರಾಧಿ ಜನರನ್ನು ಕೊಲ್ಲುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತದೆ.

ಇಸ್ಲಾಮನ್ನು ಅಪಕೀರ್ತಿಗೊಳಿಸುವಂತಹ ಇಂತಹ ನಿರರ್ಥಕ ಕೆಲಸಗಳಿಂದ ಅವರ ಮೌಲವಿಗಳು ಅವರನ್ನು ಏಕೆ ತಡೆಯುತ್ತಿಲ್ಲ? ಈ ಆಂಗ್ಲೇಯ ಸರಕಾರದ ಅಧೀನದಲ್ಲಿ ಮುಸ್ಲಿಮರಿಗೆ ಎಷ್ಟು ಸುಖಸೌಕರ್ಯಗಳಿವೆ? ಅವುಗಳನ್ನು ಯಾರಿಗಾದರೂ ಎಣಿಸಲು ಸಾಧ್ಯವೇ? ಸಿಖ್ಖರ ಆಡಳಿತ ಕಾಲವನ್ನು ಕಂಡ ಅನೇಕ ಜನರು ಈಗಲೂ ಜೀವಿಸುತ್ತಿರಬಹುದು. ಸಿಖ್ಖರ ಆಳ್ವಿಕೆ ಕಾಲದಲ್ಲಿ ಮುಸ್ಲಿಮರ ಮತ್ತು

ಇಸ್ಲಾಮಿನ ಸ್ಥಿತಿ ಹೇಗಿತ್ತು ಎಂದು ಅವರೇ ಹೇಳಲಿ. ಇಸ್ಲಾಮಿನ ಒಂದು ಅವಶ್ಯಕ ಅನುಷ್ಠಾನ ಕರ್ಮವಾದ ಅಧ಼ಾನ್ ಕರೆ (ಬಾಂಗ್) ನೀಡುವುದನ್ನು ಅಪರಾಧವೆಂದು ಗಣಿಸಲಾಗುತ್ತಿತ್ತು. ಉಚ್ಚಧ್ವನಿಯಲ್ಲಿ ಅಧ಼ಾನ್ ಕರೆ ನೀಡಿ ಸಿಖ್ಖರ ಖಡ್ಗಗಳಿಂದಲೂ ಈಟಿಗಳಿಂದಲೂ ರಕ್ಷಣೆ ಪಡೆಯುವ ಧೈರ್ಯ ಯಾರಿಗಿತ್ತು. ಸಿಖ್ಖರ ಅನಾವಶ್ಯಕ ಹಸ್ತಕ್ಷೇಪದಿಂದ ಮುಸ್ಲಿಮರನ್ನು ಬಿಡಿಸಿ ಆಂಗ್ಲೇಯ ಸರಕಾರದ ಶಾಂತಿದಾಯಕ ಆಡಳಿತದಲ್ಲಿ ಪ್ರವೇಶಗೊಳಿಸಿದ್ದು ಅಲ್ಲಾಹನು ಮಾಡಿದ ಕೆಟ್ಟಕೆಲಸವೇ? ಈ ಸರಕಾರದ ಆಗಮನದಿಂದ ಪಂಜಾಬಿನಲ್ಲಿ ಮುಸ್ಲಿಮರು ಹೊಸದಾಗಿ ಇಸ್ಲಾಂ ಸ್ವೀಕಾರ ಮಾಡಿದಂತೆ ಆಯಿತು. ಉಪಕಾರಕ್ಕೆ ಪ್ರತಿಯಾಗಿ ಉಪಕಾರವನ್ನು ಮಾಡಬೇಕಾಗಿದೆ. ಆದ್ದರಿಂದ ಸಾವಿರಾರು ಪ್ರಾರ್ಥನೆಗಳ ನಂತರ ಸಿಖ್ಖರ ಕಾಲಘಟ್ಟಕ್ಕೆ ಬದಲಾಗಿ ನಮಗೆ ಅಲ್ಲಾಹನಿಂದ ದೊರಕಿದ ಈ ಅನುಗ್ರಹವನ್ನು ತಿರಸ್ಕರಿಸಬಾರದು.

ನನ್ನನ್ನು **ಮಸೀಹ್ ಮೌಊದ್** ಎಂದು ನಂಬುವ ನನ್ನ ಜಮಾಅತಿನ ಜನರಿಗೆ ವಿಶೇಷವಾಗಿ ಮನವರಿಕೆ ಮಾಡಿಕೊಡಲು ಬಯಸುತ್ತೇನೆ. ಅವರು ಯಾವಾಗಲೂ ಈ ಕೊಳಕು ಸ್ವಭಾವಗಳಿಂದ ದೂರಸರಿಯಬೇಕು. ಅಲ್ಲಾಹನು ನನ್ನನ್ನು ಮಸೀಹ್ ಮೌಊದ್ ಆಗಿ ಕಳುಹಿಸಿರುವನು ಮತ್ತು ಹಝ್ರತ್ ಮಸೀಹಿಬ್ನು ಮರ್‌ಯಮರ ನಿಲುವಂಗಿಯನ್ನು ನನಗೆ ತೊಡಿಸಿರುವನು. ಆದುದರಿಂದ ನಾನು ನಿಮಗೆ ಉಪದೇಶಿಸುತ್ತೇನೆ. ನೀವು ಕೆಡುಕನ್ನು ವರ್ಜಿಸಿರಿ ಮತ್ತು ಮಾನವರೊಂದಿಗೆ ನಿಜವಾದ ಸಹಾನುಭೂತಿ ತೋರಿಸಿರಿ. ನಿಮ್ಮ ಹೃದಯಗಳನ್ನು ಹಗೆಯಿಂದಲೂ ಅಸೂಯೆಯಿಂದಲೂ ಮುಕ್ತವನ್ನಾಗಿ ಮಾಡಿರಿ. ಈ ರೀತಿ ಮಾಡಿದರೆ ನೀವು ದೇವದೂತರ ಹಾಗೆ ಆಗುವಿರಿ. ಯಾವ ಧರ್ಮದಲ್ಲಿ ಮಾನವರ ಬಗ್ಗೆ ಸಹಾನುಭೂತಿ ಇಲ್ಲವೋ ಅದು ಕೊಳಕು ಧರ್ಮವಾಗಿದೆ. ಸ್ವಾರ್ಥ ಮತ್ತು ದ್ವೇಷಗಳ ಮುಳ್ಳುಗಳಿಂದ ತುಂಬಿದ ಮಾರ್ಗ ಎಷ್ಟು ಕೊಳಕಾಗಿದೆ! ನನ್ನ ಜೊತೆಗಿರುವ ನೀವು ಹಾಗೆ ಆಗಬೇಡಿರಿ. ಧರ್ಮದಿಂದ ಪಡೆಯಬೇಕಾದ ಪ್ರಯೋಜನವೇನು ಎಂದು ನೀವು ಯೋಚಿಸಿರಿ. ಸದಾ ಜನರಿಗೆ ನೋವುಂಟು ಮಾಡುವುದನ್ನು ನಿಮ್ಮ ಸ್ವಭಾವ ಗುಣವನ್ನಾಗಿ ಮಾಡುವುದೇ? ಹಾಗೆ ಅಲ್ಲ. ಧರ್ಮದ ಉದ್ದೇಶ ಅಲ್ಲಾಹನ ಗುಣಗಳನ್ನು ಜೀವನದಲ್ಲಿ ಗಳಿಸುವುದಾಗಿದೆ. ಅಲ್ಲಾಹನ ಗುಣಗಳು ಮನುಷ್ಯನಲ್ಲಿ ಪ್ರವೇಶಿಸುವ ತನಕ ಆ ಜೀವನ ಯಾರಿಗೂ ಲಭಿಸಿಲ್ಲ; ಮುಂದೆಯೂ ಲಭಿಸಲಾರದು. ಅಲ್ಲಾಹನಿಗೋಸ್ಕರ ಎಲ್ಲರ ಮೇಲೆಯೂ ದಯೆದೋರಿರಿ. ಹಾಗೆ ಮಾಡಿದರೆ ಆಕಾಶದಿಂದ ನಿಮ್ಮ ಮೇಲೆ ದಯೆದೋರಲ್ಪಡುವುದು. ನೀವು ಬನ್ನಿರಿ, ನಾನು ನಿಮಗೆ ಎಂತಹ ಒಂದು ಮಾರ್ಗ ಕಲಿಸುವೆನೆಂದರೆ, ನಿಮ್ಮ ಪ್ರಕಾಶ ಇತರ ಎಲ್ಲ ಪ್ರಕಾಶಗಳ ಮೇಲೆ ಜಯ ಗಳಿಸುವುದು.

ಅದೇನೆಂದರೆ, ನೀವು ನಿಮ್ಮ ಎಲ್ಲ ನೀಚ ಗುಣ, ಹಗೆತನ ಮತ್ತು ಅಸೂಯೆಗಳನ್ನು ಬಿಟ್ಟುಬಿಡಿರಿ. ಮಾನವರ ಹಿತೈಷಿ ಆಗಿರಿ. ನೀವು ಅಲ್ಲಾಹನಲ್ಲಿ ಲೀನರಾಗಿರಿ ಮತ್ತು ಅವನೊಂದಿಗೆ ಉನ್ನತ ಮಟ್ಟದ ಪರಿಶುದ್ಧಿಯನ್ನು ಗಳಿಸಿರಿ. ಅದ್ಭುತಗಳು ಘಟಿಸುವ, ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಮತ್ತು ದೇವದೂತರು ಸಹಾಯ ಮಾಡಲು ಇಳಿದು ಬರುವ ಮಾರ್ಗ ಇದೇ ಆಗಿದೆ. ಆದರೆ ಇದು ಒಂದು ದಿನದಲ್ಲಿ ಈಡೇರುವ ಕೆಲಸವಲ್ಲ. ನೀವು ಆಧ್ಯಾತ್ಮಿಕವಾಗಿ ಅಭಿವೃದ್ಧಿ ಗಳಿಸಿರಿ. ಅಭಿವೃದ್ಧಿ ಗಳಿಸುತ್ತಾ ಇರಿ. ನೀವು ಅಗಸನಿಂದ ಪಾಠ ಕಲಿಯಿರಿ. ಆತನು ಮೊದಲು ಬಟ್ಟೆಗಳನ್ನು ನೀರಿನಲ್ಲಿ ಕುದಿಸುತ್ತಾ ಹೋಗುತ್ತಾನೆ. ಕೊನೆಗೆ ಬೆಂಕಿಯ ತಾಪ ಬಟ್ಟೆಗಳಿಂದ ಮಾಲಿನ್ಯಗಳನ್ನು ಬೇರ್ಪಡಿಸುತ್ತದೆ. ಪುನಃ ಬೆಳಿಗ್ಗೆ ಎದ್ದು ಬಟ್ಟೆಗಳನ್ನು ನೀರಿನಲ್ಲಿ ನೆನೆಸುತ್ತಾನೆ. ಪದೇ ಪದೇ ಕಲ್ಲಿಗೆ ಬಡಿಯುತ್ತಾನೆ. ಹಾಗೆ ಬಟ್ಟೆಯಲ್ಲಿದ್ದ ಕೊಳಕು ಬೆಂಕಿಯಲ್ಲಿ ಕುದಿಸಿದಾಗ ಮತ್ತು ಅಗಸನು ಕಲ್ಲಿಗೆ ಬಡಿದಾಗ ಹೊರಟು ಹೋಗಲು ತೊಡಗುತ್ತದೆ. ಹೀಗೆ ಬಟ್ಟೆಗಳು ಮೊದಲಿದ್ದ ಹಾಗೆ ಬಿಳಿಯಾಗುತ್ತದೆ. ಮನುಷ್ಯನ ಆತ್ಮ ಪರಿಶುದ್ಧಿಯ ವಿಧಾನವು ಹೀಗೆಯೇ ಆಗಿದೆ. ನಿಮ್ಮ ಪರಿಪೂರ್ಣ ಮೋಕ್ಷವು ಈ ಸ್ವಚ್ಛತೆಯನ್ನು ಅವಲಂಬಿಸಿದೆ. ಇದನ್ನೇ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ.

قَدْ اَفْلَحَ مَنْ زَكّٰىهَا – **ಖದ್ ಅಫ್‌ಲಹ ಮನ್‌ಝುಕ್ಕಾಹ –** ಅರ್ಥ: ಅದನ್ನು (ಆತ್ಮವನ್ನು) ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗೊಳಿಸಿದನು. **(ಪವಿತ್ರ ಖುರ್‌ಆನ್ 91:10).** ಎಂದರೆ ವಿವಿಧ ರೀತಿಗಳ ಮಾಲಿನ್ಯದಿಂದ ಮುಕ್ತನಾಗಿ ಪರಿಶುದ್ಧನಾದವನು ಮೋಕ್ಷ ಗಳಿಸುತ್ತಾನೆ.

ನೋಡಿರಿ, ನಾನು ಒಂದು ಆಜ್ಞೆಯೊಂದಿಗೆ ನಿಮ್ಮ ಬಳಿಗೆ ಆಗಮಿಸಿದ್ದೇನೆ. ಅದೇನೆಂದರೆ, ಈಗ ಖಡ್ಗದ ಜಿಹಾದನ್ನು ಕೊನೆಗೊಳಿಸಲಾಗಿದೆ. ಆದರೆ ನಿಮ್ಮ ಆತ್ಮ ಶುದ್ಧೀಕರಣದ ಜಿಹಾದ್ ಜಾರಿಯಲ್ಲಿದೆ. ನಾನು ಇದನ್ನು ನನ್ನ ಸ್ವಂತ ಅಭಿಪ್ರಾಯ ಪ್ರಕಾರ ಹೇಳುತ್ತಾ ಇಲ್ಲ. ಅಲ್ಲಾಹನ ನಿರ್ಧಾರ ಹೀಗೆಯೇ ಆಗಿದೆ. ನೀವು ಸಹೀಹ್ ಬುಖಾರಿಯ ಆ ಹದೀಸಿನ ಬಗ್ಗೆ ಚಿಂತಿಸಿರಿ. ಅದರಲ್ಲಿ ಮಸೀಹ್ ಮೌಊದ್‌ರ ಬಗ್ಗೆ ವಿವರಣೆ ನೀಡುತ್ತಾ ಹೀಗೆ ಬರೆಯಲಾಗಿದೆ: **ಯಝಉಲ್ ಹರ್‌ಬ –** ಎಂದರೆ ಮಸೀಹ್ ಆಗಮಿಸಿ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸುವರು. ಆದುರಿಂದ ನನ್ನ ಸೈನ್ಯದಲ್ಲಿ ಪ್ರವೇಶಿಸಿದವನಿಗೆ ನಾನು ಆಜ್ಞೆ ನೀಡುತ್ತೇನೆ. ಅವರು ಇಂತಹ ಯೋಚನೆಗಳಿಂದ ದೂರಸರಿಯಬೇಕು. ಅವರು ತಮ್ಮ ಹೃದಯಗಳನ್ನು ಶುದ್ಧೀಕರಿಸಬೇಕು. ಮಾನವರಿಗೆ ದಯೆದೋರುವುದನ್ನು ವರ್ಧಿಸಬೇಕು. ನೋವು

ಅನುಭವಿಸುವವರೊಡನೆ ಸಹಾನುಭೂತಿ ತೋರಿಸುವವರಾಗಿರಿ. ಭೂಮಿಯಲ್ಲಿ ಶಾಂತಿ ಸೌಹಾರ್ದವನ್ನು ಹರಡಿರಿ. ಇದರಿಂದ ನಿಮ್ಮ ಧರ್ಮ ಹಬ್ಬುವುದು. ಇದು ಹೇಗೆ ಸಾಧ್ಯವೆಂದು ನೀವು ಆಶ್ಚರ್ಯಗೊಳ್ಳಬೇಡಿರಿ. ಯಾವ ರೀತಿಯಲ್ಲಿ ಸಾಮಾನ್ಯ ವಿಧಾನಗಳನ್ನು ಬಳಸದೆ ಅಲ್ಲಾಹನು ಜನರ ಶಾರೀರಿಕ ಆವಶ್ಯಕತೆಗಳಿಗೋಸ್ಕರ ಆಧುನಿಕ ಸಂಶೋಧನೆಗಳಲ್ಲಿ ಭೂಮಿಯ ಎಲ್ಲ ವಸ್ತುಗಳನ್ನು ಉಪಯೋಗಿಸಿರುವನೋ ಮತ್ತು ಯಾವ ರೀತಿಯಲ್ಲಿ ಕುದುರೆಗಳಿಗಿಂತ ಬಹಳ ಹೆಚ್ಚು ವೇಗವಾಗಿ ರೈಲುಗಾಡಿಗಳನ್ನು ಚಲಾಯಿಸಿ ತೋರಿಸಿರುವನೋ, ಅದೇ ರೀತಿಯಲ್ಲಿ ಈಗ ಅವನು ಮನುಷ್ಯರ ಆಧ್ಯಾತ್ಮಿಕ ಆವಶ್ಯಕತೆಗಳಿಗೋಸ್ಕರ ಮನುಷ್ಯರ ಕೈಗಳನ್ನು ಬಳಸದೆ ಆಕಾಶದ ದೇವದೂತರನ್ನು ಉಪಯೋಗಿಸುವನು. ದೊಡ್ಡ ದೊಡ್ಡ ದೈವಿಕ ದೃಷ್ಟಾಂತಗಳು ಪ್ರಕಟವಾಗುವುವು. ಅನೇಕ ಕಣ್ಣುಗಳನ್ನು ತೆರೆಸುವ ಅನೇಕ ಪ್ರಕಾಶಗಳು ಹುಟ್ಟುವುವು. ಅಲ್ಲಾಹನ ಬದಲಾಗಿ ಮನುಷ್ಯರನ್ನು ಮತ್ತು ಇತರ ವಸ್ತುಗಳನ್ನು ದೇವನನ್ನಾಗಿ ಮಾಡಿರುವುದೆಲ್ಲವೂ ತಪ್ಪು ಕೃತ್ಯಗಳಾಗಿವೆ ಎಂದು ಆಗ ಜನರು ತಿಳಿದುಕೊಳ್ಳುವರು. ಆದುದರಿಂದ ನೀವು ಸಹನೆಯಿಂದ ನೋಡುತ್ತಾ ಇರಿ. ಏಕೆಂದರೆ ಅಲ್ಲಾಹನು ತನ್ನ **'ತೌಹೀದ್'**ನ (ಏಕತ್ವ) ಬಗ್ಗೆ ನಿಮಗಿಂತ ಹೆಚ್ಚು ಅಭಿಮಾನಿಯಾಗಿರುವನು. ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವವರೊಂದಿಗೆ ಸೇರಿಸಲ್ಪಡದಿರಲಿಕ್ಕಾಗಿ ನೀವು ಪ್ರಾರ್ಥನೆಯಲ್ಲಿ ತಲ್ಲೀನರಾಗಿರಿ.

ಎಲೈ ಸತ್ಯದ ದಾಹ ಮತ್ತು ಹಂಬಲ ಹೊಂದಿರುವವರೇ! ನೀವು ಆಲಿಸಿರಿ. ಇದು ಆರಂಭದಿಂದಲೇ ವಾಗ್ದಾನ ನೀಡಲ್ಪಟ್ಟ ದಿನವಾಗಿದೆ. ಅಲ್ಲಾಹನು ಇವುಗಳನ್ನು ದೀರ್ಘಕಾಲ ಮುಂದೂಡಲಾರನು. ಒಂದು ಎತ್ತರವಾದ ಗೋಪುರದ ಮೇಲೆ ಬೆಳಕನ್ನು ಇರಿಸಿದರೆ ದೂರ ದೂರದ ತನಕ ಅದರ ಪ್ರಕಾಶ ಹರಡುತ್ತದೆ ಎಂದು ನೀವು ನೋಡುತ್ತೀರಿ. ಹಾಗೆಯೇ ಆಕಾಶದಲ್ಲಿ ಮಿಂಚು ಹೊಳೆಯುವಾಗ ಎಲ್ಲ ದಿಕ್ಕುಗಳು ಅದರ ಜೊತೆಗೆ ಬೆಳಗುತ್ತವೆ. ಹೀಗೆಯೇ ಈ ದಿನಗಳಲ್ಲಿ ಸಂಭವಿಸುವುದು. ಏಕೆಂದರೆ ಮಸೀಹರ ಕರೆ ಮಿಂಚಿನ ಹಾಗೆ ಲೋಕದಾದ್ಯಂತ ಹಬ್ಬುವುದು ಅಥವಾ ಎತ್ತರವಾದ ಗೋಪುರದ ದೀಪದ ಹಾಗೆ ಲೋಕದ ನಾಲ್ಕು ದಿಕ್ಕುಗಳಲ್ಲೂ ಹಬ್ಬುವುದು ಎಂಬ ತನ್ನ ಭವಿಷ್ಯವಾಣಿಯನ್ನು ಈಡೇರಿಸಲಿಕ್ಕಾಗಿ ಅಲ್ಲಾಹನು ಭೂಮಿಯಲ್ಲಿ ಪ್ರತಿಯೊಂದು ಸಾಮಗ್ರಿಯನ್ನು ಒದಗಿಸಿದ್ದಾನೆ. ರೈಲುಬಂಡಿ, ತಂತಿ, ಉಗಿಹಡಗು, ಅಂಚೆಯ ಉತ್ತಮ ವ್ಯವಸ್ಥೆ, ಸಂಚಾರಕ್ಕಿರುವ ಸುಲಭ ಸೌಕರ್ಯಗಳನ್ನು ಪೂರ್ಣವಾಗಿ ಜಾರಿಗೊಳಿಸಿದ್ದಾನೆ. ಮಸೀಹ್ ಮೌಊದರ ಆಹ್ವಾನ ಮಿಂಚಿನ ಹಾಗೆ ಪ್ರತಿಯೊಂದು ಮೂಲೆಗಳನ್ನು ಪ್ರಕಾಶಿಸುವುದು ಎಂಬ ಭವಿಷ್ಯವಾಣಿಯನ್ನು ಈಡೇರಿಸಲಿಕ್ಕಾಗಿ

ಇವೆಲ್ಲವನ್ನು ಉಂಟುಮಾಡಲಾಯಿತು. ಹದೀಸಿನಲ್ಲಿ ಮಸೀಹರ ಗೋಪುರದ ಬಗ್ಗೆ ಪ್ರಸ್ತಾಪಿಸಿರುವುದರ ವಾಸ್ತವಿಕ ಅರ್ಥ ಇದೇ ಆಗಿದೆ. ಎಂದರೆ, ಎತ್ತರದ ಗೋಪುರದಿಂದ ಶಬ್ದ ಮತ್ತು ಪ್ರಕಾಶ ದೂರದ ತನಕ ಬೇಗನೆ ವ್ಯಾಪಿಸುವ ಹಾಗೆ ಮಸೀಹರ ಕರೆ ಮತ್ತು ಪ್ರಕಾಶವು ಲೋಕದಲ್ಲಿ ವೇಗವಾಗಿ ಹರಡುವುದು. ಆದ್ದರಿಂದ ರೈಲುಬಂಡಿ, ಟೆಲಿಗ್ರಾಮ್, ಉಗಿಹಡಗು, ಅಂಚೆ ಮುಂತಾದ ಪ್ರಚಾರವನ್ನು ಸುಲಭಗೊಳಿಸುವ ಮತ್ತು ಪ್ರಯಾಣವನ್ನು ಸುಲಭಗೊಳಿಸುವ ವ್ಯವಸ್ಥೆಗಳು ಮಸೀಹರ ಕಾಲದ ಒಂದು ವಿಶಿಷ್ಟ ಚಿಹ್ನೆಯಾಗಿದೆ ಮತ್ತು ಅದರ ಬಗ್ಗೆ ಬಹುತೇಕ ಪ್ರವಾದಿಗಳು ಪ್ರಸ್ತಾಪಿಸಿದ್ದಾರೆ ಹಾಗೂ ಪವಿತ್ರ ಖುರ್‌ಆನ್ ಸಹ ಹೀಗೆ ಹೇಳುತ್ತದೆ: **وَإِذَا الْعِشَارُ عُطِّلَتْ – ವ ಇಧಲ್ ಇಶಾರು ಉತ್ತಿಲತ್** – ಹತ್ತು ಮಾಸ ಗರ್ಭವುಳ್ಳ ಒಂಟೆಗಳು ತ್ಯಜಿಸಲ್ಪಡುವಾಗ. **(ಪವಿತ್ರ ಖುರ್‌ಆನ್ 81:5).** ಎಂದರೆ ಸಾರ್ವತ್ರಿಕ ಪ್ರಚಾರದ ಕಾಲವಾದ ಮಸೀಹ್ ಮೌಊದರ* ಕಾಲದಲ್ಲಿ ಒಂಟೆ ನಿರುಪಯೋಗಿ ಆಗುವುದು. ಎಂದರೆ ಒಂಟೆಗಳ ಆವಶ್ಯಕತೆ ಇಲ್ಲದಂತೆ ಮಾಡುವ ಹೊಸ ಸಂಚಾರ ವ್ಯವಸ್ಥೆ ಉಂಟಾಗುವುದು. ಹದೀಸಿನಲ್ಲೂ ಇದರ ಬಗ್ಗೆ ಹೀಗೆ ಹೇಳಲಾಗಿದೆ: **ಯತ್‌ರುಕುಲ್ ಖಲಾಸ ಫಲಾ ಯುಸ್‌ಆ ಅಲೈಹಾ** – ಎಂದರೆ ಆ ಕಾಲದಲ್ಲಿ ಒಂಟೆಗಳು ಉಪಯೋಗ ಶೂನ್ಯವಾಗುವುವು. ಬೇರೆ ಯಾವುದೇ ಪ್ರವಾದಿಯ ಕಾಲದ ಚಿಹ್ನೆಯಾಗಿ ಇದನ್ನು ಪ್ರಸ್ತಾಪಿಸಲಾಗಿಲ್ಲ. ಆದ್ದರಿಂದ ನೀವು ಕೃತಜ್ಞತೆ ಅರ್ಪಿಸಿರಿ. ಪ್ರಕಾಶವನ್ನು ಹರಡಲು ಆಕಾಶದಲ್ಲಿ ಸಿದ್ಧತೆಗಳು ನಡೆಯುತ್ತಿವೆ ಮತ್ತು ಭೂಮಿಯೂ ಭೌತಿಕ ಅನುಗ್ರಹಗಳಿಂದ ತುಂಬಿದೆ. ನಿಮ್ಮ ತಂದೆ ತಾತಂದಿರು ಕಂಡಿರದಂತಹ ಸೌಕರ್ಯಗಳನ್ನು ನೀವು ಪ್ರಯಾಣ ಮಾಡುವಾಗಲೂ ಯಾತ್ರೆ ಮಾಡದೆ ಇರುವಾಗಲೂ ಅನುಭವಿಸುತ್ತೀರಿ. ಲೋಕವೇ ಹೊಸದಾದಂತೆ ಆಗಿದೆ. ವಿವಿಧ ಋತುಗಳ ಹಣ್ಣುಗಳು ಒಂದೇ ಸಮಯ ಲಭ್ಯ. ಆರು ತಿಂಗಳ ಪ್ರಯಾಣ ಕೆಲವೇ ದಿನಗಳಲ್ಲಿ ಮಾಡಬಹುದಾಗಿದೆ. ಸಾವಿರಾರು ಮೈಲು ದೂರದ ಸಮಾಚಾರಗಳು ಕ್ಷಣದಲ್ಲಿ ಲಭಿಸುತ್ತವೆ. ಪ್ರತಿಯೊಂದು ಕೆಲಸವನ್ನು ಸುಲಭವಾಗಿ ಮಾಡಿ ಮುಗಿಸಲು ಯಂತ್ರಗಳೂ ಉಪಕರಣಗಳೂ ಇವೆ. ಮನೆಯ ಹೂದೋಟದಲ್ಲಿ ಕುಳಿತಂತೆ ನೀವು ರೈಲುಬಂಡಿಯಲ್ಲಿ ಕುಳಿತು ಪ್ರಯಾಣ ಮಾಡಬಹುದಾಗಿದೆ. ಏನು ಭೂಮಿಯಲ್ಲಿ

* ನಾನು ಪದೇ ಪದೇ ಬರೆದಿದ್ದೇನೆ. ಮಸೀಹ್ ಮೌಊದ್ ಎಂದರೆ ಇಸ್ರಾಈಲ್ ಗೋತ್ರಕ್ಕೆ ಆಗಮಿಸಿದ ಪ್ರವಾದಿಯ ಪುನರಾಗಮನವಲ್ಲ. ಬದಲಾಗಿ ಆ ಪ್ರವಾದಿಯ ಸ್ವಭಾಗುಣಗಳನ್ನು ಹೊಂದಿರುವ ವ್ಯಕ್ತಿಯ ಆಗಮನವಾಗಿದೆ. ಹಝ್ರತ್ ಮುಹಮ್ಮದ್‌ರನ್ನು[ಸ] ಮೂಸಾ ಪ್ರವಾದಿಗೆ[ಅ] ಹೋಲಿಕೆಯುಳ್ಳವರು ಎಂದು ತೌರಾತ್ ಹೇಳಿದೆ. ಆದುದರಿಂದ ಮೂಸಾ ಪ್ರವಾದಿಯ ಶೃಂಖಲೆಯಲ್ಲಿ ಕೊನೆಗೆ ಈಸಾ ಮಸೀಹ್ ಆಗಮಿಸಿದ ಹಾಗೆ ಮುಹಮ್ಮದೀ ಶೃಂಖಲೆಯಲ್ಲಿ ಒಬ್ಬ ಮಸೀಹ್ ಆಗಮಿಸಲಿಕ್ಕಿತ್ತು.

ಒಂದು ಕ್ರಾಂತಿ ಸಂಭವಿಸಿಲ್ಲವೇ? ಭೂಮಿಯಲ್ಲಿ ಒಂದು ಅದ್ಭುತಕರ ಪರಿವರ್ತನೆ ಉಂಟಾದಂತೆ ಸರ್ವಶಕ್ತನಾದ ಅಲ್ಲಾಹನು ಆಕಾಶದಲ್ಲಿ ಒಂದು ಅದ್ಭುತಕರ ಕ್ರಾಂತಿ ಉಂಟಾಗಬೇಕೆಂದು ಬಯಸುತ್ತಾನೆ. ಇವೆರಡೂ ಮಸೀಹರ ಕಾಲದ ಚಿಹ್ನೆಗಳಾಗಿವೆ. 20 ವರ್ಷಗಳ ಹಿಂದೆ ಬರೆದ ನನ್ನ ಬರಾಹೀನೆ ಅಹ್ಮದಿಯಾ ಎಂಬ ಗ್ರಂಥದಲ್ಲಿರುವ ಒಂದು ದಿವ್ಯವಾಣಿಯಲ್ಲಿ ಈ ಚಿಹ್ನೆಗಳ ಬಗ್ಗೆ ಸೂಚನೆಯಿದೆ. ಆ ಇಲ್‌ಹಾಮ್ ಹೀಗಿದೆ: – اَنَّ السَّمٰوٰتِ وَالۡاَرۡضَ كَانَتَا رَتۡقًا فَفَتَقۡنٰهُمَا – **ಅನ್ನಸ್ಸಮಾವಾತಿ ವಲ್ ಅರ್‌ಝ ಕಾನತಾ ರತ್‌ಖನ್ ಫಫತಖ್‌ನಾಹುಮಾ** – ಎಂದರೆ, ಭೂಮಿ ಮತ್ತು ಆಕಾಶಗಳು ಒಂದು ಗಂಟುಮೂಟೆಯ ಹಾಗೆ ಕಟ್ಟಲ್ಪಟ್ಟಿದ್ದುವು. ಅವುಗಳಲ್ಲಿ ಇದ್ದ ಮುತ್ತುಗಳು ರಹಸ್ಯವಾಗಿದ್ದುವು. ಮಸೀಹರ ಕಾಲದಲ್ಲಿ ನಾವು ಆ ಎರಡು ಗಂಟುಮೂಟೆಗಳನ್ನು ಬಿಚ್ಚಿದೆವು ಮತ್ತು ಅವುಗಳಲ್ಲಿ ಇದ್ದ ಮುತ್ತುಗಳನ್ನು ಬಹಿರಂಗಗೊಳಿಸಿದೆವು*. **(ಬರಾಹೀನೇ ಅಹ್ಮದಿಯಾ ಭಾಗ – 1, ಪುಟ 611)**

ನೆನಪಿಡಬೇಕಾದುದೇನೆಂದರೆ, ನಾನು ಈ ಕಿರುಪುಸ್ತಿಕೆಯಲ್ಲಿ ವಿಶದವಾಗಿ ಬರೆದಿರುವಂತೆ ಜಿಹಾದ್ ಎಂಬ ಹೆಸರಿನಲ್ಲಿ ಈ ಕಾಲದಲ್ಲಿ ಮುಸ್ಲಿಮೇತರರ ವಿರುದ್ಧ ಆಕ್ರಮಣ ಮಾಡುವ ಪದ್ಧತಿಯು ಇಸ್ಲಾಮ್ ಧರ್ಮದ **ಶರೀಅತ್** (ನೀತಿಸಂಹಿತೆ) ಪ್ರತಿಪಾದಿಸುವ ಜಿಹಾದ್ ಅಲ್ಲ. ಅವರ ವರ್ತನೆ ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಆಜ್ಞೆಗಳಿಗೆ ವಿರುದ್ಧವೂ ಮಹಾ ಪಾಪವೂ ಆಗಿದೆ. ಆದರೆ ಕೆಲವು ಮುಸ್ಲಿಮ್ ಜನ ವಿಭಾಗಗಳಲ್ಲಿ ಇದರ ಪಾಲನೆ ಮಾಡುವುದು ಹಳೆಯ ಅಭ್ಯಾಸವಾಗಿ ಬಿಟ್ಟಿದೆ. ಆದುದರಿಂದ ಈ ಅಭ್ಯಾಸವನ್ನು ಬಿಡುವುದು ಅವರಿಗೆ ಸುಲಭವಾಗಿ ಸಾಧ್ಯವಾಗಲಾರದು. ಬದಲಾಗಿ, ಆ ಜನರು ಅಂತಹ ಉಪದೇಶ ಮಾಡುವವನ ಕಠಿಣ ಶತ್ರುಗಳಾಗಿ ಆತನನ್ನು ಯುದ್ಧ ಪರಾಕ್ರಮದ ಆವೇಶದಿಂದ ಕೊಂದು ಹಾಕುವ ಸಾಧ್ಯತೆಯಿದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ, ಹಿಂದಿನ ಎಲ್ಲ ಅಫ್ಘಾನೀ ಅಮೀರ್‌ಗಳಿಗಿಂತ ಪ್ರಭಾವಶಾಲಿಯಾದ ಈಗಿನ ಕಾಬೂಲಿನ ದೊರೆಯಾದ ಅಮೀರರು ಪ್ರಸಿದ್ಧ ಧರ್ಮಪಂಡಿತರನ್ನು ಒಟ್ಟು ಸೇರಿಸಿ ಜಿಹಾದ್ ಬಗ್ಗೆ ಚರ್ಚಿಸಬೇಕು ಮತ್ತು ಆ ಧರ್ಮಪಂಡಿತರ ಮೂಲಕ ಜನಸಾಮಾನ್ಯರಿಗೆ ಅವರು

---

* ಈ ಕಾಲಘಟ್ಟದಲ್ಲಿ ಭೂಮಿಯೆಂಬ ಗಂಟು ಮೂಟೆಯನ್ನು ಹೇಗೆ ಬಿಚ್ಚಲಾಗಿವೆ ಎಂದರೆ ಸಾವಿರಾರು ಸತ್ಯಗಳು, ವಸ್ತುಗಳ ಗುಣವಿಶೇಷಗಳು ಮತ್ತು ಸಂಶೋಧನೆಗಳು ಪ್ರಕಟಗೊಳ್ಳುತ್ತಾ ಇವೆ. ಹೀಗಿರುವಾಗ ಆಕಾಶದ ಗಂಟು ಮೂಟೆ ಬಿಚ್ಚದೇ ಇರಲು ಹೇಗೆ ಸಾಧ್ಯ? ವಾಗ್ದಾನ ಮಾಡಲಾದ ಮಸೀಹರ ಆಗಮನ ಕಾಲದಲ್ಲಿ ಮಕ್ಕಳು ಮತ್ತು ಮಹಿಳೆಯರು ಕೂಡ ದಿವ್ಯವಾಣಿ ಗಳಿಸುವರು ಎಂದು ಹೇಳಿ ಆಕಾಶದ ಗಂಟು ಮೂಟೆಗೆ ಸಂಬಂಧಿಸಿ ಪ್ರವಾದಿಗಳು ಸಹ ಭವಿಷ್ಯ ನುಡಿದಿದ್ದರು.

ಮಾಡುವ ತಪ್ಪು ಕೃತ್ಯಗಳ ಬಗ್ಗೆ ಎಚ್ಚರಿಕೆ ನೀಡಬೇಕು ಹಾಗೂ ಆ ಪಂಡಿತರಿಂದ ಪುಶ್ತು ಭಾಷೆಯಲ್ಲಿ ಕೆಲವು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಬೇಕು. ಹೀಗೆ ಮಾಡಿದರೆ ಅದು ಜನಸಾಮಾನ್ಯರ ಮೇಲೆ ಬಹಳ ಪ್ರಭಾವ ಬೀರುವುದು ಮತ್ತು ಅವಿವೇಕಿಗಳಾದ ಮುಲ್ಲಾಗಳು ಜನಸಾಮಾನ್ಯರ ಎಡೆಯಲ್ಲಿ ಹರಡಿರುವ ಆವೇಶಗಳು ಕ್ರಮೇಣ ಕಡಿಮೆಯಾಗುತ್ತಾ ಹೋಗುವುವು. ಈ ಅವಶ್ಯಕ ಸುಧಾರಣೆಯ ಬಗ್ಗೆ ದೊರೆ ಗಮನಿಸದಿದ್ದರೆ ಅದು ಪ್ರಜೆಗಳ ದೌರ್ಭಾಗ್ಯವಾಗುವುದು ಮತ್ತು ಕೊನೆಗೆ ಮುಲ್ಲಾಗಳ ಇಂತಹ ಫತ್ವಗಳಿಗೆ ಸಂಬಂಧಿಸಿ ಮೌನವನ್ನು ಅವಲಂಬಿಸಿದ ಸರಕಾರಕ್ಕೆ ಅದು ಸಮಸ್ಯೆಯಾಗುವುದು. ಏಕೆಂದರೆ, ಸಣ್ಣದಾದ ಧಾರ್ಮಿಕ ಭಿನ್ನಾಭಿಪ್ರಾಯವನ್ನು ಪ್ರಕಟಿಸುವ ಒಬ್ಬ ವ್ಯಕ್ತಿ ಅಥವಾ ಪಂಗಡವನ್ನು ಇಂದಿನ ಕಾಲದ ಮುಲ್ಲಾಗಳು ಮತ್ತು ಮೌಲವಿಗಳು "ಕಾಫಿರ್" (ಅವಿಶ್ವಾಸಿ) ಎಂದು ಘೋಷಿಸುತ್ತಾರೆ. ಹೀಗೆ ಜಿಹಾದ್ ಮುಂತಾದ ವಿಷಯಗಳಲ್ಲಿ ಕಾಫಿರರ ವಿರುದ್ಧ ಅವರು ಜಾರಿಗೊಳಿಸಿರುವ ಫತ್ವಾಗಳನ್ನು (ಧಾರ್ಮಿಕ ತೀರ್ಪು) ಅಂತಹ ಜನರ ವಿರುದ್ಧ ಕೂಡ ಜಾರಿಗೊಳಿಸುವರು. ಇಂತಹ ಪರಿಸ್ಥಿತಿಯಲ್ಲಿ ಕಾಬೂಲಿನ ದೊರೆ ಕೂಡ ಇಂತಹ ಫತ್ವಗಳಿಂದ ಸುರಕ್ಷಿತರಾಗಲಾರರು. ಈ ಮುಲ್ಲಾಗಳು ಯಾವುದಾದರೂ ಸಾಮಾನ್ಯ ವಿಷಯದಲ್ಲಿ ಅಮೀರರ ವಿರುದ್ಧ ಕೋಪಗೊಂಡು ಅವರನ್ನು ಕೂಡ ಇಸ್ಲಾಮಿನ ವಲಯದಿಂದ ಹೊರಗೆ ಹಾಕುವರು ಮತ್ತು ಅವಿಶ್ವಾಸಿಗಳ ವಿರುದ್ಧ ಹೊರಡಿಸಿದಂತಹ ಜಿಹಾದಿನ ಫತ್ವವನ್ನು ಅಮೀರ್ ಸಾಹೇಬರ ವಿರುದ್ಧ ಕೂಡ ಹೊರಡಿಸುವ ಸಾಧ್ಯತೆಯಿದೆ. ಒಬ್ಬನನ್ನು ಸತ್ಯವಿಶ್ವಾಸಿ ಅಥವಾ ಸತ್ಯನಿಷೇಧಿ ಎಂದು ಘೋಷಿಸುವ ಮತ್ತು ಅವರ ವಿರುದ್ಧ ಜಿಹಾದಿನ ಫತ್ವಾ ಹೊರಡಿಸುವ ಅಧಿಕಾರವನ್ನು ಸ್ವಂತ ಕೈಯಲ್ಲಿ ಇರಿಸಿರುವ ಸಮುದಾಯ ಭಯಾನಕವಾದುದಾಗಿದೆ. ಅಂಥವರ ಬಗ್ಗೆ ಅಮೀರ್ ಸಾಹೇಬರು ಅಸಡ್ಡೆಯಿಂದ ಇರಬಾರದು. ನಿಸ್ಸಂಶಯವಾಗಿಯೂ ಪ್ರತಿಯೊಂದು ಸರ್ಕಾರಕ್ಕೆ ಎದುರಿಸಬೇಕಾಗಿ ಬರುವ ದಂಗೆಯ ಮೂಲ ಕಾರಣ ಈ ಜನರೇ ಆಗಿರುತ್ತಾರೆ. ಸಾಮಾನ್ಯ ಜನರು ಇವರ ಸ್ವಾಧೀನದಲ್ಲಿದ್ದಾರೆ. ಸಾರ್ವಜನಿಕರ ಹೃದಯಗಳ ಲಗಾಮು ಇವರ ಕೈಯಲ್ಲಿದೆ. ಅವರು ತಮಗಿಷ್ಟವಿರುವ ಕಡೆಗೆ ಜನರನ್ನು ತಿರುಗಿಸಿ ಒಂದೇ ಕ್ಷಣದಲ್ಲಿ ಸರ್ವನಾಶ ಮಾಡಬಲ್ಲರು. ಜನರನ್ನು ಮುಲ್ಲಾಗಳ ಪಂಜದಿಂದ ಬಿಡಿಸುವುದು ಮತ್ತು ಅವರಿಗೆ ಜಿಹಾದ್ ಬಗ್ಗೆ ಸೌಮ್ಯವಾಗಿ ತಿಳಿಸಿಕೊಡುವುದು ತಪ್ಪಲ್ಲ. ಮುಸ್ಲಿಮರು ಡಕಾಯಿತರ ಮತ್ತು ದರೋಡೆಕೋರರ ಹಾಗೆ ಆಗಿ ತಮ್ಮ ಸ್ವಾರ್ಥ ಸಿದ್ಧಿಗೋಸ್ಕರ ಜಿಹಾದನ್ನು ನೆಪವನ್ನಾಗಿ ಬಳಸಲು ಖಂಡಿತವಾಗಿಯೂ ಇಸ್ಲಾಮ್ ಧರ್ಮ ಕಲಿಸುವುದಿಲ್ಲ.

ಇಸ್ಲಾಮ್ ಧರ್ಮದ ಪ್ರಕಾರ, ದೊರೆಯ ಆದೇಶವಿಲ್ಲದೇ ಜಿಹಾದ್ ಮಾಡುವುದು ಸರಿಯಲ್ಲ ಎಂದು ಜನಸಾಮಾನ್ಯರಿಗೂ ಗೊತ್ತಿದೆ. ಆದ್ದರಿಂದ ವಾಸ್ತವಿಕ ವಿಷಯ ವೇನೆಂದು ತಿಳಿಯದೆ ಇವೆಲ್ಲವೂ ಅಮೀರರ ಸೂಚನೆ ಪ್ರಕಾರ ನಡೆಯುತ್ತಿವೆ ಎಂಬ ಭಾವಿಸಿ ಅಮೀರರ ವಿರುದ್ಧ ಸಾಮಾನ್ಯ ಜನರು ಆರೋಪ ಹೊರಿಸುವ ಸಾಧ್ಯತೆಯಿದೆ. ಆದುದರಿಂದ ಈ ತಪ್ಪು ಫತ್ವಾಗಳನ್ನು ತಡೆಯಲು ಸಾಧ್ಯವಾದಷ್ಟು ಕಠಿಣ ಪರಿಶ್ರಮ ನಡೆಸುವುದು ಅಮೀರ್ ಸಾಹೇಬರ ಕಡ್ಡಾಯ ಕರ್ತವ್ಯವಾಗಿದೆ. ಹಾಗಾದರೆ ಅಮೀರ್ ಸಾಹೇಬರು ನಿರ್ದೋಷಿಯಾಗಿರುವರು ಎಂಬುದು ಸೂರ್ಯನ ಬೆಳಕಿನಂತೆ ಸ್ಪಷ್ಟವಾಗುವುದು ಮತ್ತು ಅವರಿಗೆ ಉತ್ತಮ ಪ್ರತಿಫಲ ಸಹ ಲಭಿಸುವುದು. ಏಕೆಂದರೆ ಮನುಷ್ಯರ ಹಕ್ಕುಗಳ ಸಂರಕ್ಷಣೆಗೆ ಸಂಬಂಧಿಸಿ ಹೇಳುವುದಾದರೆ, ದೌರ್ಜನ್ಯಗಾರರ ಖಡ್ಗದಿಂದ ದೌರ್ಜನ್ಯಪೀಡಿತರನ್ನು ರಕ್ಷಿಸುವುದಕ್ಕಿಂತ ದೊಡ್ಡದಾದ ಸತ್ಕರ್ಮ ಬೇರೊಂದಿಲ್ಲ. ಇಂತಹ ಕೆಲಸಗಳನ್ನು ಮಾಡುವವರಲ್ಲಿ ಮತ್ತು ಯೋಧರೆಂದು ಎಂದು ಕರೆಯಿಸಿಕೊಳ್ಳಲು ಖಡ್ಗ ಚಲಾಯಿಸುವವರಲ್ಲಿ ಬಹುತೇಕ ಜನರು ಅಫ್‌ಘಾನಿಗಳಾಗಿದ್ದಾರೆ. ಅಂಥವರು ಅಮೀರ್ ಸಾಹೇಬರ ದೇಶದಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಆದುದರಿಂದ ಅಮೀರ್ ಸಾಹೇಬರು ತನ್ನ ರಾಜ್ಯಾಭಾರದಲ್ಲಿ ನಡೆಸಿದ ಸಾಧನೆಗಳಲ್ಲಿ ಈ ಮಹತ್ತಾದ ಸುಧಾರಣೆಯ ಪ್ರಸ್ತಾಪ ಸಹ ಸೇರುವಂತಾಗಲು ಅಲ್ಲಾಹನು ಅಮೀರ್ ಸಾಹೇಬರಿಗೆ ಒಂದು ಸುಸಂದರ್ಭವನ್ನು ಒದಗಿಸಿದ್ದಾನೆ. ಇಸ್ಲಾಮಿಗೆ ಅಪಕೀರ್ತಿಯನ್ನು ಉಂಟುಮಾಡುವ ಮೃಗೀಯ ಸಂಪ್ರದಾಯಗಳನ್ನು ಅಫ್‌ಘಾನ್ ಜನರಿಂದ ಬಿಡಿಸಲು ಅಮೀರ್ ಸಾಹೇಬರು ತನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸಬೇಕು.

ಈಗ ವಾಗ್ದತ್ತ ಮಸೀಹ್‌ರ ಕಾಲಘಟ್ಟವಾಗಿದೆ. ಆದುದರಿಂದ ದೌರ್ಜನ್ಯ ಮತ್ತು ಅನ್ಯಾಯಕರ ಹತ್ಯೆಗಳಿಂದ ತುಂಬಿರುವ ಭೂಮಿಯನ್ನು ನ್ಯಾಯ, ಶಾಂತಿ ಮತ್ತು ಸೌಹಾರ್ದಭರಿತ ಭೂಮಿಯನ್ನಾಗಿ ಪರಿದವರ್ತಿಸುವಂತಹ ಪರಿಸ್ಥಿತಿಗಳನ್ನು ಅಲ್ಲಾಹನು ಆಕಾಶದಿಂದ ಉಂಟುಮಾಡುವನು. ಇದರಿಂದ ಸ್ವಲ್ಪ ಪಾಲು ಪಡೆಯುವ ಅಮೀರ್ ಮತ್ತು ದೊರೆ ಅನುಗ್ರಹಿಸಲ್ಪಡುವರು.

ಇವೆಲ್ಲವನ್ನು ಬರೆದ ನಂತರ ವಿಶೇಷವಾಗಿ ನಮ್ಮ ಪ್ರಜಾ ಹಿತೈಷಿ ಸರಕಾರದ ಮುಂದೆ ಕೆಲವು ಮನವಿಗಳನ್ನು ಇರಿಸಲು ಬಯಸುತ್ತೇನೆ. ನಮ್ಮ ಸರಕಾರ ಬುದ್ಧಿಶಾಲಿ ಸರಕಾರವೆಂದು ನನಗೆ ಗೊತ್ತಿದೆ. ಆದರೆ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಪ್ರಯೋಜನಕರವಾದ ಯಾವುದಾದರೂ ಸಲಹೆ ತೋಚಿದರೆ ಅದನ್ನು ಸರಕಾರದ

ಗಮನಕ್ಕೆ ತರುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಗಡಿನಾಡಿನ ಅಫ್‌ಘಾನಿ ಜನರಲ್ಲಿ ಕಂಡುಬರುವ ಮೃಗೀಯ ಸ್ವಭಾವದ ಕಾರಣದಿಂದ ಪ್ರತಿದಿನ ಯಾವುದಾದರೂ ನಿರಪರಾಧಿಯ ಹತ್ಯೆ ನಡೆಯುತ್ತಿದೆ. ನಾನು ಹಿಂದೆ ಪ್ರಸ್ತಾಪಿಸಿದ ಹಾಗೆ ಇದಕ್ಕೆ ಎರಡು ಕಾರಣಗಳಿವೆ.

1. ಮುಸ್ಲಿಮೇತರರನ್ನು ಮತ್ತು ವಿಶಿಷ್ಟವಾಗಿ ಕ್ರೈಸ್ತರನ್ನು ಕೊಲ್ಲುವುದು ಮಹಾಪುಣ್ಯ ಕಾರ್ಯವೆಂದೂ ನಮಾಝ್ ಮೂಲಕ ದೊರೆಯಬಹುದಾದ, ಹಜ್ಜ್ ಕರ್ಮಾನುಷ್ಠಾನ ಮೂಲಕ ದೊರೆಯಬಹುದಾದ, ಝಕಾತ್ ಅಥವಾ ಬೇರೆ ಯಾವುದಾದರೂ ಸತ್ಕರ್ಮದಿಂದ ದೊರೆಯಬಹುದಾದ ಅನುಗ್ರಹಗಳಿಗಿಂತ ವೈಭವಶಾಲಿ ಸ್ವರ್ಗೀಯ ಅನುಗ್ರಹಗಳು ಹತ್ಯೆಯಿಂದ ದೊರೆಯುವುದು ಎಂಬುದು ಮುಲ್ಲಾಗಳ ನಂಬಿಕೆಗಳಲ್ಲಿ ಒಂದಾಗಿದೆ. ಈ ಮುಲ್ಲಾಗಳು ರಹಸ್ಯವಾಗಿ ಇಂತಹ ಉಪದೇಶಗಳನ್ನು ಜನರ ಕಿವಿಗೆ ತಲಪಿಸುತ್ತಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ಮೃಗ ಸಮಾನರಾದ ಜನರ ಹೃದಯಗಳು ಮೇಲಿನಂತಹ ಪ್ರವಚನಗಳನ್ನು ಆಲಿಸುವಾಗ ಬಹಳ ಪ್ರಭಾವಿತಗೊಳ್ಳುತ್ತವೆ ಮತ್ತು ಅವರು ಹಿಂಸ್ರ ಮೃಗಗಳಾಗುತ್ತಾರೆ. ಅವರಲ್ಲಿ ಒಂದಿಷ್ಟು ದಯೆ ಬಾಕಿ ಉಳಿಯುವುದಿಲ್ಲ ಮತ್ತು ಅವರು ಬೆಚ್ಚಿಸುವಂತಹ ಘೋರ ರಕ್ತಪಾತ ಮಾಡುತ್ತಾರೆ. ಗಡಿನಾಡು ಪ್ರದೇಶ ಮತ್ತು ಅಫ್‌ಘಾನಿಸ್ಥಾನದಲ್ಲಿ ಇಂತಹ ಮೌಲವಿಗಳು ಬಹಳಷ್ಟು ಇದ್ದಾರೆ. ನನ್ನ ಅಭಿಪ್ರಾಯದಲ್ಲಿ ಪಂಜಾಬಿನಲ್ಲಿ ಮತ್ತು ಹಿಂದುಸ್ಥಾನದ ಇತರ ಭಾಗಗಳಲ್ಲೂ ಇಂತಹ ಮೌಲವಿಗಳು ಇದ್ದಾರೆ. ಈ ದೇಶದ ಮೌಲವಿಗಳು ಇಂತಹ ಅಭಿಪ್ರಾಯಗಳನ್ನು ಹೊಂದಿಲ್ಲ ಎಂದು ಸರಕಾರ ನಂಬುವುದಾದರೆ ಅದರ ಬಗ್ಗೆ ಪುನರಾಲೋಚಿಸಬೇಕಾಗಿದೆ. ನನ್ನ ಪ್ರಕಾರ ಮಸೀದಿಗಳಲ್ಲಿರುವ ಬಹುತೇಕ ಅವಿವೇಕಿಗಳೂ ಕೋಪಾವಿಷ್ಠರೂ ಆಗಿರುವ ಮುಲ್ಲಾಗಳು ಈ ಕೊಳಕು ಆಲೋಚನೆಗಳನ್ನು ಹೊಂದಿರುವರು. ಅವರು ಇಂತಹ ನಂಬಿಕೆಗಳನ್ನು ಅಲ್ಲಾಹನ ಪವಿತ್ರ ವಚನಗಳ ಮಾರ್ಗದರ್ಶನದ ಪ್ರಕಾರ ಹೊಂದಿರುವರು ಎಂದಾಗಿದ್ದರೆ ನಾನು ಅವರನ್ನು ನಿರ್ದೋಷಿಗಳೆಂದು ಗಣಿಸುತ್ತಿದ್ದೆನು. ಏಕೆಂದರೆ ವಾಸ್ತವದಲ್ಲಿ ಮನುಷ್ಯನು ನಂಬಿಕೆಗಳಿಗೆ ಸಂಬಂಧಿಸಿ ದೋಷರಹಿತನಾಗಿರುತ್ತಾನೆ. ಆದರೆ ನಾನು ಸತ್ಯವಾಗಿ ಹೇಳುತ್ತೇನೆ, ಈ ಜನರು ಸರಕಾರದ ಮಾಡಿದ ಉಪಕಾರಗಳನ್ನು ಮರೆತು ಈ ನ್ಯಾಯನಿಷ್ಠ ಸರಕಾರದ ರಹಸ್ಯ ಶತ್ರುಗಳಾಗಿರುವ ಹಾಗೆಯೇ ಅಲ್ಲಾಹನಿಗೆ ಅವಿಧೇಯರಾದ ಅಪರಾಧಿಗಳಾಗಿದ್ದಾರೆ. ಏಕೆಂದರೆ ಮುಗ್ಧ ಜನರನ್ನು ಕೊಲ್ಲಿರಿ ಎಂದು ಅಲ್ಲಾಹನು ಖಂಡಿತವಾಗಿಯೂ ಉಪದೇಶಸಿಲ್ಲವೆಂದು ನಾನು ಸವಿಸ್ತಾರವಾಗಿ ಪ್ರಸ್ತಾಪಿದ್ದೇನೆ. ಯಾರು ಆ ರೀತಿ

ನಂಬುತ್ತಾರೋ ಅವನು ಇಸ್ಲಾಮಿನಿಂದ ಹೊರಗಾದವನಾಗಿದ್ದಾನೆ.

2. ಶೂರ ಪರಾಕ್ರಮಿ (ಗಾಝಿ) ಎಂದು ಕರೆಸಿಕೊಳ್ಳಲು ಮಾಡುವ ರಕ್ತಪಾತದ ಅಪರಾಧಗಳಿಗೆ ಇನ್ನೊಂದು ಕಾರಣ ನನ್ನ ಅಭಿಪ್ರಾಯದಲ್ಲಿ ಪಾದರಿಗಳು ಕೂಡ ಆಗಿದ್ದಾರೆ. ಜಿಹಾದ್ ಕಡ್ಡಾಯವಾಗಿದೆ ಎಂದೂ ಅನ್ಯಕೋಮುಗಳ ಜನರನ್ನು ಕೊಲ್ಲುವುದು ಬಹಳ ಪುಣ್ಯದಾಯಕ ಕಾರ್ಯವೆಂದು ಇಸ್ಲಾಂ ಧರ್ಮ ಉಪದೇಶಿಸುತ್ತದೆ ಎಂದೂ ಈ ಪಾದರಿಗಳು ಬಹಳಷ್ಟು ಒತ್ತಿ ಹೇಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಗಡಿನಾಡಿನ ಜನರಿಗೆ ಜಿಹಾದ್ ಬಗ್ಗೆ ಗೊತ್ತೇ ಇರಲಿಲ್ಲ. ಈ ಪಾದರಿಗಳು ಅದರ ಬಗ್ಗೆ ತಿಳಿಸಿಕೊಟ್ಟರು. ಹೀಗೆ ಹೇಳಲು ನನ್ನ ಬಳಿ ಇರುವ ಸಾಕ್ಷ್ಯಾಧಾರವೇನೆಂದರೆ, ಪಾದರಿಗಳು ಪತ್ರಿಕೆ, ನಿಯಕಕಾಲಿಕ ಮತ್ತು ಪುಸ್ತಕಗಳ ಮೂಲಕ ಗಡಿಪ್ರದೇಶದ ದೇಶಗಳಲ್ಲಿ ಪ್ರಚಾರ ಮಾಡುವ ತನಕ ಇಂತಹ ಘಟನೆಗಳ ಸುದ್ದಿ ಕಡಿಮೆ ಲಭಿಸುತ್ತಿತ್ತು ಅಥವಾ ತೀರಾ ಲಭಿಸುತ್ತಿರಲಿಲ್ಲ ಎಂದೇ ಹೇಳಬಹುದು. ಸಿಖ್ಖರ ರಾಜ್ಯಭಾರ ಕೊನೆಗೊಂಡು ಆಂಗ್ಲೇಯ ಸರಕಾರ ಅಧಿಕಾರಕ್ಕೆ ಬಂದಾಗ ಈ ಬದಲಾವಣೆಯಿಂದ ಮುಸ್ಲಿಮರಿಗೆ ಬಹಳ ಸಂತೋಷವಾಗಿತ್ತು. ಗಡಿ ಪ್ರದೇಶದವರು ಕೂಡ ಬಹಳ ಸಂತೋಷಗೊಂಡಿದ್ದರು. ಅನಂತರ 1894ರಲ್ಲಿ ಪಾದರಿ ಫೆಂಡಲ್ **ಮೀಝಾನುಲ್ ಹಖ್** ಎಂಬ ಪುಸ್ತಕ ರಚಿಸಿ ಪಂಜಾಬು, ಭಾರತದ ಇತರ ಪ್ರದೇಶಗಳು ಮತ್ತು ಗಡಿಯಾಚೆಗಿನ ದೇಶಗಳಲ್ಲಿ ಪ್ರಚಾರಗೊಳಿಸಿದನು. ಆತನು ಇಸ್ಲಾಮ್ ಮತ್ತು ಇಸ್ಲಾಮಿನ ಪೈಗಂಬರರ(ಸ) ವಿರುದ್ಧ ಅಪಮಾನಕರ ಶಬ್ಧಗಳನ್ನು ಬಳಸಿದನಲ್ಲದೆ ಇಸ್ಲಾಮ್ ಪ್ರಕಾರ ಅನ್ಯಧರ್ಮದವರನ್ನು ಕೊಲ್ಲುವುದು ಪುಣ್ಯಕರ್ಮವೆಂದು ಲಕ್ಷಾಂತರ ಜನರ ಮಧ್ಯೆ ಪ್ರಚಾರ ಮಾಡಿದನು. ತಮ್ಮ ಧರ್ಮದ ಬಗ್ಗೆ ಏನೂ ಅರಿವಿಲ್ಲದ ಗಡಿನಾಡಿನಲ್ಲಿರುವ ಮೃಗಸ್ವಭಾವದ ಜನರು ಈ ಮಾತುಗಳಿಂದ ಎಚ್ಚರಗೊಂಡರು ಮತ್ತು ನಮ್ಮ ಧರ್ಮದ ಪ್ರಕಾರ ಅನ್ಯಧರ್ಮದವರನ್ನು ಕೊಲ್ಲುವುದು ಪುಣ್ಯದಾಯಕ ಕೆಲಸ ಎಂದು ನಂಬಿದರು.

ಗಡಿನಾಡುಗಳಲ್ಲಿ ಸಂಭವಿಸಿದ ಘಟನೆಗಳು ಮತ್ತು ಗಡಿನಾಡಿನ ಜನರಲ್ಲಿ ಉಂಟಾದ ಆವೇಶಭರಿತ ಹಗೆತನದ ಕಾರಣ ಪಾದರಿಗಳು ಪ್ರಕಟಿಸಿದ ಗ್ರಂಥಗಳಾಗಿವೆ ಎಂದು ನಾನು ಗಾಢವಾಗಿ ಯೋಚಿಸಿದಾಗ ತಿಳಿಯಿತು. ಅವುಗಳಲ್ಲಿ ಕಟುಶಬ್ದಗಳನ್ನು ಬಳಸಲಾಗಿದೆ ಮತ್ತು ಜನರಿಗೆ ಪದೇ ಪದೇ ಜಿಹಾದ್ ಬಗ್ಗೆ ಮಿತಿಮೀರಿ ವಿವರಿಸಲಾಗಿದೆ. ಕೊನೆಗೆ ಮೀಝಾನುಲ್ ಹಖ್ ಎಂಬ ಪುಸ್ತಕದ ಭಾರೀ ಪ್ರಚಾರ ಮತ್ತು ಅದರ ವಿಷಕಾರಿ ಪರಿಣಾಮಗಳ ನಂತರ 1867ರಲ್ಲಿ ಗಡಿನಾಡಿನ ಜನರ ಯುದ್ಧೋತ್ಸಾಹವನ್ನು

ತಡೆಯಲು ನಮ್ಮ ಸರಕಾರಕ್ಕೆ ನಂಬರ್ 23/1867 ಏಕ್ಟನ್ನು ಜಾರಿಗೊಳಿಸಬೇಕಾಗಿ ಬಂತು. ಈ ನಿಯಮ ಗಡಿನಾಡಿನ ಆರು ಕೋಮುಗಳನ್ನು ಉದ್ದೇಶಿಸಿ ಜಾರಿಗೊಳಿಸಲಾಗಿತ್ತು. ಅನಂತರ ರಕ್ತಪಾತದ ಘಟನೆಗಳು ನಿಂತುಹೋಗುವುವು ಎಂಬ ನಿರೀಕ್ಷೆಯಿತ್ತು. ಆದರೆ ಖೇದಕರವಾದುದೇನೆಂದರೆ, ಅನಂತರ ಪಾದರಿ ಇಮಾದುದ್ದೀನ್ ಅಮೃತ್‌ಸರಿ ಮತ್ತು ಹೊಲಸು ಭಾಷೆಯಲ್ಲಿ ಮಾತನಾಡುವ ಬೇರೆ ಕೆಲವು ಪಾದರಿಗಳು ಹರಿತವಾದ ಕೊಳಕು ಭಾಷೆಗಳಲ್ಲಿ ಬರೆದು ಪ್ರಕಟಿಸಿದ ಲೇಖನಗಳ ಕಾರಣದಿಂದ ದೇಶದ ಆಂತರಿಕ ಪ್ರೀತಿ ಸೌಹಾರ್ದತೆಗಳಿಗೆ ಬಹಳ ಹಾನಿ ಉಂಟಾಯಿತು. ಇದೇ ರೀತಿಯಲ್ಲಿ ಪ್ರಸ್ತಾಪ ಅಗತ್ಯವಿಲ್ಲದ ಬೇರೆ ಪಾದರಿಗಳ ಕೆಲವು ಪುಸ್ತಕಗಳು ಜನರ ಹೃದಯಗಳಲ್ಲಿ ದ್ವೇಷದ ಬೀಜ ಬಿತ್ತುವುದರಲ್ಲಿ ಯಶಸ್ವಿಯಾದುವು. ಸಾಮರಸ್ಯಕ್ಕಾಗಿ ಸರಕಾರದ ಪ್ರಯತ್ನಕ್ಕೆ ಈ ಜನರು ಭಾರಿ ಅಡ್ಡಿಯಾದರು. ಅಂತಹ ಪುಸ್ತಕಗಳಿಗೆ ಉತ್ತರ ಬರೆಯುವುದರಿಂದ ಮುಸ್ಲಿಮರನ್ನು ನಮ್ಮ ಸರಕಾರ ತಡೆಯಲಿಲ್ಲ ಎಂಬುದು ಪ್ರಶಂಸಾರ್ಹ ಸಂಗತಿಯಾಗಿದೆ. ತೀವ್ರ ಕಟುಭಾಷೆಗೆ ಪ್ರತಿಯಾಗಿ ಮುಸ್ಲಿಮರು ಕೂಡ ಸ್ವಲ್ಪಮಟ್ಟಿಗೆ ಕಟುಭಾಷೆಯನ್ನು ಬಳಸಿದರು. ಹಾಗಿದ್ದರೂ ಇದು ಸರಕಾರದ ವಿಶಾಲ ಮನೋಭಾವವನ್ನು ಸಾಬೀತುಗೊಳಿಸಿತು. ಅಪಮಾನಕರ ಪುಸ್ತಕಗಳ ಪ್ರಕಟನೆಯಿಂದ ಸಂಭವಿಸಲು ಸಾಧ್ಯತೆಯಿದ್ದ ಕಲಹಗಳು ಸರಕಾರದ ಒಳ್ಳೆಯ ಸದುದ್ದೇಶ ಮತ್ತು ನ್ಯಾಯನಿಷ್ಠುರತೆಯ ಕಾರಣದಿಂದ ಒಳಗಿಂದೊಳಗೆ ಅದುಮಿ ಹೋಯಿತು.

ಇಸ್ಲಾಮಿನ ಮುಲ್ಲಾಗಳು ಜಿಹಾದ್ ವಿಷಯವನ್ನು ಗಡಿನಾಡಿನ ಜನರಿಗೆ ತಪ್ಪಾಗಿ ವ್ಯಾಖ್ಯಾನಿಸಿ ಕೊಟ್ಟು ಸರ್ಕಾರದ ಆದರಣೀಯ ಅಧಿಕಾರಿಗಳನ್ನು ಕೊಲ್ಲಲು ಉಪದೇಶಿಸುತ್ತಾರೆ ಎಂಬುದನ್ನು ನಾವು ಖೇದಕರವಾಗಿ ಒಪ್ಪಿಕೊಳ್ಳಬೇಕಾಗುತ್ತಿದೆ. ಹೀಗೆ ಅವರು ಹಿತೈಷಿ ಸರಕಾರಕ್ಕೆ ಹಾನಿ ಮಾಡುತ್ತಿದ್ದಾರೆ. ಆದರೆ ಅದರ ಜೊತೆಗೆ ಯುರೋಪಿನ ಮುಲ್ಲಾಗಳಾದ ಪಾದರಿಗಳ ಕೃತ್ಯಗಳ ಬಗ್ಗೆಯೂ ನಮಗೆ ದುಃಖವಿದೆ. ಅವರು ಅನ್ಯಾಯಕರ ಕಟು ಮತ್ತು ಅಸತ್ಯ ಬರಹಗಳಿಂದ ಅವಿವೇಕಿಗಳನ್ನು ಉತ್ತೇಜಿಸುತ್ತಾರೆ. ಅವರು ಸಾವಿರಾರು ಸಲ ಜಿಹಾದ್ ವಿಷಯವನ್ನು ಎತ್ತಿಕೊಂಡು ಇದು ಸ್ವರ್ಗ ಲಭಿಸಲು ಸುಗಮ ವಿಧಾನವೆಂಬ ಭಾವನೆಯನ್ನು ಮೃಗಸಮಾನರಾದ ಕೆಲವು ಮುಸ್ಲಿಮರ ಹೃದಯಗಳಲ್ಲಿ ಬೇರೂರುವಂತೆ ಮಾಡಿರುವರು. ಈ ಪಾದರಿಗಳ ಹೃದಯದಲ್ಲಿ ದುರುದ್ದೇಶವಿಲ್ಲದಿದ್ದರೆ ಪ್ರವಾದಿ ಮೂಸಾ(ಅ) ಮತ್ತು ಪ್ರವಾದಿ ಜೋಶುವಾ(ಅ) ಮಾಡಿದ ಜಿಹಾದನ್ನು ನಮ್ಮ ಪೈಗಂಬರ್ ಮುಹಮ್ಮದ್‌ರ(ಸ) ಮಾಡಿದ ಜಿಹಾದಿನೊಂದಿಗೆ ಹೋಲಿಸಿ ನೋಡಿ ಸ್ವತಃ ಮನವರಿಕೆ ಮಾಡಿಕೊಂಡು ಸುಮ್ಮನಿರಬೇಕಾಗಿತ್ತು.

ಈ ಹಿಂಸಾಚಾರಕ್ಕೆ ಉತ್ತೇಜನ ನೀಡಲು ಮುಖ್ಯ ಪಾತ್ರವಹಿಸಿದ್ದು ಇಸ್ಲಾಮೀ ಮೌಲವಿಗಳೆಂದು ಅಂದುಕೊಂಡರೆ ಕೂಡ ಮುಸ್ಲಿಮರನ್ನು ದೂರುತ್ತಾ ಆಗಿಂದಾಗ್ಗೆ ಬರೆಯಲಾದ ಪಾದರಿಗಳ ಬರಹಗಳು ಕೂಡ ಹಿಂಸಾಚಾರವನ್ನು ಉತ್ತೇಜಿಸುವುದರಲ್ಲಿ ಪಾತ್ರವಹಿಸಿವೆ ಎಂದು ಹೇಳಲು ನಮ್ಮ ನ್ಯಾಯಪರತೆ ನಮ್ಮನ್ನು ಒತ್ತಾಯಪಡಿಸುತ್ತಿದೆ. ದುಃಖಕರವಾದುದೇನೆಂದರೆ, ಕೆಲವು ಮೂಢರು ಅಪರಾಧವನ್ನು ಮಾಡಿ ದೂರ ಸರಿಯುತ್ತಾರೆ. ಇದರಿಂದ ಆಂಗ್ಲೇಯ ಸರಕಾರಕ್ಕೆ ಕಷ್ಟತೆಗಳು ಉಂಟಾಗುತ್ತವೆ. ನನ್ನ ಅಭಿಪ್ರಾಯದಲ್ಲಿ ಈ ಕಷ್ಟತೆಗಳನ್ನು ನಿವಾರಿಸಲು ರೋಮಿನ ಸರಕಾರ ಇತ್ತೀಚೆಗೆ ಕೈಗೊಂಡ ಕ್ರಮವನ್ನು ಅನುಷ್ಠಾನಕ್ಕೆ ತರುವುದು ಉತ್ತಮ ಮಾರ್ಗವಾಗಿದೆ. ಅದೇನೆಂದರೆ, ಕೆಲವು ವರ್ಷಗಳ ಕಾಲ ಪ್ರತಿಯೊಂದು ಪಂಗಡ ಅನ್ಯಧರ್ಮದ ಕುರಿತು ಬಹಿರಂಗವಾಗಿಯೋ ಸೂಚ್ಯವಾಗಿಯೋ ಭಾಷಣದಲ್ಲೋ ಬರಹದಲ್ಲೋ ಪ್ರಸ್ತಾಪಿಸಬಾರದು. ಆದರೆ ಅದು ತನ್ನ ಧರ್ಮದ ಗುಣಗಳ ಬಗ್ಗೆ ಎಷ್ಟು ಬೇಕಾದರೂ ಹೇಳಬಹುದು.

ಹೀಗೆ ಮಾಡಿದರೆ ಹೊಸ ಹಗೆತನದ ಬೀಜಬಿತ್ತುವಿಕೆ ಸ್ಥಗಿತಗೊಳ್ಳುವುದು. ಜನರು ಹಳೆಯ ಕಥೆಗಳನ್ನು ಮರೆತು ಬಿಡುವರು ಮತ್ತು ಪ್ರೀತಿ ಸೌಹಾರ್ದತೆಯ ಕಡೆಗೆ ಮರಳುವರು. ಸಮುದಾಯಗಳ ಮಧ್ಯೆ ಪರಸ್ಪರ ಪ್ರೀತಿ ವಿಶ್ವಾಸಗಳು ವರ್ಧಿಸಿರುವುದನ್ನು ಗಡಿನಾಡಿನ ಜನರು ಕಾಣುವಾಗ ಅವರು ಕೂಡ ಪ್ರಭಾವಿತರಾಗುವರು ಮತ್ತು ಒಬ್ಬ ಮುಸ್ಲಿಮನು ತನ್ನ ಸಹೋದರನಿಗೆ ಸಹಾನುಭೂತಿ ತೋರಿಸುವ ರೀತಿಯಲ್ಲಿ ಅವರು ಕ್ರೈಸ್ತರೊಡನೆ ಸಹಾನುಭೂತಿ ತೋರಿಸುವರು.

ನನ್ನ ಇನ್ನೊಂದು ಸಲಹೆ ಏನೆಂದರೆ, ಪಂಜಾಬು ಮತ್ತು ಭಾರತದ ಇತರ ಪ್ರದೇಶಗಳ ಮೌಲವಿಗಳು ವಾಸ್ತವಿಕವಾಗಿಯೂ ಜಿಹಾದಿನ ಬಗ್ಗೆಗಿನ ತಪ್ಪುಗ್ರಹಿಕೆಯನ್ನು ವಿರೋಧಿಸುವವರಾದರೆ ಅವರು ಅದರ ಬಗ್ಗೆ ಕಿರುಪುಸ್ತಕಗಳನ್ನು ಬರೆದು ಪುಶ್ತು ಭಾಷೆಯಲ್ಲಿ ಭಾಷಾಂತರಿಸಿ ಗಡಿನಾಡಿನ ಜನರಿಗೆ ಹಂಚಬೇಕು. ಇದು ನಿಸ್ಸಂಶಯವಾಗಿ ಫಲಪ್ರದವಾಗಿರುವುದು. ಆದರೆ ಅದಕ್ಕೋಸ್ಕರ ಮನಸ್ಸಾರೆ ಉತ್ಸಾಹದಿಂದ ಕೆಲಸ ಮಾಡಬೇಕಾಗುವುದು. ಅದರಲ್ಲಿ ಕಾಪಟ್ಯವಿರಬಾರದು.

ವಸ್ಸಲಾಮ್

**ಮಿರ್ಝಾ ಗ್ಹುಲಾಮ್ ಅಹ್ಮದ್**

ವಾಗ್ದತ್ತ ಮಸೀಹ್ ಮತ್ತು ಮಹ್‌ದಿ

ಖಾದಿಯಾನ್, 22–5–1900

# ಅನುಬಂಧ

## ಈಸಾ ಮಸೀಹ್ ಮತ್ತು ಮುಹಮ್ಮದ್ ಮಹ್ದೀ ಎಂಬ ವಾದದ ವಾಸ್ತವಿಕ ಅರ್ಥ ಮತ್ತು ಬಹುಮಾನ್ಯ ವೈಸ್‌ರಾಯ್‌ಗೆ ಒಂದು ಮನವಿ.

ನಾನು ಬರೆದ ಅನೇಕ ಗ್ರಂಥಗಳಲ್ಲಿ ನಾನು ಈಸಾ ಮಸೀಹ್ ಮತ್ತು ಮುಹಮ್ಮದ್ ಮಹ್ದೀ ಆಗಿರುವೆನೆಂಬ ನನ್ನ ವಾದದ ಬಗ್ಗೆ ವಿವರಣೆ ನೀಡಿರುವೆನು. ಇದರ ಅರ್ಥ ನಾನು ವಾಸ್ತವಿಕವಾಗಿ ಹಝ್ರತ್ ಈಸಾ(ಅ) ಮತ್ತು ಹಝ್ರತ್ ಮುಹಮ್ಮದ್(ಸ) ಆಗಿರುವೆನು ಎಂದಲ್ಲ. ಆದರೆ ನನ್ನ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡದ ಜನರು, ನಾನು ಪುನರ್ಜನ್ಮ ಸಿದ್ಧಾಂತದ ಪ್ರಕಾರ ಮತ್ತು ಆ ಮಹಾನುಭಾವರಾದ ಇಬ್ಬರು ಪ್ರವಾದಿಗಳ ಆತ್ಮಗಳು ನಿಜವಾಗಿಯೂ ನನ್ನೊಳಗೆ ಪ್ರವೇಶಿಸಿವೆ ಎಂಬ ವಾದವನ್ನು ನಾನು ಹೊಂದಿದ್ದೇನೆ ಎಂದು ಸಂಶಯಪಡುವ ಸಾಧ್ಯತೆಯಿದೆ. ಆದರೆ ಇದು ಸತ್ಯವಲ್ಲ. ವಾಸ್ತವವೇನೆಂದರೆ, ಅಂತಿಮ ಕಾಲಘಟ್ಟದಲ್ಲಿ ಲೋಕವು ಎರಡು ವಿಧಗಳ ದೌರ್ಜನ್ಯಗಳಿಂದ ತುಂಬುವುದು ಎಂದು ಹಿಂದಿನ ಕಾಲದ ಪ್ರವಾದಿಗಳು ಭವಿಷ್ಯ ನುಡಿದಿದ್ದರು. ಒಂದು ಸೃಷ್ಟಿಗಳ ಹಕ್ಕುಗಳಿಗೆ ಸಂಬಂಧಿಸಿದ ದೌರ್ಜನ್ಯ. ಮತ್ತೊಂದು ಸೃಷ್ಟಿಕರ್ತನ ಹಕ್ಕುಗಳಿಗೆ ಸಂಬಂಧಿಸಿದ ದೌರ್ಜನ್ಯ. ಜಿಹಾದ್ ಹೆಸರಿನಲ್ಲಿ ಮಾನವರನ್ನು ರಕ್ತಪಾತಕ್ಕೆ ಗುರಿಪಡಿಸುವುದು ಸೃಷ್ಟಿಗಳಿಗೆ ಸಂಬಂಧಿಸಿದ ದೌರ್ಜನ್ಯವಾಗಿದೆ. ಎಷ್ಟರ ವರೆಗೆ ಎಂದರೆ, ನಿರಪರಾಧಿಯಾದ ಒಬ್ಬನನ್ನು ಕೊಂದವನು ತಾನು ಮಹತ್ತಾದ ಪುಣ್ಯ ಗಳಿಸಿರುವನೆಂದು ಭಾವಿಸುವನು. ಇದಲ್ಲದೇ ಧರ್ಮದ ಹೆಸರಿನಲ್ಲಿ ಬೇರೆ ರೀತಿಯ ಹಿಂಸಾಚಾರಗಳು ಮಾನವರ ವಿರುದ್ಧ ನಡೆಸಲ್ಪಡುವುವು. ಆ ಕಾಲಘಟ್ಟ ಇದೇ ಆಗಿದೆ. ಸತ್ಯವಿಶ್ವಾಸ ಮತ್ತು ನ್ಯಾಯದ ದೃಷ್ಟಿಯಲ್ಲಿ ದೇವಭಯವನ್ನು ಹೊಂದಿದ ಪ್ರತಿಯೊಬ್ಬನು ಇದನ್ನು ಈ ಕಾಲಘಟ್ಟದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಗಡಿನಾಡು ಪ್ರದೇಶದ ಕ್ರೂರಿಗಳಾದ ಒಂದು ಕೋಮಿನ ಜನರು ಅವರ ಮತ್ತು ಸಮುದಾಯಕ್ಕೆ ಸೇರಿದ ಮುಸ್ಲಿಮರ ಜೀವಗಳನ್ನು ಹಾಗೂ ಗೌರವವನ್ನು ರಕ್ಷಿಸುತ್ತಿರುವ ಆಂಗ್ಲೇಯ ಅಧಿಕಾರಿಗಳನ್ನು ಪ್ರತಿದಿನ ಕೊಲ್ಲುತ್ತಿದ್ದಾರೆ. ಇದು ಸ್ಪಷ್ಟವಾದ ಕ್ರೂರತೆ ಮತ್ತು ಮಾನವರ ಹಕ್ಕುಗಳ ಉಲ್ಲಂಘನೆಯಾಗಿದೆ. ಅಫ್ಘಾನ್ ಕರೆ

ನೀಡುತ್ತಿರುವ ವ್ಯಕ್ತಿಯನ್ನು ಕೂಡ ಕೊಲ್ಲಲು ಸಿದ್ಧರಾಗುತ್ತಿದ್ದ ಸಿಖ್ಖರ ಆಡಳಿತ ಕಾಲ ಮುಸ್ಲಿಮರಿಗೆ ನೆನಪಿಲ್ಲವೇ? ಆಂಗ್ಲೇಯ ಸರಕಾರ ಮಾಡಿದ ಯಾವ ಪಾಪಕೃತ್ಯದ ಶಿಕ್ಷೆಯಾಗಿ ಅವರ ಗೌರವಾನ್ವಿತ ಅಧಿಕಾರಿಗಳಿಗೆ ಇಂತಹ ಶಿಕ್ಷೆ ನೀಡಲಾಗುತ್ತಿದೆ? ಈ ಸರಕಾರ ಪಂಜಾಬನ್ನು ಪ್ರವೇಶಿಸಿದ ಕೂಡಲೆ ಮುಸ್ಲಿಮರಿಗೆ ಪೂರ್ಣವಾದ ಧಾರ್ಮಿಕ ಸ್ವಾತಂತ್ರ್ಯ ನೀಡಿತು. ಮೆಲುಧ್ವನಿಯಲ್ಲಿ ಅಧ಼ಾನ್ ಕರೆ ನೀಡುವಾಗಲು ಕೂಡ ಪೆಟ್ಟು ತಿನ್ನ ಬೇಕಾಗಿದ್ದ ಕಾಲ ಇದಲ್ಲ. ಈಗ ಎತ್ತರದ ಮಿನಾರಗಳನ್ನು ಏರಿ ಅಧ಼ಾನ್ ಕರೆ ನೀಡುವುದನ್ನು ಮತ್ತು ಮಸೀದಿಗಳಲ್ಲಿ ಸಾಮೂಹಿಕವಾಗಿ ನಮಾಝ಼್ ಮಾಡುವುದನ್ನು ತಡೆಯುವವರು ಯಾರೂ ಇಲ್ಲ. ಸಿಖ್ಖರ ಆಡಳಿತ ಕಾಲದಲ್ಲಿ ಮುಸ್ಲಿಮರು ಗುಲಾಮರ ಹಾಗೆ ಜೀವಿಸುತ್ತಿದ್ದರು. ಈಗ ಆಂಗ್ಲೇಯರು ಅಧಿಕಾರಕ್ಕೆ ಬಂದ ನಂತರ ಮುಸ್ಲಿಮರಿಗೆ ಪುನಃ ಗೌರವ ಲಭಿಸಿದೆ. ಜೀವ, ಸಂಪತ್ತು ಮತ್ತು ಗೌರವ ಸಂರಕ್ಷಿಸಲ್ಪಟ್ಟಿವೆ. ಇಸ್ಲಾಮೀ ಗ್ರಂಥಾಲಯಗಳ ಬಾಗಿಲುಗಳು ತೆರೆಯಲ್ಪಟ್ಟವು. ಆಂಗ್ಲೇಯ ಸರಕಾರ ಮಾಡಿರುವುದು ಒಳಿತೋ ಅಥವಾ ಕೆಡುಕೋ? ಸಿಖ್ಖರ ಆಡಳಿತ ಕಾಲದಲ್ಲಿ ಮಹಾನುಭಾವರಾದ ಮುಸ್ಲಿಮರ ಗೋರಿಗಳನ್ನು ಕೂಡ ಅವರು ಅಗೆಯುತ್ತಿದ್ದರು. ಸರ್‌ಹಿಂದ್ ಪಟ್ಟಣದಲ್ಲಿ ಸಂಭವಿಸಿದ ಘಟನೆಯನ್ನು ಯಾರೂ ಈ ವರೆಗೂ ಮರೆತುಬಿಟ್ಟಿರಲಾರರು. ಆದರೆ ಈ ಸರಕಾರ ನಮ್ಮ ಜೀವಗಳನ್ನು ಸಂರಕ್ಷಿಸುತ್ತಿರುವ ಹಾಗೆ ನಮ್ಮ ಹಿರಿಯರ ಗೋರಿಗಳನ್ನು ಸಂರಕ್ಷಿಸುತ್ತಿದೆ. ಕಿಂಚಿತ್ತೂ ಧಾರ್ಮಿಕ ಹಗೆಯನ್ನು ಪ್ರಕಟಿಸದ ಸುಖದಾಯಕ ಮತ್ತು ಶಾಂತಿಯುತ ಸರಕಾರದ ನೆರಳಿನಲ್ಲಿ ನಾವು ಜೀವಿಸುತ್ತಿದ್ದೇವೆ. ಮುಸ್ಲಿಮನು ತನ್ನ ಧರ್ಮದ ಪ್ರಕಾರ ಆರಾಧನೆ ನಡೆಸಲು, ಹಜ್ಜ್ ಮಾಡಲು, ಝ಼ಕಾತ್ ಕೊಡಲು, ನಮಾಝ಼್ ಮಾಡಲು ಅಥವಾ ತಾನು ಅಲ್ಲಾಹನಿಂದ ಕಳುಹಿಸಲ್ಪಟ್ಟ ಈ ಕಾಲದ ಸುಧಾರಕ, ಸಂತ, ಮಹಾನುಭಾವ, ಮಸೀಹ್ ಅಥವಾ ಮಹ್‌ದೀ ಎಂದು ವಾದಿಸಲು ಸ್ವತಂತ್ರನಾಗಿದ್ದಾನೆ. ಒಬ್ಬನು ಸ್ವತಃ ಸರಕಾರಕ್ಕೆ ವಿಧೇಯನಾಗದೆ ವಿದ್ರೋಹಿಯಾಗುವ ವರೆಗೂ ಈ ನ್ಯಾಯನಿಷ್ಠ ಸರಕಾರ ಹಸ್ತಕ್ಷೇಪ ನಡೆಸುವುದಿಲ್ಲ. ಸರಕಾರ ಹೀಗೆ ವರ್ತಿಸುತ್ತಾ ಜನರಿಗೆ ಉಪಕಾರ ಮಾಡುತ್ತಾ ಇರುವಾಗಲೂ ಮುಸ್ಲಿಮರು ಅದಕ್ಕೆ ಪ್ರತಿಫಲವಾಗಿ ನಿರಪರಾಧಿಗಳಾದ ಅವರ ಅಧಿಕಾರಿಗಳನ್ನು ಅನ್ಯಾಯವಾಗಿ ಕೊಲ್ಲುತ್ತಿದ್ದಾರೆ. ಆ ಅಧಿಕಾರಿಗಳು ಹಗಲು ರಾತ್ರಿ ನ್ಯಾಯ ಪಾಲನೆ ನಡೆಸುತ್ತಾ ದೇಶದ ಸೇವೆ ಮಾಡುತ್ತಿದ್ದಾರೆ.

ಈ ಕ್ರೂರ ಕೃತ್ಯಗಳನ್ನು ಮಾಡಿದವರು ಗಡಿನಾಡಿನ ಜನರಾಗಿದ್ದಾರೆ. ಅದರಲ್ಲಿ ಈ ದೇಶದ ಮುಸ್ಲಿಮರ ಮತ್ತು ಮೌಲವಿಗಳ ಅಪರಾಧವೇನು ಎಂಬ ಪ್ರಶ್ನೆಗೆ ಉತ್ತರವೇನೆಂದರೆ, ಒಪ್ಪಿದರೂ ಒಪ್ಪದಿದ್ದರೂ ಅವರು ನಿಶ್ಚಯವಾಗಿಯೂ ಒಂದು

ಪಾಪ ಕೃತ್ಯವನ್ನು ಮಾಡುತ್ತಿದ್ದಾರೆ. ಅದು ಹೇಗೆಂದರೆ, ಒಂದೆಡೆ ನಾವು ಗಡಿನಾಡಿನ ಜನರಲ್ಲಿ ಶೂರ ಯೋಧರಾಗುವ ಹಂಬಲವನ್ನು ಕಾಣುತ್ತೇವೆ. ಆದರೆ ಮತ್ತೊಂದೆಡೆ ಆಂಗ್ಲೇಯ ಸರಕಾರ ಮತ್ತು ಅವರ ಅಧಿಕಾರಿಗಳ ಪ್ರಾಮಾಣಿಕ ಸಹಾನುಭೂತಿಗೆ ಪ್ರತಿಯಾಗಿ ಈ ದೇಶದ ಮೌಲವಿಗಳಿಗೆ ಸರ್ಕಾರ ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ ಪ್ರಾಮಾಣಿಕವಾದ ಸಹಾನುಭೂತಿ ಅಥವಾ ಉತ್ಸಾಹವಾಗಲಿ ಕಾಣುವುದಿಲ್ಲ. ಈ ಮೌಲವಿಗಳು ಸರಕಾರದ ನಿಜವಾದ ಹಿತಕಾಂಕ್ಷಿಯಾಗಿದ್ದರೆ ಅವರೆಲ್ಲರೂ ಐಕ್ಯಮತದಿಂದ ಒಂದು ಫತ್ವಾ (ಧಾರ್ಮಿಕ ತೀರ್ಪು) ಸಿದ್ಧಪಡಿಸಿ ಗಡಿನಾಡು ಪ್ರದೇಶಗಳಲ್ಲಿ ಏಕೆ ಪ್ರಕಟಿಸುವುದಿಲ್ಲ? ಹಾಗೆ ಪ್ರಕಟಿಸುವುದಾದರೆ, ಮೃತಪಟ್ಟ ಕೂಡಲೇ ಸ್ವರ್ಗವನ್ನು ಪ್ರವೇಶಿಸುವ ಯೋಧರು ನಾವಾಗಿದ್ದೇವೆ ಎಂಬ ಅಲ್ಲಿನ ಅವಿವೇಕಿಗಳ ಕಲ್ಪನೆ ದೂರವಾಗುವುದು. ಯಾವುದೇ ಉತ್ತಮ ಸೇವೆ ಮಾಡದೇ ಇದ್ದು ಕೂಡ ನಾವು ಸರಕಾರವನ್ನು ಅನುಸರಿಸುತ್ತಿದ್ದೇವೆ ಎಂಬ ಮೌಲವಿಗಳ ಮತ್ತು ಅವರ ಅನುಯಾಯಿಗಳ ವಾದ ನನಗೆ ಅರ್ಥವಾಗುತ್ತಿಲ್ಲ. ಇದು ತುಚ್ಛ ಮತ್ತು ಹುರುಳಿಲ್ಲದ ವಾದವಾಗಿದೆ. ಅನೇಕ ಮೌಲವಿಗಳ ಬಗ್ಗೆ ಇದಕ್ಕಿಂತ ಗುರುತರವಾದ ಆಕ್ಷೇಪಗಳಿವೆ. ಅಲ್ಲಾಹನು ಅವರ ಹೃದಯಗಳ ಸುಧಾರಣೆ ಮಾಡಲಿ.

ಒಟ್ಟಿನಲ್ಲಿ, ಮಾನವ ಹಕ್ಕುಗಳಿಗೆ ಸಂಬಂಧಿಸಿ ನಮ್ಮ ಮುಸ್ಲಿಮ್ ಸಮುದಾಯದಲ್ಲಿ ಘೋರ ಅನ್ಯಾಯಗಳು ನಡೆಯುತ್ತಿವೆ. ಹಿತೈಷಿ ಸರಕಾರದೊಂದಿಗೆ ನಮ್ಮ ವರ್ತನೆ ಹೀಗಾದಲ್ಲಿ ಅನ್ಯರೊಂದಿಗೆ ಹೇಗಿರಬಹುದು? ಅಲ್ಲಾಹನು ಆಕಾಶದಿಂದ ಈ ಅನ್ಯಾಯವನ್ನು ನೋಡಿದನು. ಆದ್ದರಿಂದ ಅಲ್ಲಾಹನು ಹಝ್ರತ್ ಈಸಾ ಮಸೀಹರ ಸ್ವಭಾವಗುಣಗಳನ್ನು ಹೊಂದಿದ ಒಬ್ಬ ವ್ಯಕ್ತಿಯನ್ನು ಕಳುಹಿಸಿದನು. ನೀರು ಅಥವಾ ಕನ್ನಡಿಯಲ್ಲಿ ಕಾಣಲ್ಪಡುವ ಒಬ್ಬನ ಪ್ರತಿಬಿಂಬವನ್ನು ಅದೇ ವ್ಯಕ್ತಿಯೆಂದು ಆಲಂಕಾರಿಕವಾಗಿ ಕರೆಯಲ್ಪಡುವ ಹಾಗೆಯೇ ಆಗಮಿಸಿದ ವ್ಯಕ್ತಿಯ ಹೆಸರನ್ನು ಅಲ್ಲಾಹನು ಮಸೀಹ್ ಎಂದು ಇರಿಸಿದನು. ಏಕೆಂದರೆ ನಿಮ್ಮ ಶತ್ರುಗಳನ್ನು ಪ್ರೀತಿಸಿರಿ ಮತ್ತು ಅಲ್ಲಾಹನ ಸೃಷ್ಟಿಗಳಿಗೆ ಒಳಿತು ಮಾಡಿರಿ ಎಂದು ನಾವು ಈಗ ಶಕ್ತವಾಗಿ ನೀಡುತ್ತಿರುವ ಉಪದೇಶಗಳು ಶ್ರೇಷ್ಠ ಪ್ರವಾದಿಯಾದ ಹಝ್ರತ್ ಈಸಾ ಮಸೀಹ್[ಅ] ಒತ್ತು ನೀಡುತ್ತಿದ್ದ ಪಾಠಗಳೇ ಆಗಿವೆ.

ಈ ಕಾಲದ ಕೆಲವು ಮುಸ್ಲಿಮರ ಸ್ಥಿತಿ ಹೇಗಿದೆ ಎಂದರೆ, ತಮ್ಮ ಶತ್ರುಗಳನ್ನು ಪ್ರೀತಿಸುವುದಕ್ಕೆ ಬದಲಾಗಿ ಧರ್ಮದ ಹೆಸರಿನಲ್ಲಿ ಅನ್ಯಾಯವಾದ ಒಂದು ನಾಚಿಕೆಗೇಡಿನ ನೆಪವನ್ನು ಹೇಳಿ ಯಾವುದೇ ಕೆಡುಕು ಮಾಡದ ಮತ್ತು ಒಳಿತನ್ನು ಮಾಡಿದ

ಜನರನ್ನು ಕೊಲ್ಲುತ್ತಾರೆ. ಅಂತಹ ಜನರ ಸುಧಾರಣೆಗೆ ಹಝ್ರತ್ ಈಸಾ ಮಸೀಹರ ಸ್ವಭಾವಗುಣಗಳನ್ನು ಹೊಂದಿರುವ ಮತ್ತು ಮೈತ್ರಿಯ ಸಂದೇಶವನ್ನು ತರುವ ಒಬ್ಬ ವ್ಯಕ್ತಿ ಅಲ್ಲಾಹನಿಂದ ದಿವ್ಯವಾಣಿ ಗಳಿಸಿ ಆಗಮಿಸುವುದು ಆವಶ್ಯಕವಾಗಿತ್ತು. ಈ ಕಾಲದಲ್ಲಿ ಈಸಾ ಮಸೀಹರ ರೂಪದಲ್ಲಿ ಒಬ್ಬ ವ್ಯಕ್ತಿಯ ಆಗಮನ ಅಗತ್ಯವಾಗಿರಲಿಲ್ಲವೇ? ನಿಸ್ಸಂಶಯವಾಗಿಯೂ ಆವಶ್ಯಕವಾಗಿತ್ತು.

ಮುಸ್ಲಿಮರಲ್ಲಿ ಕೋಟಿಗಟ್ಟಲೆ ಜನರು ಜಿಹಾದಿನ ಹೆಸರಲ್ಲಿ ಅನ್ಯ ಸಮುದಾಯದ ಜನರನ್ನು ಕೊಲ್ಲುವ ರೀತಿಯನ್ನು ಅವಲಂಬಿಸುವವರಾಗಿದ್ದಾರೆ. ಪ್ರಜಾ ಹಿತೈಷಿ ಸರಕಾರದ ನೆರಳಿನಲ್ಲಿ ಜೀವಿಸುತ್ತಿದ್ದರೂ ಕೆಲವರು ಅದನ್ನು ಹೃತ್ಪೂರ್ವಕವಾಗಿ ಪ್ರೀತಿಸುವುದಿಲ್ಲ. ಅವರು ನೈಜ ಮತ್ತು ಪರಿಪೂರ್ಣವಾದ ಸಹಾನುಭೂತಿಯನ್ನು ತೋರಿಸುವುದಿಲ್ಲ. ಅವರು ಕಾಪಟ್ಯ ಮತ್ತು ಇಬ್ಬಗೆಯ ವರ್ತನೆಯಿಂದ ಮುಕ್ತರಲ್ಲ. ಆದುದರಿಂದ ಹಝ್ರತ್ ಮಸೀಹರ ಅವತಾರದ ಅತ್ಯಗತ್ಯವಿತ್ತು. ಆದ್ದರಿಂದ ನಾನು ಹಝ್ರತ್ ಈಸಾ ಮಸೀಹರ ಆಧ್ಯಾತ್ಮಿಕ ರೂಪವನ್ನು ಮತ್ತು ಅವರ ಸ್ವಭಾವಗುಣವನ್ನು ಹೊಂದಿರುವ ಅವತಾರವಾಗಿ ಕಳುಹಿಸಲ್ಪಟ್ಟಿರುವೆನು.

ಎರಡನೇ ವಿಧದ ದೌರ್ಜನ್ಯ ಸೃಷ್ಟಿಕರ್ತನಿಗೆ ಸಂಬಂಧಿಸಿದ್ದಾಗಿದೆ. ಅದು ಈ ಕಾಲದ ಕ್ರೈಸ್ತರ ನಂಬಿಕೆಯಾಗಿದೆ. ಅದಾದರೋ ಸಕಲ ಎಲ್ಲೆಗಳನ್ನು ಮೀರಿದೆ. ಹಝ್ರತ್ ಈಸಾ[ಅ] ಅಲ್ಲಾಹನ ಒಬ್ಬ ಶ್ರೇಷ್ಠ ಪ್ರವಾದಿ ಎನ್ನುವುದರಲ್ಲಿ ಸಂಶಯವಿಲ್ಲ. ನಿಸ್ಸಂಶಯವಾಗಿಯೂ ಹಝ್ರತ್ ಈಸಾ ಮಸೀಹರು ಅಲ್ಲಾಹನ ಪ್ರಿಯ, ಅಲ್ಲಾಹನ ಆದರಣೀಯ, ಲೋಕದ ಪ್ರಕಾಶ, ಮಾರ್ಗದರ್ಶನದ ಸೂರ್ಯ, ಅಲ್ಲಾಹನ ಸಾಮೀಪ್ಯ ಪಡೆದ, ಅವನ ಸಿಂಹಾಸನದ ಸಮೀಪ ಸ್ಥಾನವಿರುವ ಪ್ರವಾದಿ ಆಗಿದ್ದಾರೆ. ಕೋಟಿಗಟ್ಟಲೆ ಜನರು ಅವರನ್ನು ಮನಸ್ಸಾರೆ ಪ್ರೀತಿಸುತ್ತಾರೆ, ಅವರ ಉಪದೇಶಗಳನ್ನು ಅನುಸರಿಸುತ್ತಾರೆ, ಅವರ ಮಾರ್ಗದರ್ಶನಗಳನ್ನು ಪಾಲಿಸುತ್ತಾರೆ. ಅಂಥವರು ನರಕದಿಂದ ರಕ್ಷಿಸಲ್ಪಡುವರು. ಆದರೆ ಆ ಪ್ರವಾದಿಯನ್ನು ದೇವನ ಸ್ಥಾನಕ್ಕೇರಿಸುವುದು ಬಹಳ ದೊಡ್ಡ ತಪ್ಪು ಮತ್ತು ಅವಿಶ್ವಾಸವಾಗಿದೆ.

ದೇವನ ಪ್ರಿಯರಿಗೆ ದೇವನೊಂದಿಗೆ ಬಹಳ ನಿಕಟ ಸಂಬಂಧವಿರುತ್ತದೆ. ಈ ಸಂಬಂಧದ ಕಾರಣದಿಂದ ಅವರು ತಮ್ಮನ್ನು ದೇವನ ಪುತ್ರನೆಂದು ಹೇಳಿದರೆ ಅಥವಾ ದೇವನೇ ಅವರ ಮೂಲಕ ಮಾತನಾಡುತ್ತಾನೆಂದು ಹೇಳಿದರೆ ಮತ್ತು ದೇವನ ಪ್ರಭೆ ತಾನಾಗಿದ್ದೇನೆಂದು ಹೇಳಿದರೆ ಈ ಮಾತುಗಳು ಯಾವುದಾದರೂ ಸಂದರ್ಭದಲ್ಲಿ ವ್ಯಾಖ್ಯಾನ ರೂಪದಲ್ಲಿ ಸರಿಯಾಗಬಹುದಾಗಿದೆ. ಏಕೆಂದರೆ ಮನುಷ್ಯನು ದೇವನಲ್ಲಿ

ಲೀನನಾಗಿ ದೇವನ ಪ್ರಕಾಶದಿಂದ ಪೋಷಿಸಲ್ಪಟ್ಟು ಹೊಸದಾಗಿ ಪ್ರಕಟವಾಗುವಾಗ ಆಲಂಕಾರಿಕವಾಗಿ ಮೇಲಿನಂತಹ ಶಬ್ದಗಳನ್ನು ಆತನ ಬಗ್ಗೆ ಬಳಸುವುದು ಜ್ಞಾನಿಗಳ ಪುರಾತನ ವಿಧಾನವಾಗಿದೆ. ಆತನ ಮೂಲಕ ದೇವನೇ ಪ್ರಕಟವಾಗಿದ್ದಾನೆ ಎಂದು ಹೇಳಲಾಗುತ್ತದೆ. ಆದರೆ ಇದರ ಅರ್ಥ ಆತನು ಸಕಲ ಲೋಕಗಳ ಪ್ರಭುವಾದ ದೇವನೆಂದು ಅಲ್ಲ. ಈ ಸೂಕ್ಷ್ಮ ವಿಚಾರವನ್ನು ಮನವರಿಕೆ ಮಾಡುವುದರಲ್ಲಿ ಬಹುತೇಕ ಜನರು ವಿಫಲರಾಗುತ್ತಾರೆ. ಸಾವಿರಾರು ಹಿರಿಯರನ್ನು, ಸಂತರನ್ನು ಮತ್ತು ಅವತಾರ ಪುರುಷರನ್ನು ದೇವನನ್ನಾಗಿ ಮಾಡಲಾಗಿದೆ. ಅವರೆಲ್ಲರನ್ನು ಇಂತಹ ತಪ್ಪುಗಳಿಂದ ದೇವರನ್ನಾಗಿ ಮಾಡಲಾಗಿದೆ. ವಾಸ್ತವವೇನಂದರೆ, ಆಧ್ಯಾತ್ಮಿಕ ಮತ್ತು ದೈವಿಕ ವಿಷಯಗಳು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಕೊನೆಗೆ ಅದನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಆಲಂಕಾರಿಕ ಮಾತುಗಳನ್ನು ವಾಸ್ತವಿಕವೆಂದು ಪರಿಗಣಿಸಿ ಬಹಳ ದೊಡ್ಡ ತಪ್ಪು ಮಾಡುತ್ತಾರೆ ಮತ್ತು ದಾರಿತಪ್ಪಿ ಹೋಗುತ್ತಾರೆ.

ಇಂದಿನ ಕಾಲದ ಕ್ರೈಸ್ತಧರ್ಮ ಪಂಡಿತರು ಕೂಡ ಇಂತಹ ತಪ್ಪುಗಳಲ್ಲಿ ಸಿಕ್ಕಿ ಬಿದ್ದಿದ್ದಾರೆ ಮತ್ತು ಹಝ್ರತ್ ಮಸೀಹ್‌ರನ್ನು ಹೇಗಾದರೂ ದೇವವನ್ನಾಗಿ ಮಾಡಲು ಬಹಳಷ್ಟು ಪರಿಶ್ರಮಿಸುತ್ತಿದ್ದಾರೆ. ಹೀಗೆ ಮಾಡುವುದು ಸೃಷ್ಟಿಕರ್ತನ ಹಕ್ಕಿನ ಉಲ್ಲಂಘನೆಯಾಗಿದೆ. ಈ ಹಕ್ಕನ್ನು ಸ್ಥಾಪಿಸಲು ಮತ್ತು ತೌಹೀದಿನ (ಏಕದೇವ ವಿಶ್ವಾಸ) ಶ್ರೇಷ್ಠತೆಯನ್ನು ಹೃದಯಗಳಲ್ಲಿ ಸ್ಥಾಪಿಸಲು ಒಬ್ಬ ಮಹಾನುಭಾವ ಪ್ರವಾದಿ ಅರಬ್ ದೇಶದಲ್ಲಿ ಜನಿಸಿದರು. ಅವರ ಹೆಸರು ಮುಹಮ್ಮದ್(ಸ) ಮತ್ತು ಅಹ್ಮದ್ ಎಂದಾಗಿದೆ. ಅಲ್ಲಾಹನು ಅವರ ಮೇಲೆ ಅಸಂಖ್ಯಾತ ಅನುಗ್ರಹಗಳನ್ನು ವರ್ಷಿಸಲಿ.

ಧಾರ್ಮಿಕ ನಿಯಮಗಳು ಎರಡು ಭಾಗಗಳನ್ನು ಹೊಂದಿವೆ. ದೊಡ್ಡ ಭಾಗ – لَا إِلٰهَ إِلَّا اللّٰهُ – **ಲಾ ಇಲಾಹ ಇಲ್ಲಲ್ಲಾಹ್** (ಅಲ್ಲಾಹನ ಹೊರತು ಅನ್ಯ ದೇವನಿಲ್ಲ) ಎಂದರೆ ಏಕದೇವ ವಿಶ್ವಾಸವಾಗಿದೆ. ಇನ್ನೊಂದು ಭಾಗ ಮಾನವರ ಬಗ್ಗೆ ಸಹಾನುಭೂತಿ ತೋರಿಸುವುದು ಮತ್ತು ತಾನು ಇಷ್ಟಪಡುವುದನ್ನು ಇತರರಿಗೂ ಇಷ್ಟಪಡುವುದಾಗಿದೆ. ಮಾನವರಿಗೆ ಸಹಾನುಭೂತಿ ತೋರಿಸುವುದಕ್ಕೆ ಹಝ್ರತ್ ಈಸಾ ಮಸೀಹರು ಒತ್ತು ನೀಡಿದ್ದರು. ಏಕೆಂದರೆ ಅವರ ಕಾಲಘಟ್ಟ ಅದನ್ನೇ ಆವಶ್ಯಪಡುತ್ತಿತ್ತು. ಪ್ರಧಾನ ಭಾಗವಾದ – لَا إِلٰهَ إِلَّا اللّٰهُ – **ಲಾ ಇಲಾಹ ಇಲ್ಲಲ್ಲಾಹ್** ಎಂಬುದರ ಬಗ್ಗೆ ಎಂದರೆ ಏಕದೇವ ವಿಶ್ವಾಸ ಮತ್ತು ಅಲ್ಲಾಹನ ಮಹಿಮೆಯ ಉಗಮಸ್ಥಾನ ಮತ್ತು ಮೂಲದ ಬಗ್ಗೆ ಹಝ್ರತ್ ಮುಹಮ್ಮದ್(ಸ) ಒತ್ತು ನೀಡಿದರು. ಏಕೆಂದರೆ ಆ ಕಾಲಘಟ್ಟವು ಅದನ್ನೇ ಅವಶ್ಯಪಡುತ್ತಿತ್ತು.

ಅನಂತರ ನಾವೀಗ ಇರುವ ಕಾಲಘಟ್ಟ ಬಂತು. ಈ ಕಾಲದಲ್ಲಿ ಈ ಎರಡು ರೀತಿ ಕೆಡುಕುಗಳು ಅತ್ಯಧಿಕವಾಗಿವೆ. ಜನರ ಹಕ್ಕುಗಳನ್ನು ದೋಚುವುದು ಮತ್ತು ನಿರಪರಾಧಿಗಳನ್ನು ಕೊಲ್ಲುವುದು ಮುಸ್ಲಿಮರ ನಂಬಿಕೆಗಳಲ್ಲಿ ಸೇರಿಕೊಂಡಿವೆ. ಈ ತಪ್ಪು ನಂಬಿಕೆಯ ಕಾರಣ ಸಾವಿರಾರು ನಿರಪರಾಧಿಗಳು ಕೊಲ್ಲಲ್ಪಟ್ಟರು. ಮತ್ತೊಂದೆಡೆ ಸೃಷ್ಟಿಕರ್ತನ ಹಕ್ಕುಗಳನ್ನು ಕಡೆಗಣಿಸುವುದು ಮಿತಿಯನ್ನು ಮೀರಿದೆ. ಮನುಷ್ಯರು ಮತ್ತು ದೇವದೂತರು ಈಸಾ ಮಸೀಹ್‌ರನ್ನು ಆರಾಧಿಸಬೇಕು ಎಂಬುದು ಕ್ರೈಸ್ತಧರ್ಮದ ನಂಬಿಕೆಯಾಗಿ ಬಿಟ್ಟಿದೆ. ಕ್ರೈಸ್ತರು ಎಷ್ಟು ಮಿತಿಮೀರಿದ್ದಾರೆ ಎಂದರೆ, ಅವರು ತ್ರೀತ್ವವನ್ನು* ನಂಬುತ್ತಾರಾದರೂ ಅವರು ಈಸಾ ಮಸೀಹ್‌ರನ್ನು ಮಾತ್ರ ಆರಾಧಿಸುತ್ತಾರೆ. ಹೀಗೆ ಸೃಷ್ಟಿಗಳ ಮತ್ತು ಸೃಷ್ಟಿಕರ್ತನ ಹಕ್ಕುಗಳನ್ನು ಕಡೆಗಣಿಸುವಿಕೆ ಎಷ್ಟರ ತನಕ ತಲುಪಿದೆ ಎಂದರೆ, ಇವರೆಡರಲ್ಲಿ ಯಾವುದು ಹೆಚ್ಚು ಎಲ್ಲೆ ಮೀರಿದೆ ಎಂದು ಗೊತ್ತಾಗುತ್ತಿಲ್ಲ. ಆದುದರಿಂದ ಮನುಷ್ಯರ ಹಕ್ಕುಗಳ ಸಂರಕ್ಷಣೆಗಾಗಿ ಅಲ್ಲಾಹನು ನನ್ನನ್ನು ಹಝ್ರತ್ ಈಸಾ ಮಸೀಹರ ಸ್ವಭಾವಗುಣಗಳನ್ನು ಹೊಂದಿದ ಅವತಾರವನ್ನಾಗಿ ಮಾಡಿ ಕಳುಹಿಸಿದನು. ಅದೇ ರೀತಿಯಲ್ಲಿ ಅಲ್ಲಾಹನ ಹಕ್ಕುಗಳನ್ನು ಹಾನಿಗೊಳಿಸುವುದನ್ನು ತಡೆದು ಏಕದೇವ ವಿಶ್ವಾಸವನ್ನು ಸ್ಥಾಪಿಸಲು ಅಲ್ಲಾಹನು ನನಗೆ ಮುಹಮ್ಮದೀ ನಿಲುವಂಗಿ ಹೊದಿಸಿ ಹಝ್‌ರತ್ ಮುಹಮ್ಮದ್‌ರ(ಸ) ಸ್ವಭಾವಗುಣಗಳನ್ನು ಹೊಂದಿದ ಅವತಾರವನ್ನಾಗಿ ಮಾಡಿ ಕಳುಹಿಸಿದನು. ಈ ಅರ್ಥಗಳ ಪ್ರಕಾರ ನಾನು ಈಸಾ ಮಸೀಹ್ ಮತ್ತು ಮುಹಮ್ಮದ್ ಮಹ್‌ದೀ ಆಗಿರುವೆನು.

**ಮಸೀಹ್** ಎಂಬುದು ಹಝ್‌ರತ್ ಈಸಾರಿಗೆ(ಅ) ನೀಡಲ್ಪಟ್ಟ ಒಂದು ಬಿರುದಾಗಿದೆ. ಅದರ ಅರ್ಥ ಅಲ್ಲಾಹನನ್ನು ಸ್ಪರ್ಶಿಸುವವ ಮತ್ತು ದೈವಿಕ ಅನುಗ್ರಹದಿಂದ ಪಾಲು ಪಡೆಯುವವ ಹಾಗೂ ಅಲ್ಲಾಹನ ಖ಼ಲೀಫ (ಪ್ರತಿನಿಧಿ), ಸತ್ಯ ಮತ್ತು ನೇರಮಾರ್ಗವನ್ನು ಅವಲಂಬಿಸುವವ ಎಂದಾಗಿದೆ.

**ಮಹ್‌ದೀ** ಎಂಬುದು ಹಝ್‌ರತ್ ಮುಹಮ್ಮದ್‌ರಿಗೆ(ಸ) ನೀಡಲಾಗಿದ್ದ ಒಂದು ಬಿರುದಾಗಿದೆ. ಅದರ ಅರ್ಥ ಜನ್ಮತಃ ಮತ್ತು ಸ್ವಾಭಾವಿಕವಾಗಿಯೇ ಮಾರ್ಗದರ್ಶನ ಪಡೆದವ, ಎಲ್ಲ ಮಾರ್ಗದರ್ಶನಗಳ ವಾರಸುದಾರ ಮತ್ತು ಅಲ್ಲಾಹನ ಗುಣನಾಮವಾದ **ಹಾದೀ** (ಮಾರ್ಗದರ್ಶಕ) ಎಂಬುದರ ಸಂಪೂರ್ಣ ಪ್ರತಿಬಿಂಬ ಎಂದಾಗಿದೆ. ಅಲ್ಲಾಹನ ಅನುಗ್ರಹ ಮತ್ತು ಕೃಪೆಯು ನನ್ನನ್ನು ಈ ಕಾಲಘಟ್ಟದಲ್ಲಿ ಈ ಎರಡು ಬಿರುದುಗಳ ವಾರಸುದಾರನನ್ನಾಗಿ ಮಾಡಿದೆ ಮತ್ತು ಈ ಎರಡೂ ಬಿರುದುಗಳು

* ತ್ರೀತ್ವ ಅಥವಾ ಟ್ರಿನಿಟಿ: ಕ್ರಿಶ್ಚಿಯನ್ ದೈವತ್ವದ ಮೂರು ವ್ಯಕ್ತಿಗಳು: ಪಿತ, ಪುತ್ರ ಮತ್ತು ಪವಿತ್ರ ಆತ್ಮ.

ನನ್ನಲ್ಲಿ ಸೇರಿಕೊಂಡಿವೆ. ಆದ್ದರಿಂದ ಈ ಅರ್ಥಗಳ ಪ್ರಕಾರ ನಾನು ಈಸಾ ಮಸೀಹ್ ಮತ್ತು ಮುಹಮ್ಮದ್ ಮಹ್‌ದೀ ಆಗಿದ್ದೇನೆ. ನನ್ನ ಈ ರೀತಿಯ ಆಗಮನವನ್ನು ಇಸ್ಲಾಮೀ ಸಾಂಕೇತಿಕ ಪದದಲ್ಲಿ **'ಬುರೂಝ್'** ಎಂದು ಹೇಳಲಾಗುತ್ತದೆ. ನನಗೆ ಎರಡು ಬುರೂಝ್‌ಗಳು ಲಭಿಸಿವೆ. ಹಝ್ರತ್ ಈಸಾ ಮಸೀಹರ(ಅ) ಬುರೂಝ್ ಮತ್ತು ಹಝ್ರತ್ ಮುಹಮ್ಮದ್‌ರ(ಸ) ಬುರೂಝ್. ನಾನು ಬುರೂಝ್ ಅನುಸಾರ ಈ ಇಬ್ಬರು ಪ್ರವಾದಿಗಳ ಸಂಯುಕ್ತ ಮಿಶ್ರಣವಾಗಿದ್ದೇನೆ.

ಈಸಾ ಮಸೀಹರ ರೂಪದಲ್ಲಿ ನನ್ನ ಕೆಲಸ ಮುಸ್ಲಿಮರನ್ನು ಕ್ರೂರ ಆಕ್ರಮಣಗಳಿಂದಲೂ ರಕ್ತಪಾತದಿಂದಲೂ ತಡೆಯುವುದಾಗಿದೆ. ಇದರ ಬಗ್ಗೆ ಹದೀಸಿನಲ್ಲಿ ಹೀಗೆ ಬರೆಯಲಾಗಿದೆ: ಮಸೀಹ್ ಲೋಕಕ್ಕೆ ಪುನಃ ಆಗಮಿಸುವಾಗ ಎಲ್ಲ ರೀತಿಯ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸುವರು. ಹೀಗೆಯೇ ಆಗುತ್ತಾ ಇದೆ. ಇಂದಿನ ತನಕ ಮೂವತ್ತು ಸಾವಿರ ಅಥವಾ ಸ್ವಲ್ಪ ಹೆಚ್ಚು ಜನರು ನನ್ನ ಜಮಾಅತಿನಲ್ಲಿದ್ದಾರೆ*. ಅವರು ಬ್ರಿಟಿಷ್ ಇಂಡಿಯಾದ ವಿವಿಧ ಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ. ಮಸೀಹ್ ಆಗಮಿಸಿರುವ ಕಾರಣದಿಂದ ಈ ಕಾಲಘಟ್ಟದಲ್ಲಿ ಜಿಹಾದ್ ಪೂರ್ಣವಾಗಿಯೂ ನಿಷಿದ್ಧವೆಂದು ನನ್ನಲ್ಲಿ **ಬೈಅತ್*** ಮಾಡುವ ಮತ್ತು ನನ್ನನ್ನು ವಾಗ್ದತ್ತ ಮಸೀಹ್ ಎಂದು ನಂಬುವ ಪ್ರತಿಯೊಬ್ಬನು ಅಂಗೀಕರಿಸಬೇಕಾಗುತ್ತದೆ. ಅವರು ನನ್ನ ಉಪದೇಶ ಪ್ರಕಾರ ಈ ಆಂಗ್ಲೇಯ ಸರಕಾರದ ಸತ್ಯಸಂಧನಾದ ಹಿತೈಷಿ ಆಗಬೇಕಾಗುತ್ತದೆ. ಕೇವಲ ಕಾಪಟ್ಯದಿಂದ ಅಲ್ಲ. ಎಂತಹ ಸೌಹಾರ್ದದ ಧ್ವಜವನ್ನು ಸ್ಥಾಪಿಸಲಾಗಿದೆ ಎಂದರೆ ಹಿಂಸಾತ್ಮಕ ಜಿಹಾದನ್ನು ತಡೆಯಲಿಕ್ಕಾಗಿ ಇಂತಹ ಪರಿಣಾಮಕಾರಿ ಜಮಾಅತನ್ನು ಸ್ಥಾಪಿಸಲು ಒಂದು ಲಕ್ಷ ಮೌಲವಿಗಳು ಬಯಸುವುದಾದರೂ ಹಾಗೆ ಮಾಡಲು ಅವರಿಂದ ಸಾಧ್ಯವಾಗದು. ಅಲ್ಲಾಹನು ಇಚ್ಛಿಸಿದರೆ ಕೆಲವು ವರ್ಷಗಳಲ್ಲಿ ಈ ಅನುಗ್ರಹದಾಯಕ ಮತ್ತು ಶಾಂತಿಪ್ರಿಯ ಹಾಗೂ ಜಿಹಾದ್ ಮತ್ತು ಪರಾಕ್ರಮದ ಯೋಚನೆಗಳನ್ನು ಅಳಿಸುತ್ತಿರುವ ಈ ಜಮಾಅತಿನ ಜನಸಂಖ್ಯೆ ಅನೇಕ ಲಕ್ಷಗಳನ್ನು ತಲುಪುವುದು ಎಂದೂ ಹಿಂಸಾತ್ಮಕ ಜಿಹಾದ್ ಮಾಡುವವರು ತಮ್ಮ ನಿಲುವನ್ನು ಬದಲಾಯಿಸುವರು ಎಂದೂ ನಾನು ಪ್ರತೀಕ್ಷಿಸುತ್ತೇನೆ.

ಮುಹಮ್ಮದೀ ಮಹ್‌ದೀ ಎಂಬ ನೆಲೆಯಲ್ಲಿ ನನ್ನ ಕೆಲಸ ದೈವಿಕ ದೃಷ್ಟಾಂತಗಳ

* ಇವರ ಪೈಕಿ ವಿದ್ಯಾವಂತರು ಹತ್ತು ಸಾವಿರದಷ್ಟಿದ್ದಾರೆ. ಆದರೆ ಅವಿದ್ಯಾವಂತರೂ ಸಮೇತ ಎಲ್ಲ ವಿಧದ ಜನರ ಒಟ್ಟು ಸಂಖ್ಯೆ ಮೂವತ್ತು ಸಾವಿರಕ್ಕೂ ಹೆಚ್ಚಿರಬಹುದು.

* ಬೈಅತ್: ನಿಷ್ಠೆಯ ಪ್ರತಿಜ್ಞೆ; ಈ ಪ್ರತಿಜ್ಞೆಯ ಮೂಲಕ ಮಸೀಹ್ ಮೌಊದ್‌ರ(ಅ) ಜಮಾಅತಿನಲ್ಲಿ ಪ್ರವೇಶಿಸಲಾಗುತ್ತದೆ.

ಮೂಲಕ ಏಕದೇವ ವಿಶ್ವಾಸವನ್ನು ಲೋಕದಲ್ಲಿ ಪುನಃ ಸ್ಥಾಪಿಸುವುದಾಗಿದೆ. ಏಕೆಂದರೆ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್[ಸ] ದೈವಿಕ ದೃಷ್ಟಾಂತಗಳನ್ನು ತೋರಿಸುವ ಮೂಲಕ ಅಲ್ಲಾಹನ ವೈಭವ ಮತ್ತು ಶಕ್ತಿ ಸಾಮರ್ಥ್ಯಗಳನ್ನು ಅರಬ್ ದೇಶದ ವಿಗ್ರಹಾರಾಧಕರ ಹೃದಯಗಳಲ್ಲಿ ಸ್ಥಾಪಿಸಿದ್ದರು. ಇದೇ ರೀತಿಯಲ್ಲಿ ನನಗೆ **ರೂಹುಲ್ ಖುದ್‌ಸ್** (ಪವಿತ್ರಾತ್ಮ) ಮೂಲಕ ಸಹಾಯ ನೀಡಲಾಗಿದೆ. ಎಲ್ಲ ಪ್ರವಾದಿಗಳ ಮುಂದೆ ಪ್ರಕಟಗೊಳ್ಳುತ್ತಾ ಇದ್ದ, ಹಝ್ರತ್ ಮೂಸಾರಿಗೆ[ಅ] ತೂರ್ ಪರ್ವತದಲ್ಲಿ ಪ್ರಕಟಗೊಂಡ, ಹಝ್ರತ್ ಈಸಾ ಮಸೀಹ್‌ರಿಗೆ[ಅ] ಶಈರ್ ಪರ್ವತದಲ್ಲಿ ಉದಿಸಿದ ಮತ್ತು ಹಝ್ರತ್ ಮುಹಮ್ಮದ್‌ರಿಗೆ[ಸ] ಫಾರಾನಿನ ಪರ್ವತಗಳಲ್ಲಿ ಬೆಳಗಿದ ಆ ಶಕ್ತಿಶಾಲಿ ಪರಿಶುದ್ಧ ದೇವನು ನನ್ನ ಮೇಲೆ ಪ್ರಕಾಶ ಬೀರಿದನು ಮತ್ತು ನನ್ನೊಂದಿಗೆ ಮಾತನಾಡಿದನು. ಅವನು ಹೀಗೆ ಹೇಳಿದನು:

‘ಯಾರನ್ನು ಆರಾಧಿಸಲು ಎಲ್ಲ ಪ್ರವಾದಿಗಳನ್ನು ಕಳುಹಿಸಲಾಗಿದೆಯೋ ಆ ಉನ್ನತ ಅಸ್ತಿತ್ವ ನಾನಾಗಿರುವೆನು, ನಾನೊಬ್ಬನೇ ಸೃಷ್ಟಿಕರ್ತನೂ ಒಡೆಯನೂ ಆಗಿದ್ದೇನೆ, ನನಗೆ ಯಾವ ಸಹಭಾಗಿಯೂ ಇಲ್ಲ. ನಾನು ಹುಟ್ಟು, ಸಾವು ಇಲ್ಲದವನಾಗಿದ್ದೇನೆ.’

ಬಹುತೇಕ ಕ್ರೈಸ್ತರು ನಂಬುತ್ತಿರುವ ತ್ರೀತ್ವ, ಪಾಪಪರಿಹಾರ ಸಿದ್ಧಾಂತ ಮೊದಲಾದವು ಮಾನವ ನಿರ್ಮಿತ ತಪ್ಪುಗಳಾಗಿವೆ. ಅವು ವಾಸ್ತವಿಕ ಅಧ್ಯಾಪನೆಗಳಿಗೆ ವಿರುದ್ಧವಾಗಿವೆ ಎಂದು ನನಗೆ ತಿಳಿಸಲಾಗಿದೆ. ದೇವನು ತನ್ನ ಜೀವಂತ ವಚನಗಳ ಮೂಲಕ ನನಗೆ ನೇರವಾಗಿ ಹೀಗೆ ತಿಳಿಸಿದ್ದಾನೆ:

‘ನೀನು ದೇವನಿಂದ ಆಗಮಿಸಿದವನು ಎಂದು ನಾವು ಹೇಗೆ ಗೊತ್ತುಮಾಡುವುದು ಎಂದು ಜನರು ಪ್ರಶ್ನಿಸಿದರೆ ನೀನು ಹೇಳು: ನನ್ನ ಪರವಾಗಿ ಆಕಾಶದಲ್ಲಿ ದೃಷ್ಟಾಂತಗಳು ಕಾಣಿಸಿಕೊಂಡಿವೆ. ಅವುಗಳು ನನಗೆ ಸಾಕ್ಷ್ಯಗಳಾಗಿವೆ ಮತ್ತು ನನ್ನ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ಅದೃಶ್ಯ ಸಮಾಚಾರಗಳನ್ನು ನನಗೆ ಮೊದಲೇ ತಿಳಿಸಲಾಗುತ್ತದೆ. ದೇವನಿಗೆ ಹೊರತು ಬೇರೆ ಯಾರಿಗೂ ಗೊತ್ತಿಲ್ಲದ ರಹಸ್ಯಗಳು ಅವು ಪ್ರಕಟವಾಗುವುದಕ್ಕೆ ಮೊದಲೇ ನನಗೆ ತಿಳಿಸಲಾಗುತ್ತದೆ.’

ಇನ್ನೊಂದು ದೃಷ್ಟಾಂತವೇನೆಂದರೆ, ಪ್ರಾರ್ಥನೆಗಳ ಅಂಗೀಕಾರ, ಪ್ರಾರ್ಥನೆ ಸ್ವೀಕಾರವಾಗುವುದೆಂದು ಮೊದಲೇ ತಿಳಿಸುವುದು, ಮನುಷ್ಯನ ಜ್ಞಾನಕ್ಕೆ ಅತೀತವಾದ ಅದೃಶ್ಯ ಕಾರ್ಯಗಳ ಬಗ್ಗೆ ತಿಳಿಸುವುದು ಎಂಬೀ ವಿಷಯಗಳಲ್ಲಿ ನನ್ನೊಡನೆ ಸ್ಪರ್ಧಿಸಲು ಬರುವವನು ಸೋತು ಹೋಗುವನು. ಆತನು ಪೂರ್ವ ಅಥವಾ ಪಶ್ಚಿಮ ದೇಶದವನಾದರೂ ಸರಿ. ಜನರನ್ನು ಸತ್ಯದೇವನ ಕಡೆಗೆ ತರಲಿಕ್ಕಾಗಿ ನನಗೆ

ಈ ದೃಷ್ಟಾಂತಗಳು ನೀಡಲ್ಪಟ್ಟಿವೆ. ಅವನು ನಮ್ಮ ಶರೀರಗಳ ಮತ್ತು ಆತ್ಮಗಳ ದೇವನಾಗಿರುವನು. ಅವನ ಕಡೆಗೆಯೇ ನಮಗೆ ಮರಳಿ ಹೋಗಲಿಕ್ಕಿದೆ. ಯಾವ ಧರ್ಮದಲ್ಲಿ ದೈವಿಕ ಶಕ್ತಿ ಇಲ್ಲವೋ ಆ ಧರ್ಮ ನಿರರ್ಥಕ. ಎಲ್ಲ ಪ್ರವಾದಿಗಳು ಸತ್ಯ ಧರ್ಮದ ಚಿಹ್ನೆಯಾಗಿ ಹೇಳಿರುವುದೇನೆಂದರೆ ಅದರಲ್ಲಿ ದೈವಿಕ ಶಕ್ತಿ ಇರಬೇಕು.

ನೆನಪಿಡಬೇಕಾದ ಇನ್ನೊಂದು ವಿಷಯವೇನೆಂದರೆ, ಅಲ್ಲಾಹನು ನನಗೆ ನೀಡಿರುವ ಈ ಎರಡು ಹೆಸರುಗಳು ಇತ್ತೀಚಿಗೆ ಲಭಿಸಿದವುಗಳೇನೂ ಅಲ್ಲ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಪ್ರಕಟಿಸಲಾದ **'ಬರಾಹೀನೆ ಅಹ್ಮದಿಯಾ'** ಎಂಬ ನನ್ನ ಗ್ರಂಥದಲ್ಲಿ ದಿವ್ಯವಾಣಿಯಾಗಿ ಲಭಿಸಿದ ಈ ಎರಡು ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಈಸಾ ಮಸೀಹ್ ಮತ್ತು ಮುಹಮ್ಮದ್ ಮಹ್‌ದೀ ಎಂಬೀ ಹೆಸರುಗಳು ನನಗೆ ನೀಡಲ್ಪಟ್ಟಿದ್ದು ಮುಸ್ಲಿಮರಿಗೂ ಕ್ರೈಸ್ತರಿಗೂ ದೈವಿಕ ಸಂದೇಶ ತಲುಪಿಸಲಿಕ್ಕಾಗಿದೆ. ಹೃದಯಗಳಲ್ಲಿ ಸತ್ಯಾನ್ವೇಷಣೆ ಮಾಡುವ ಆಶೆ ಇರುತ್ತಿದ್ದರೆ ಮತ್ತು ಪರಲೋಕದ ಬಗ್ಗೆ ಭಯವಿರುತ್ತಿದ್ದರೆ ಎಷ್ಟು ಚೆನ್ನ! ಏಕೆಂದರೆ ಪ್ರತಿಯೊಬ್ಬ ಸತ್ಯಾನ್ವೇಷಿಗೆ ನನ್ನ ಮೂಲಕ ಸಮಾಧಾನ ಪಡೆಯಲಿಕ್ಕಾಗಿ ಸಂದರ್ಭ ನೀಡಲಾಗಿತ್ತು.

ತನ್ನೊಳಗೆ ದೈವಿಕ ಶಕ್ತಿಯನ್ನು ಹೊಂದಿರುವ ಮತ್ತು ಅಸಾಮಾನ್ಯ ಕಾರ್ಯಗಳ ಮೂಲಕ ಅಲ್ಲಾಹನ ಮುಖವನ್ನು ತೋರಿಸುವ ಧರ್ಮವೇ ಸತ್ಯಧರ್ಮವಾಗಿರುತ್ತದೆ. ಅಂತಹ ಧರ್ಮ ಏಕದೇವ ವಿಶ್ವಾಸದ ಧರ್ಮವಾದ ಇಸ್ಲಾಂ ಆಗಿದೆ ಎಂಬುದಕ್ಕೆ ನಾನು ದೃಕ್ ಸಾಕ್ಷಿಯಾಗಿದ್ದೇನೆ. ಇಸ್ಲಾಮ್ ಧರ್ಮದಲ್ಲಿ ಸೃಷ್ಟಿಗೆ ಸೃಷ್ಟಿಕರ್ತನ ಸ್ಥಾನವನ್ನು ನೀಡಲಾಗಿಲ್ಲ. ಕ್ರೈಸ್ತ ಧರ್ಮ ಸಹ ದೇವನಿಂದ ಆಗಮಿಸಿದ್ದೇ ಆಗಿತ್ತು. ಆದರೆ ಖೇದಕರವಾಗಿರುವುದೇನೆಂದರೆ, ಕ್ರೈಸ್ತರು ಈಗ ಮೂಲ ತತ್ವಗಳ ಮೇಲೆ ನೆಲೆನಿಂತಿಲ್ಲ. ಇಂದಿನ ಮುಸ್ಲಿಮರ ಬಗ್ಗೆಯೂ ದುಃಖವಾಗುತ್ತದೆ. ಏಕೆಂದರೆ, ಮನುಷ್ಯಕುಲದ ಮೇಲೆ ಸಹಾನುಭೂತಿ, ಪ್ರೀತಿ ಮತ್ತು ಸೇವೆಯನ್ನು ಪ್ರತಿಪಾದಿಸುವ ಶರೀಅತಿನ ಎರಡನೆಯ ಭಾಗದಿಂದ ಅವರು ವಂಚಿತರಾಗಿದ್ದಾರೆ. ಅವರು ಏಕದೇವ ವಿಶ್ವಾಸದ ವಾದವನ್ನು ಮಾಡಿಕೊಂಡು ಇಂತಹ ಕ್ರೂರ ಸ್ವಭಾವಗಳನ್ನು ಹೊಂದಿರುವರು ಎಂಬುದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಸ್ವಭಾವಗಳನ್ನು ಅವರಿಂದ ಬಿಡಿಸಲು ನಾನು ಅನೇಕ ಬಾರಿ ಪ್ರಯತ್ನಿಸಿದೆ. ಆದರೆ ಅವರಿಗೆ ಎಂತಹ ಉತ್ತೇಜನ ದೊರಕುತ್ತದೆ ಎಂದರೆ ಅದರಿಂದ ಅವರ ಕ್ರೂರ ಮನೋಭಾವ ಜೀವಂತವಾಗುತ್ತದೆ ಮತ್ತು ಕೆಲವು ಮೂಢರಾದ ಪಾದರಿಗಳ ಲೇಖನಗಳು ಅವರ ಮೇಲೆ ವಿಷಕಾರಿ ಪ್ರಭಾವವನ್ನು ಬೀರುತ್ತದೆ. ಉದಾಹರಣೆಗೆ, ಪಾದರಿ

ಇಮಾದುದ್ದೀನನ ಪುಸ್ತಕಗಳು, ಪಾದರಿ ಠಾಕುರ್‌ದಾಸನ ಪುಸ್ತಕಗಳು, ಸಫ್‌ದರ್ ಅಲಿಯ ಪುಸ್ತಕಗಳು, 'ಉಮ್ಮಹಾತುಲ್ ಮೂಮಿನೀನ್' ಎಂಬ ಪುಸ್ತಕ ಮತ್ತು ಪಾದರಿ ರೇವಾಡಿಯ ಪುಸ್ತಕ ನಮ್ಮ ಪೈಗಂಬರರ[ಸ] ವಿರುದ್ಧ ಅಪಮಾನಕರವೂ ಸುಳ್ಳುಗಳಿಂದ ತುಂಬಿದವೂ ಆಗಿವೆ. ಉನ್ನತ ಮಟ್ಟದ ಸಹನೆ ಮತ್ತು ತಾಳ್ಮೆ ಇಲ್ಲದ ಒಬ್ಬ ಮುಸ್ಲಿಮನು ಇಂತಹ ಪುಸ್ತಕಗಳನ್ನು ಓದಿದರೆ ಕೂಡಲೆ ಕೋಪಗೊಳ್ಳುವನು. ಏಕೆಂದರೆ ಈ ಪುಸ್ತಕಗಳಲ್ಲಿ ಪಂಡಿತೋಚಿತ ಚರ್ಚೆಗಳಿಗೆ ಬದಲಾಗಿ ಕಟುಭಾಷೆಯ ಪ್ರಯೋಗ ಬಹಳಷ್ಟಿದೆ. ಅದನ್ನು ಸಾಮಾನ್ಯ ಮುಸ್ಲಿಮರು ಸಹಿಸಲಾರರು. ಒಬ್ಬ ಗೌರವಾನ್ವಿತ ಪಾದರಿ ಲಕ್ನೋದಿಂದ ಪ್ರಕಟಗೊಳ್ಳುವ ತನ್ನ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ: 1857ರ ಘಟನೆಗಳು ಮರುಕಳಿಸಲು ಸಾಧ್ಯವಿರುವುದಾದರೆ ಅದು ಪಾದರಿ ಇಮಾದುದ್ದೀನನ ಪುಸ್ತಕಗಳಿಂದ ಬಡಿದೇಳಬಹುದಾಗಿದೆ. ಒಬ್ಬ ಗೌರವಾನ್ವಿತ ಪಾದರಿ ಇಂತಹ ಅಭಿಪ್ರಾಯ ಸೂಚಿಸುವುದಾದರೆ ಪಾದರಿ ಇಮಾದುದ್ದೀನನ ಪುಸ್ತಕಗಳು ಎಷ್ಟು ಅಪಾಯಕಾರಿ ಆಗಿರಬಹುದು ಎಂದು ಯೋಚಿಸಬಹುದಾಗಿದೆ. ಮುಸ್ಲಿಮರಲ್ಲಿ ಅಂತಹ ಪುಸ್ತಕಗಳ ಬಗ್ಗೆ ಇರುವ ಕೋಪಾವೇಶವನ್ನು ನೋಡಿ ನಾನು ಕೂಡ ಇತ್ತೀಚೆಗೆ ಕೆಲವು ಲೇಖನಗಳನ್ನು ಬರೆದು ಪ್ರಕಟಿಸಿದ್ದೆ. ಅವುಗಳಲ್ಲಿ ಆ ಕಟುಭಾಷೆಯ ಪುಸ್ತಕಗಳಿಗೆ ಸ್ವಲ್ಪ ಮಟ್ಟಿಗೆ ಕಟುವಾದ ಉತ್ತರ ನೀಡಲಾಗಿತ್ತು. ಮುಸ್ಲಿಮರ ಕೋಪ ತಣ್ಣಗಾಗಲಿ ಎಂಬ ಉದ್ದೇಶದಿಂದ ನಾನು ಹಾಗೆ ಬರೆದಿದ್ದೆ. ಇಂತಹ ವಿವೇಕಯುತ ಬರಹಗಳಿಂದ ಮುಸ್ಲಿಮರಿಗೆ ಪ್ರಯೋಜನ ಉಂಟಾಯಿತು ಮತ್ತು ಅವರಿಗೆ ಸಮಾಧಾನವಾಯಿತು. ಆದರೆ ಸಮಸ್ಯೆಯೇನೆಂದರೆ, ಈಗಲೂ ಪ್ರತಿದಿನ ಪಾದರಿಗಳು ಎಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಾರೆ ಎಂದರೆ, ಅವುಗಳನ್ನು ಸಂವೇದನಾಶೀಲ ಮತ್ತು ಮುಂಗೋಪಿ ಮುಸ್ಲಿಮರು ಸಹಿಸಲಾರರು.

ಭಯಾನಕವಾದುದೇನೆಂದರೆ, ಸದಾ ಮತ್ತು ಪ್ರತಿಯೊಂದು ಕಾಲಘಟ್ಟದಲ್ಲಿ ಜಿಹಾದ್ ಮಾಡಲು ಖುರ್‌ಆನ್ ಮುಸ್ಲಿಮರನ್ನು ಆಜ್ಞಾಪಿಸುತ್ತದೆ ಎಂದು ಪಾದರಿಗಳು ಸುಳ್ಳಾರೋಪ ಮಾಡುತ್ತಾರೆ. ಹೀಗೆ ಒಂದು ರೀತಿಯಲ್ಲಿ ಅವರು ಮುಸ್ಲಿಮರಿಗೆ ಜಿಹಾದ್ ಬಗ್ಗೆ ನೆನಪಿಸುತ್ತಾ ಇರುತ್ತಾರೆ. ಮತ್ತೊಂದೆಡೆ ಕಟು ಭಾಷೆಯಲ್ಲಿ ಲೇಖನಗಳನ್ನು ಬರೆದು ಮುಸ್ಲಿಮರನ್ನು ಕೆರಳಿಸುತ್ತಾರೆ. ಈ ಜನರು ಎಷ್ಟು ಅವಿವೇಕಿಗಳು ಎಂದು ಗೊತ್ತಾಗುತ್ತಿಲ್ಲ. ಈ ಎರಡು ವಿಧಗಳ ವರ್ತನೆಗಳು ಒಟ್ಟುಗೂಡುವಾಗ ಎಂತಹ ಅಪಾಯಕಾರಿ ಪರಿಣಾಮ ಉಂಟಾಗುವುದೆಂದು ಅವರು ಯೋಚಿಸುವುದಿಲ್ಲ.

ಇಂತಹ ಜಿಹಾದ್ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಖಂಡಿತವಾಗಿಯೂ ಆದೇಶವಿಲ್ಲ.

ಸತ್ಯವೇನೆಂದರೆ, ಇಸ್ಲಾಮಿನ ಆರಂಭದ ಕಾಲದಲ್ಲಿ ಕೆಲವು ವಿರೋಧಿಗಳು ಇಸ್ಲಾಮನ್ನು ಖಡ್ಗದಿಂದ ತಡೆಯಲು ಮತ್ತು ನಾಶಮಾಡಲು ಪ್ರಯತ್ನಿಸಿದರು. ಆಗ ಇಸ್ಲಾಮ್ ತನ್ನ ಸಂರಕ್ಷಣೆಗೋಸ್ಕರ ಅವರ ವಿರುದ್ಧ ಖಡ್ಗ ಪ್ರಯೋಗಿಸಿತು. ಅಂತಹ ಶತ್ರುಗಳು ಕೊಲ್ಲಲ್ಪಡಬೇಕು ಅಥವಾ ಇಸ್ಲಾಮಿಗೆ ಸೇರಬೇಕೆಂದು ಆಜ್ಞೆ ನೀಡಲಾಗಿತ್ತು. ಆ ಆಜ್ಞೆ ಆ ಕಾಲಕ್ಕೆ ಸೀಮಿತವಾಗಿತ್ತು. ಅದು ಶಾಶ್ವತ ಆಜ್ಞೆಯಾಗಿರಲಿಲ್ಲ.

ಹಝ್ರತ್ ಪೈಗಂಬರರ[ಸ] ಕಾಲದ ನಂತರ ದೊರೆಗಳು ತಪ್ಪಾಗಿ ಅಥವಾ ಸ್ವಾರ್ಥ ಲಾಭಕ್ಕೋಸ್ಕರ ಮಾಡಿದ ಕೆಲಸಗಳಿಗೆ ಇಸ್ಲಾಮ್ ಧರ್ಮ ಹೊಣೆಯಲ್ಲ. ಮುಸ್ಲಿಮರನ್ನು ಹಾದಿತಪ್ಪಿಸಲು ಪದೇ ಪದೇ ಜಿಹಾದ್ ಬಗ್ಗೆ ನೆನಪಿಸುವ ಅವಿವೇಕಿಯು ಈ ವಿಷಕಾರಿ ಪದ್ಧತಿಯನ್ನು ಬೆಂಬಲಿಸುವನ ಹಾಗೆ ಆಗಿರುತ್ತಾನೆ. ಇಂತಹ ಜಿಹಾದ್ ಮಾಡಲು ಮತ್ತು ಅನ್ಯ ಧರ್ಮದವರನ್ನು ಬಲಪ್ರಯೋಗಿಸಿ ಮುಸ್ಲಿಮರನ್ನಾಗಿ ಮಾಡಲು ಇಸ್ಲಾಮ್ ಆದೇಶ ನೀಡಿಲ್ಲವೆಂದು ಪಾದರಿಗಳು ಸತ್ಯಘಟನೆಗಳನ್ನು ಅವಲಂಬಿಸಿ ಹೇಳುತ್ತಿದ್ದರೆ ಎಷ್ಟು ಚೆನ್ನಾಗಿತ್ತು. ಯಾವ ಗ್ರಂಥದಲ್ಲಿ – لَآ اِكْرَاهَ فِى الدِّيْنِ – **ಲಾ ಇಕ್ರಾಹ ಫಿದ್ದೀನ್** – ಧರ್ಮದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ – **(ಪವಿತ್ರ ಖುರ್‌ಆನ್ 2:257)** ಎಂಬ ವಚನವಿದೆಯೋ ಅದು ಜಿಹಾದಿನ ಬೋಧನೆ ನೀಡುತ್ತದೆ ಎಂದು ಶಂಕಿಸಲು ಸಾಧ್ಯವೇ? ಒಟ್ಟಿನಲ್ಲಿ, ಸತ್ಯವಾದ ಮತ್ತು ಸರಕಾರದ ಚಟುವಟಿಕೆಗಳಿಗೆ ಪ್ರಯೋಜನಕರವಾದ ಮಾರ್ಗವನ್ನು ಸ್ವತಃ ಪಾದರಿಗಳು ಅನುಸರಿಸದೇ ಇರುವಾಗ ನಾವು ಹೇಗೆ ಮೌಲವಿಗಳನ್ನು ಮಾತ್ರ ದೂರಲು ಸಾಧ್ಯ? ಒಂದು ಪಕ್ಷದವರು ಇನ್ನೊಂದು ಪಕ್ಷದ ಧರ್ಮವನ್ನು ಆಕ್ಷೇಪಿಸುವ ಚರ್ಚೆಗಳನ್ನು ಸ್ವಲ್ಪ ಕಾಲಕ್ಕೆ ನಿಲ್ಲಿಸಬೇಕು ಎಂದು ನಾನು ಘನವೆತ್ತ ವೈಸ್‌ರಾಯ್‌ರೊಡನೆ ಎರಡು ಬಾರಿ ದುಃಖದಿಂದ ಮನವಿ ಮಾಡಿದ್ದೆ. ಆದರೆ ಇಲ್ಲಿಯ ವರೆಗೂ ಆ ಮನವಿಗಳನ್ನು ಗಮನಿಸಲಾಗಿಲ್ಲ. ಈಗ ನಾನು ಮೂರನೆಯ ಸಲ ತಮ್ಮೊಂದಿಗೆ ವಿನಂತಿಸುತ್ತೇನೆ. ಕನಿಷ್ಠ ಪಕ್ಷ ಐದು ವರ್ಷಗಳ ಕಾಲ ಒಂದು ಧರ್ಮದವರು ಇನ್ನೊಂದು ಧರ್ಮವನ್ನು ಆಕ್ಷೇಪಿಸುವುದನ್ನು ತಡೆಗಟ್ಟಬೇಕು. ಒಂದು ಧರ್ಮದವರ ನಂಬಿಕೆಗಳ ವಿರುದ್ಧ ಇನ್ನೊಂದು ಧರ್ಮದವರು ಆಕ್ರಮಣ ಮಾಡುವುದನ್ನು ಖಂಡಿತವಾಗಿಯೂ ನಿಷೇಧಿಸಬೇಕು. ಈ ಆಕ್ರಮಣಗಳಿಂದ ದೇಶದಲ್ಲಿ ದಂಗೆ ದಿನಂಪ್ರತಿ ವರ್ಧಿಸುತ್ತಾ ಹೋಗುತ್ತಿದೆ. ಎಷ್ಟರ ವರೆಗೆ ಎಂದರೆ ವಿವಿಧ ಸಮುದಾಯದವರು ಸ್ನೇಹಭಾವದೊಂದಿಗೆ ಭೇಟಿಯಾಗುವುದು ಕೂಡ ನಿಂತು ಹೋಗಿದೆ. ಕೆಲವೊಮ್ಮೆ ಒಂದು ಪಕ್ಷದವರು ಮತ್ತೊಂದು ಪಕ್ಷದ ವಿರುದ್ಧ ಅಲ್ಪಜ್ಞಾನದಿಂದ ನಿರಾಧಾರ ಆಕ್ಷೇಪ ಮಾಡಿ ಅವರ ಮನನೋಯಿಸುತ್ತಾರೆ. ಕೆಲವೊಮ್ಮೆ

ಇದರಿಂದ ಹಿಂಸಾಚಾರ ಪ್ರಾರಂಭವಾಗುತ್ತದೆ. ಉದಾಹರಣೆಗೆ, ಮುಸ್ಲಿಮರ ವಿರುದ್ಧ ಜಿಹಾದ್ ಬಗ್ಗೆ ಆಕ್ಷೇಪ ಮಾಡಲಾಗುತ್ತದೆ. ಇಂತಹ ಆಕ್ಷೇಪವು ಮರೆತು ಬಿಟ್ಟದನ್ನು ನೆನಪಿಸುತ್ತದೆಯಲ್ಲದೆ ಗಲಭೆ ಗೊಂದಲಗಳಿಗೆ ಕಾರಣವಾಗುತ್ತದೆ.

ಆದ್ದರಿಂದ ನಮ್ಮ ಬುದ್ಧಿಶಾಲಿ ಸರಕಾರ ಐದು ವರ್ಷಗಳಿಗೆ ಕಾನೂನು ಜಾರಿಗೊಳಿಸಿ ಪಾದರಿಗಳು ಸಮೇತ ಬ್ರಿಟಿಷ್ ಇಂಡಿಯಾದ ಎಲ್ಲ ಪಂಗಡಗಳ ಜನರನ್ನು ಯಾವುದೇ ಧರ್ಮದ ಮೇಲೆ ಆಕ್ರಮಣ ಮಾಡುವುದರಿಂದ ತಡೆಯಬೇಕು; ಎಲ್ಲ ಧರ್ಮದವರು ಪರಸ್ಪರ ಪ್ರೀತಿ ಮತ್ತು ಸಭ್ಯತೆಯಿಂದ ಭೇಟಿಯಾಗುವಂತೆ ಮಾಡಬೇಕು ಹಾಗೂ ಪ್ರತಿಯೊಬ್ಬನು ತನ್ನ ಧರ್ಮದ ಒಳಿತುಗಳನ್ನು ವಿವರಿಸಲು ಬೆಂಬಲಿಸಬೇಕು.

ಹೀಗೆ ಮಾಡಿದರೆ ಒಳಗಿಂದೊಳಗೆ ಬೆಳವಣಿಗೆ ಪಡೆಯುತ್ತಾ ಇರುವ ಒಡಕು ಮತ್ತು ಹಗೆಯ ಈ ವಿಷಕಾರಿ ಗಿಡ ಬೇಗನೇ ನಾಶವಾಗುವುದು. ಸರಕಾರದ ಈ ಕೆಲಸ ಗಮನಾರ್ಹವಾಗಿ ಗಡಿನಾಡಿನ ಜನರ ಮೇಲೆ ನಿಸ್ಸಂಶಯವಾಗಿ ಪ್ರಭಾವ ಬೀರುವುದು ಹಾಗೂ ಶಾಂತಿ ಸೌಹಾರ್ದತೆ ಉಂಟಾಗುವುದು. ಯುದ್ಧ ಮತ್ತು ಜಗಳ ಕೊನೆಗೊಳ್ಳಬೇಕು ಹಾಗೂ ಸೌಹಾರ್ದ ಮತ್ತು ಪರಸ್ಪರ ಪ್ರೀತಿಯ ಮಾರ್ಗ ತೆರೆಯಲ್ಪಡಬೇಕು ಎಂಬುದೇ ಅತ್ಯುನ್ನತನಾದ ದೇವನ ಇಚ್ಛೆಯಾಗಿದೆ. ಯಾವುದಾದರೂ ಧರ್ಮದಲ್ಲಿ ಏನಾದರೂ ಸತ್ಯವಿದ್ದರೆ ಅದನ್ನು ಬಹಿರಂಗಗೊಳಿಸಬೇಕು. ಅನ್ಯಧರ್ಮದ ದೋಷಗಳನ್ನು ಎಣಿಸುವ ಕೆಲಸ ಮಾಡಬಾರದು. ನಾನು ಸಮರ್ಪಿಸಿದ ಸಲಹೆಗಳನ್ನು ಅಂಗೀಕರಿಸಿ ಕಾರ್ಯಗತಗೊಳಿಸುವುದು ಪ್ರತಿಯೊಬ್ಬ ಅಧಿಕಾರಿಗೆ ಸಾಧ್ಯವಾಗುವಂತಹದ್ದಲ್ಲ. ಬುದ್ಧಿಶಾಲಿಗಳಾದ ಅಧಿಕಾರಿಗಳು ಮಾತ್ರ ಇದರ ಮಹತ್ವವನ್ನು ಮನವರಿಕೆ ಮಾಡುವರು. ನಮ್ಮ ಘನವೆತ್ತ ವೈಸ್‌ರಾಯ್ ಲಾರ್ಡ್ ಕರ್ಝನ್ ತಮ್ಮ ವಿಶಾಲ ಮನೋಭಾವ ಮತ್ತು ವಿವೇಕದಿಂದ ನನ್ನ ಈ ಸಲಹೆಗಳನ್ನು ಪರಿಗಣಿಸುವರು ಮತ್ತು ತನ್ನ ಅಧಿಕಾರವನ್ನು ಬಳಸಿ ಇದನ್ನು ಜಾರಿಗೊಳಿಸುವರು ಎಂದು ನಾನು ಆಶಿಸುತ್ತೇನೆ.

ಇದು ಸಾಧ್ಯವಿಲ್ಲವೆಂದಾದರೆ, ಕನಿಷ್ಠ ಪಕ್ಷ ನಿಮ್ಮ ಆಡಳಿತ ಕಾಲದಲ್ಲಿ ದೇವನ ಸಲುವಾಗಿ ಈ ದೇಶದಲ್ಲಿರುವ ಧರ್ಮಗಳಲ್ಲಿ ಯಾವ ಧರ್ಮಕ್ಕೆ ದೈವಿಕ ಶಕ್ತಿ ಇದೆ ಎಂದು ತಿಳಿಯಲು ಎಲ್ಲ ಧರ್ಮಗಳನ್ನು ಸ್ವತಃ ಪರೀಕ್ಷಿಸಿರಿ. ಅವರವರ ಧರ್ಮದಲ್ಲಿ ದೈವಿಕ ಶಕ್ತಿ ಇದ್ದರೆ ಅದಕ್ಕೆ ಪುರಾವೆಗಳನ್ನು ಭವಿಷ್ಯವಾಣಿಯ ರೂಪದಲ್ಲಿ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ತೋರಿಸಿಕೊಡಲು ಇಸ್ಲಾಂ, ಆರ್ಯಸಮಾಜ, ಸಿಖ್, ಸನಾತನ ಧರ್ಮ, ಕ್ರೈಸ್ತಧರ್ಮ, ಬ್ರಹ್ಮ ಸಮಾಜ, ಯಹೂದ ಧರ್ಮ ಮೊದಲಾದ

ಧರ್ಮಗಳ ಧರ್ಮಪಂಡಿತರ ಹೆಸರಲ್ಲಿ ಆಜ್ಞೆ ಜಾರಿಗೊಳಿಸಿರಿ. ಅನಂತರ ಯಾವ ಧರ್ಮದಲ್ಲಿ ಅತ್ಯಂತ ಬಲಿಷ್ಠವಾದ ದೈವಿಕ ಶಕ್ತಿಯಿದೆ ಎಂದು ಸಾಬೀತಾಗುತ್ತದೋ ಆ ಧರ್ಮವನ್ನು ಗೌರವಾರ್ಹವೆಂದೂ ಸತ್ಯವೆಂದೂ ಗಣಿಸಬೇಕು. ನನಗೆ ಆಕಾಶದಿಂದ ಈ ಕೆಲಸಕ್ಕೋಸ್ಕರ ಆತ್ಮಶಕ್ತಿ ಲಭಿಸಿರುವುದರಿಂದ ನನ್ನ ಜಮಾಅತ್ ಪರವಾಗಿ ಎಲ್ಲರಿಗಿಂತ ಮೊದಲು ಇತರ ಪಂಗಡಗಳೊಡನೆ ಸ್ಪರ್ಧಿಸಲು ನಾನು ಸಿದ್ದನಾಗಿದ್ದೇನೆ. ನಮ್ಮ ಈ ಸರಕಾರಕ್ಕೆ ದೇವನು ಸದಾ ಸಮೃದ್ಧಿಯನ್ನು ದಯಪಾಲಿಸಲಿ ಎಂದು ಸಹ ನಾನು ಪ್ರಾರ್ಥಿಸುತ್ತೇನೆ. ಏಕೆಂದರೆ ನಾವು ದೇವನ ಪರವಾಗಿ ನಿಂತುಕೊಂಡು ದೇವನ ಪ್ರತಾಪ ಪ್ರಕಟಿಸಲಿಕ್ಕಾಗಿ ಇಂತಹ ಸಲಹೆಗಳನ್ನು ಸಲ್ಲಿಸಲು ಈ ಸರಕಾರದ ನೆರಳಿನಡಿಯಲ್ಲಿ ಇದ್ದುಕೊಂಡು ಸಾಧ್ಯವಾಗಿದೆ.

ವಸ್ಸಲಾಮ್

7–7–1900

**ಮಿರ್ಝಾ ಗ಼ುಲಾಮ್ ಅಹ್ಮದ್**

ಖಾದಿಯಾನ್

# ಪದಕೋಶ

**ಅಲ್ಲಾಹ್:** ಇಸ್ಲಾಂ ಧರ್ಮದಲ್ಲಿ ದೇವನನ್ನು ಕರೆಯಲಾಗುವ ಪದ.

**ಹಝ್ರತ್:** ಸಾತ್ವಿಕರಾದ ವ್ಯಕ್ತಿಗಳ ಹೆಸರುಗಳನ್ನು ಗೌರವ ಸೂಚಕವಾಗಿ ಕರೆಯುವಾಗ ಉಪಯೋಗಿಸುವ ಪದ. ಸನ್ಮಾನ್ಯ ಎಂಬ ಪದಕ್ಕೆ ಸಮಾನಾರ್ಥವನ್ನು ಹೊಂದಿರುವ ಪದ.

**ಹಝ್ರತ್ ಮುಹಮ್ಮದ್(ಸ):** ಇಸ್ಲಾಂ ಧರ್ಮದ ಸ್ಥಾಪಕರು.

**ಹಝ್ರತ್ ಪೈಗಂಬರ್(ಸ):** ಇಸ್ಲಾಂ ಧರ್ಮದ ಸ್ಥಾಪಕರನ್ನು ಹೀಗೆ ಕರೆಯಲಾಗುತ್ತದೆ.

**(ಸ)** – ಸಲ್ಲಲ್ಲಾಹು ಅಲೈಹಿ ವಸಲ್ಲಂ ಎಂಬುದರ ಹ್ರಸ್ವ ರೂಪ. ಅಲ್ಲಾಹನ ಇಷ್ಟಾರ್ಶಿವಾದಗಳು ಹಝ್ರತ್ ಪೈಗಂಬರರ ಮೇಲೆ ವರ್ಷಿಸಲಿ ಎಂದಾಗಿದೆ ಇದರ ಅರ್ಥ.

**(ಅ)** – ಅಲೈಹಿಸ್ಸಲಾಂ ಎಂಬುದರ ಹ್ರಸ್ವ ರೂಪ: ಪ್ರವಾದಿಗಳ ಹೆಸರು ಹೇಳಲ್ಪಡುವಾಗ ಮಾಡುವ ಪ್ರಾರ್ಥನೆ. ಅವರ ಮೇಲೆ ಶಾಂತಿ ಇರಲಿ ಎಂದಾಗಿದೆ ಇದರ ಅರ್ಥ.

**(ರ)** – ರಝಿಯಲ್ಲಾಹು ಅನ್‌ಹು ಎಂಬುದರ ಹ್ರಸ್ವ ರೂಪ: ಸಾಮಾನ್ಯವಾಗಿ ಹಝ್ರತ್ ಪೈಗಂಬರರ(ಸ) ಅನುಚರರ ಹೆಸರುಗಳ ಜೊತೆಗೆ ಹೇಳಲಾಗುತ್ತದೆ. ಅಲ್ಲಾಹನು ಅವರ ಮೇಲೆ ಸಂಪ್ರೀತನಾದನು ಎಂದಾಗಿದೆ ಅದರ ಅರ್ಥ.

**ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್(ಅ)**: ವಾಗ್ದತ್ತ ಮಹ್‌ದೀ ಮತ್ತು ಮಸೀಹ್

**ಮಸೀಹ್ ಮೌಊದ್:** ವಾಗ್ದತ್ತ ಮಸೀಹ್

**ವಾಗ್ದತ್ತ ಮಹ್‌ದೀ ಮತ್ತು ಮಸೀಹ್**: ಇಸ್ಲಾಮಿನ ಅವನತಿಯ ಕಾಲದಲ್ಲಿ ಅದರ ಸುಧಾರಣೆಗಾಗಿ ಆಗಮಿಸುವರು ಎಂದು ಯಾವ ಮಹಾನ್ ವ್ಯಕ್ತಿಯ ಬಗ್ಗೆ ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರೋ ಆ ವ್ಯಕ್ತಿ. ಭವಿಷ್ಯವಾಣಿ ಪ್ರಕಾರ ಭಾರತದ ಖಾದಿಯಾನಿನಲ್ಲಿ ಅವರ ಆಗಮನವಾಯಿತು.

**ಖಾದಿಯಾನ್**: ಪಂಜಾಬ್ ರಾಜ್ಯದ ಗುರುದಾಸಪುರ ಜಿಲ್ಲೆಯಲ್ಲಿರುವ ಒಂದು ಊರು. ವಾಗ್ದತ್ತ ಮಹ್‌ದೀ ಮತ್ತು ಮಸೀಹ್ ಆದ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್ ಜನಿಸಿದ ಗ್ರಾಮ.

**ಹದೀಸ್:** ಹಝ್ರತ್ ಪೈಗಂಬರ್(ಸ)ರ ನಡೆನುಡಿಗಳು. ಅವುಗಳನ್ನು ಸುಮಾರು ನೂರೈವತ್ತು ವರ್ಷಗಳ ನಂತರ ಕ್ರೋಢೀಕರಿಸಲಾಗಿತ್ತು. ಆದ್ದರಿಂದ ಅವುಗಳು ಪವಿತ್ರ ಖುರ್‌ಆನಿನಷ್ಟು ವಿಶ್ವಾಸಾರ್ಹವಲ್ಲ.

**ಸಹೀಹ್ ಬುಖಾರಿ:** ಹಝ್ರತ್ ಇಮಾಂ ಮುಹಮ್ಮದ್ ಬಿನ್ ಇಸ್ಮಾಯೀಲ್ ಬುಖಾರಿ ಸಂಕಲಿಸಿದ ಹದೀಸುಗಳನ್ನು ಒಳಗೊಂಡ ಗ್ರಂಥ. ಇದನ್ನು ಪವಿತ್ರ ಖುರ್‌ಆನಿನ ನಂತರ ಅತ್ಯಂತ ಪ್ರಬಲ ಮತ್ತು ಅಧಿಕೃತವೆಂದು ಮುಸ್ಲಿಮರು ನಂಬುತ್ತಾರೆ.

**ಅಧ಼ಾನ್:** ನಮಾಝ್ ಪ್ರಾರ್ಥನೆಗಾಗಿ ನೀಡಲಾಗುವ ಕರೆ. ಬಾಂಗ್.

**ಅಹ್ಮದಿಯಾ ಮುಸ್ಲಿಂ ಜಮಾಅತ್:** ವಾಗ್ದತ್ತ ಮಹ್‌ದಿ ಮತ್ತು ಮಸೀಹ್ ಆದ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್‌ರ(ಅ) ವಾದವನ್ನು ನಂಬುವ ಸಮುದಾಯ. ಈ ಜಮಾಅತಿನ ಸದಸ್ಯರನ್ನು ಅಹ್ಮದಿಯಾ ಮುಸ್ಲಿಮರು ಎಂದು ಕರೆಯಲಾಗುತ್ತದೆ.

ಅಮೀರ್: ಅಫ್ಘಾನಿಸ್ತಾನದ ಅರಸ. ಸಾಮಾನ್ಯವಾಗಿ ಅಮೀರ ಎಂಬುದರ ಅರ್ಥ ನಾಯಕ ಎಂದಾಗಿದೆ.

**ಅವತಾರ:** ಆಧ್ಯಾತ್ಮಿಕ ಪುನರಾಗಮನ ಎಂಬರ್ಥದಲ್ಲಿ ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ. ಶಾರೀರಿಕ ಪುನರ್ಜನ್ಮವನ್ನು ಇಲ್ಲಿ ಸೂಚಿಸಲಾಗಿದೆ.
**ಬುರೂಝ್:** ಪುನರಾಗಮನ; ಪ್ರತಿರೂಪ.

**ದಜ್ಜಾಲ್:** ಮಹಾ ಮೋಸಗಾರ, ಸುಳ್ಳುಗಾರ. ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯನ್ನು ವಿರೋಧಿಸುವ ಪೈಶಾಚಿಕ ಶಕ್ತಿಗಳು.

ದಾರುಲ್ ಹರ್‌ಬ್, ದಾರುಲ್ ಇಸ್ಲಾಂ: ಮುಸ್ಲಿಮರ ಆಳ್ವಿಕೆಯಲ್ಲಿರುವ ದೇಶವನ್ನು ದಾರುಲ್ ಇಸ್ಲಾಂ ಎಂದೂ ಮುಸ್ಲಿಮೇತರರ ಅಧೀನದಲ್ಲಿ ಇರುವ ದೇಶವನ್ನು ದಾರುಲ್ ಹರ್‌ಬ್ ಎಂದು ಕೆಲವು ಮೌಲ್ವಿಗಳು ಹೇಳುತ್ತಾರೆ. ಇದು ಸರಿಯಲ್ಲವೆಂದು ಮಸೀಹ್ ಮೌಊದ್[ಅ] ಇದರಲ್ಲಿ ಸೂಚಿಸಿದ್ದಾರೆ.

**ಫತ್ವಾ:** ಯಾವುದಾದರೂ ವಿಷಯದಲ್ಲಿ ಇಸ್ಲಾಮಿಕ ಪಂಡಿತರು ಹೊರಡಿಸುವ ಅಭಿಪ್ರಾಯ ಅಥವಾ ತೀರ್ಪು.

**ಗಡಿನಾಡು ಪ್ರದೇಶ:** ಮುಖ್ಯವಾಗಿ ಅಫ್ಘಾನಿಸ್ತಾನದ ಪ್ರದೇಶ.

**ಗ಼ಾಝಿ಼:** ಧಾರ್ಮಿಕ ಯುದ್ಧದಲ್ಲಿ ಭಾಗವಹಿಸುವ ಯೋಧ.

**ಪವಿತ್ರ ಖುರ್‌ಆನ್:** ಮಾನವನ ಮಾರ್ಗದರ್ಶನಕ್ಕಾಗಿ ಅಲ್ಲಾಹನು ಪ್ರವಾದಿ ಮುಹಮ್ಮದ್ ಪೈಗಂಬರ್‌ರಿಗೆ(ಸ) 23 ವರ್ಷಗಳ ಕಾಲಾವಧಿಯಲ್ಲಿ ಅವತೀರ್ಣಗೊಳಿಸಿದ ಗ್ರಂಥ.

**ಜಿಹಾದ್:** ಕಠಿಣ ಪ್ರಯತ್ನ ಮಾಡುವುದು. ವಿಶಿಷ್ಟವಾಗಿ ಸ್ವಂತ ಆತ್ಮವನ್ನು ಪರಿಶುದ್ಧಗೊಳಿಸುವುದಕ್ಕೆ ಮತ್ತು ಕೆಲವೊಮ್ಮೆ ಧಾರ್ಮಿಕ ಯುದ್ಧಕ್ಕಾಗಿ ಈ ಪದವನ್ನು ಬಳಸಲಾಗುತ್ತದೆ. ಇಸ್ಲಾಮಿಕ ಜಿಹಾದಿನ ನೈಜ ಅರ್ಥವನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ.

**ಖಿ಼ಲಾಫತ್, ಖ಼ಲೀಫ:** ಉತ್ತರಾಧಿಕಾರಿ. ಪ್ರವಾದಿಯ ನಿಧನದ ನಂತರ ಸಮುದಾಯಕ್ಕೆ ನೇತೃತ್ವ ವಹಿಸುವ ನಾಯಕ.

**ಮೌಲವಿ, ಮುಲ್ಲಾ:** ಇಸ್ಲಾಮಿನ ಧರ್ಮಗುರು.

**ಮುಜದ್ದಿದ್:** ಇಸ್ಲಾಂ ಧರ್ಮದ ಸುಧಾರಕರಿಗೆ ಉಪಯೋಗಿಸಲಾಗುವ ಪದ. ಪ್ರತಿಯೊಂದು ಶತಮಾನದ ಆರಂಭದಲ್ಲಿ ಮುಜದ್ದಿದರು ಆಗಮಿಸುವರು ಎಂದು ಪೈಗಂಬರ್(ಸ) ಭವಿಷ್ಯ ನುಡಿದಿದ್ದರು.

**ಪಶ್ತೋ:** ಗಡಿಪ್ರದೇಶದಲ್ಲಿ ಮಾತನಾಡಲಾಗುವ ಭಾಷೆ.

**ಸಾಹಿಬ್:** ಸನ್ಮಾನ್ಯ; ಗೌರವ ಸೂಚಕವಾಗಿ ಬಳಸಲಾಗುವ ಪದ.

**ನಮಾಝ಼್:** ಮುಸ್ಲಿಮರು ಐದು ಹೊತ್ತು ನಿರ್ವಹಿಸುವ ಪ್ರಾರ್ಥನೆ.

**ಶರೀಅತ್:** ದೈವಿಕ ನಿಯಮಸಂಹಿತೆ.

**ತೌಹೀದ್:** ಏಕದೇವ ವಿಶ್ವಾಸ.

**ವಲೀ:** ಸ್ನೇಹಿತ. ಸಾಂಕೇತಿಕ ಪದದಲ್ಲಿ ಸಂತ ಅಥವಾ ಸಾತ್ವಿಕ ವ್ಯಕ್ತಿ.

**ಮಸೀಹುಬ್ನು ಮರ್‌ಯಮ್:** ಈಸಾ ಮಸೀಹ್ ಅಥವಾ ಯೇಸುಕ್ರಿಸ್ತ.